ಕೇವಲ 15 ನಿಮಿಷಗಳಲ್ಲಿ ಪಾಸ್‌ಪೋರ್ಟ್ ಸೈಜ್ ಡಿಜಿಟಲ್ ಫೋಟೋ

**ಶ್ರೀ ವೆಂಕಟೇಶ್ವರ**



ಡಿಜಿಟಲ್ ಕಲರ್ ಲ್ಯಾಬ್ ಮತ್ತು ಸ್ಟುಡಿಯೋ

ಗಾಂಧಿ ಸರ್ಕಲ್ ಹತ್ತಿರ, ಪಿ.ಬಿ.ರಸ್ತೆ, ದಾವಣಗೆರೆ

☎ : 272224



# ಜನತಾವಾಣಿ

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ, ಧಾರವಾಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಅತ್ಯಧಿಕ ಪ್ರಸಾರವುಳ್ಳ ಮಧ್ಯ ಕರ್ನಾಟಕದ ಏಕೈಕ ಪತ್ರಿಕೆ

ಸಂಸ್ಥಾಪಕ ಸಂಪಾದಕರು : ಹೆಚ್.ಎನ್.ಷಡಾಕ್ಷರಪ್ಪ    ಸಂಪಾದಕರು : ಎಂ.ಎಸ್.ವಿಕಾಸ್

ವೆಬ್ ಸೈಟ್ : www.janatavani.com    ಈ ಮೇಲ್ : janathavani@mac.com

ಸಂಪುಟ : 38    ಸಂಚಿಕೆ : 271    ನೋಂದಣಿ ಸಂಖ್ಯೆ : 27369/75    ಕೆಎಎಸ್‌ಕೆಸಿಟಿಎಲ್ : 275/2009-11    ಭಾನುವಾರ ಫೆಬ್ರವರಿ 12, 2012    ದಾವಣಗೆರೆ ದೂರವಾಣಿ : 254736, 231016    ಫ್ಯಾಕ್ಸ್ : 254609    ಪುಟ : 8    ರೂ : 2-50






SUITINGS & SHIRTINGS

Door No. 83, 84, Near Trishul Talkies, P.B.Road, Davangere -2. Ph : 08192 - 250468


# ದಾವಣಗೆರೆ ಎರಡನೇ ರಾಜಧಾನಿ ಆಗಲು ಅರ್ಹ

**ಹೊಸ ಜಿಲ್ಲೆಯಾಗಿ ಸಾಕಷ್ಟು ಅಭಿವೃದ್ಧಿ ಕಂಡಿರುವ ದಾವಣಗೆರೆಯನ್ನು ಎರಡನೇ ರಾಜಧಾನಿಯನ್ನಾಗಿ ಮಾಡಲು ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡೋಣ.**

## ದಾವಣಗೆರೆ ಹಬ್ಬದಲ್ಲಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ




ದಾವಣಗೆರೆ, ಫೆ. 11 - ನಗರದ ಪ್ರೌಢಶಾಲಾ ಮೈದಾನದಲ್ಲಿಂದು ಸಂಜೆ ದಾವಣಗೆರೆ ಹಬ್ಬಕ್ಕೆ ಸಚಿವ ಎಸ್.ಎ.ರವೀಂದ್ರನಾಥ್ ಚಾಲನೆ ನೀಡಿದರು.

ಜಿಲ್ಲಾಧಿಕಾರಿ ಪಟ್ಟಣಶೆಟ್ಟಿಯವರು ತಮ್ಮ ಸ್ವಾಗತ ಭಾಷಣದಲ್ಲಿ, ದಾವಣಗೆರೆ 1807ರಲ್ಲಿ 500 ಮನೆ ಹೊಂದಿತ್ತು. 19ನೇ ಶತಮಾನಕ್ಕೆ ರಾಷ್ಟ್ರೀಯ ಹೆದ್ದಾರಿ, ರೈಲ್ವೆ ಮಾರ್ಗ ಕಂಡಿತು ಎಂದು ದಾವಣಗೆರೆ ಬೆಳೆದು ಬಂದ ದಾರಿ ಬಗ್ಗೆ ವಿವರಿಸುತ್ತಾ, ದಾವಣಗೆರೆ ರಾಜ್ಯದ ಕೇಂದ್ರ ಬಿಂದವಾಗಿದ್ದು, ಎರಡನೇ ರಾಜಧಾನಿ ಆಗುವ ಎಲ್ಲಾ ಅರ್ಹತೆ ಪಡೆದುಕೊಂಡಿದೆ ಎಂದು ಹೇಳಿದರು.

ಶಾಸಕ ಮಾಡಾಳ್ ವಿರೂಪಾಕ್ಷಪ್ಪನವರು ಮಾತನಾಡುತ್ತಾ, ಜಿಲ್ಲಾ ಹಬ್ಬ ದಿ॥ ಜೆ.ಹೆಚ್. ಪಟೇಲರ ನೆನಪಿನ ಹಬ್ಬ. ಹಿಂದೆ ಬಾದಾಮಿ ಚಾಲುಕ್ಯರ ಆಳ್ವಿಕೆಯಲ್ಲಿ ರಾಜಧಾನಿ ಆದಂತೆ, ಅರಸರ ಆಳ್ವಿಕೆಯಲ್ಲಿ ಮೈಸೂರು ಆಯಿತು. ನಂತರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬೆಂಗಳೂರು ರಾಜಧಾನಿ ಆಯಿತು ಎಂದು ರಾಜಧಾನಿ ಕೇಂದ್ರವಾದ ಮಾಹಿತಿ ನೀಡಿದರು.

ಇದೀಗ ಬೆಂಗಳೂರನ್ನು ಕೇಂದ್ರ ಪ್ರದೇಶವನ್ನಾಗಿರಿಸಿಕೊಂಡು ಭಾಷೆ, ಸಂಸ್ಕೃತಿಗೆ ವಿಶಿಷ್ಟ ಸ್ಥಾನಮಾನ ಪಡೆದಿರುವ ದಾವಣಗೆರೆಯನ್ನು ಎರಡನೇ ರಾಜಧಾನಿಯನ್ನಾಗಿ ಮಾಡಲು ಅರ್ಹತೆ ಪಡೆದಿದೆ. ಹೊಸ ಜಿಲ್ಲೆಯಾಗಿ ಸಾಕಷ್ಟು ಅಭಿವೃದ್ಧಿ ಕಂಡಿರುವ ದಾವಣಗೆರೆಯನ್ನು ಎರಡನೇ ರಾಜಧಾನಿಯನ್ನಾಗಿ ಮಾಡಲು ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡೋಣವೆಂದು ಹೇಳಿದರು. ಮುಂದಿನ ದಿನಗಳಲ್ಲಿ ಇದು ಎರಡನೇ ರಾಜಧಾನಿ ಆಗಲಿದೆ ಎಂದು ಭವಿಷ್ಯ ನುಡಿದರು.

ಸಚಿವ ಎಸ್.ಎ.ರವೀಂದ್ರನಾಥ್ ಉದ್ಘಾಟನಾ ಭಾಷಣ ಮಾಡಿ, ದಾವಣಗೆರೆ ಜಿಲ್ಲೆಯಲ್ಲಿ 2 ಲಕ್ಷ ಎಕರೆ ನೀರಾವರಿ ಸೌಲಭ್ಯವಿದ್ದು, ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ. 916 ಕೋಟಿ ರೂ.ಗಳನ್ನು ಭದ್ರಾ ನಾಲಾ ಆಧುನೀಕರಣಕ್ಕೆ, ನಗರ ಪಾಲಿಕೆಗೆ 200 ಕೋಟಿ ರೂ. ಸರ್ಕಾರ ನೀಡಿದ್ದನ್ನು ನೆನಪಿಸಿ, ದಾವಣಗೆರೆ ಜಿಲ್ಲೆಯ 7 ಶಾಸಕರಲ್ಲಿ 6 ಬಿಜೆಪಿ ಶಾಸಕರು ಗೆದ್ದಿದ್ದಾರೆಂದು ನೆನಪಿಸಿ, ಜಿಲ್ಲಾ ಹಬ್ಬದ ಕಾರ್ಯಕ್ರಮಗಳನ್ನು ಜನರು ಬಂದು ನೋಡಲಿ ಎಂದು ಹೇಳಿದರು.

'ತೆನೆ ತೇರು' ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ


**(4ನೇ ಪುಟಕ್ಕೆ)**


# ಖುರ್ಷಿದ್ ವಿರುದ್ಧ ಕ್ರಮಕ್ಕೆ ರಾಷ್ಟ್ರಪತಿಗೆ ದೂರು

## ಕಠಿಣ ಕ್ರಮಕ್ಕೆ ಚುನಾವಣಾ ಆಯೋಗದ ಆಗ್ರಹ

ನವದೆಹಲಿ, ಫೆ. 11 - ವಾಗ್ದಂಡನೆ ವಿಧಿಸಿದ ನಂತರವೂ ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡಬೇಕೆಂದು ಚುನಾವಣಾ ಪ್ರಚಾರ ನಡೆಸುತ್ತಿರುವ ಕೇಂದ್ರ ಕಾನೂನು ಸಚಿವ ಸಲ್ಮಾನ್ ಖುರ್ಷೀದ್ ಬಗ್ಗೆ ಅಸಮಾಧಾನಗೊಂಡಿರುವ ಚುನಾವಣಾ ಆಯೋಗ, ತಕ್ಷಣ ನಿರ್ಣಾಯಕವಾಗಿ ಮಧ್ಯ ಪ್ರವೇಶಿಸುವಂತೆ ರಾಷ್ಟ್ರಪತಿಗಳಿಗೆ ಪತ್ರ ಬರೆದಿದೆ.

ಸಂವಿಧಾನಿಕ ಸಂಸ್ಥೆಗೆ ಉದ್ಧಟರಾಗಿ ಕೇಂದ್ರ ಸಚಿವರು ನಡೆದುಕೊಳ್ಳುತ್ತಿರುವುದು ಹಿಂದೆಂದೂ ನಡೆದಿರಲಿಲ್ಲ. ಇದು ಅನುಚಿತ ಹಾಗೂ ಕಾನೂನು ಬಾಹಿರ ಕೃತ್ಯವಾಗಿದೆ. ಇದರಿಂದ ಸಂವಿಧಾನಿಕ ಸಂಸ್ಥೆಗಳ ನಡುವೆ ಬಿಕ್ಕಟ್ಟು ಉಂಟಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಕಠಿಣ ಪದಗಳ ಎರಡು ಪುಟಗಳ ಪತ್ರ ಬರೆದಿರುವ ಆಯೋಗ, ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಸಚಿವರು ವಿಷಾದ ತೋರದೇ ಉದ್ಧಟರಾಗಿ ನಡೆದುಕೊಂಡಿದ್ದಾರೆ ಎಂದು ಆಕ್ಷೇಪಿಸಿದೆ.

ಎಲ್ಲಾ ರಾಜಕೀಯ ಪಕ್ಷಗಳ ಸಮ್ಮತಿ ಪಡೆದ ನಂತರ ಮತ್ತು ಸುಪ್ರೀಂ ಕೋರ್ಟಿನ ಅನುಮತಿಯೊಂದಿಗೆ ನೀತಿ ಸಂಹಿತೆ ಜಾರಿಗೆ ತರಲಾಗಿದೆ. ಆದರೂ ಸಚಿವರು ಉದ್ಧಟರಾಗಿ ವರ್ತಿಸುತ್ತಿದ್ದಾರೆ ಎಂದು ಚುನಾವಣಾ ಆಯೋಗದ ತುರ್ತು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ.

# ದೊಡ್ಡಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ಪ್ರಥಮ ಬಾರಿಗೆ ಬಸವ ಜಯಂತಿ

## ಕೈಗಾರಿಕೋದ್ಯಮಿ ಅಥಣಿ ವೀರಣ್ಣ ಪ್ರತಿಪಾದನೆ

ದಾವಣಗೆರೆ, ಫೆ. 11 - ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ನಗರದ ದೊಡ್ಡಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ನೂರು ವರ್ಷಗಳ ಹಿಂದೆ ಬಸವ ಜಯಂತಿ ಕಾರ್ಯಕ್ರಮವನ್ನು ಹರ್ಡೇಕರ್ ಮಂಜಪ್ಪ ಮತ್ತು ಶ್ರೀ ಮೃತ್ಯುಂಜಯ ಅಪ್ಪನವರು ಏರ್ಪಡಿಸಿದ್ದರೆಂದು ಕೈಗಾರಿಕೋದ್ಯಮಿ ಅಥಣಿ ವೀರಣ್ಣ ಪ್ರತಿಪಾದಿಸಿದರು.

ಅವರು ಇಂದು ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರದಲ್ಲಿ ಬಸವ ಜಯಂತಿ ಶತಮಾನೋತ್ಸವ ಆಚರಣೆ ಬಗ್ಗೆ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡುತ್ತಿದ್ದರು.

ಡಾ॥ ಎಂ.ಎಂ.ಕಲ್ಬುರ್ಗಿ, ಹರ್ಡೇಕರ್ ಮಂಜಪ್ಪ ಮತ್ತಿತರರು ತಮ್ಮ ಪುಸ್ತಕಗಳಲ್ಲಿ ಬಸವ ಜಯಂತಿ ಆಚರಣೆ ಬಗ್ಗೆ ತಿಳಿಸಿದ್ದಾರೆಂದು ಸ್ಪಷ್ಟಪಡಿಸಿದರು.

ಶ್ರೀ ಶಿವಮೂರ್ತಿ ಶರಣರು ಬಸವ ಜಯಂತಿ ಆಚರಣೆಯನ್ನು ಹೈಜಾಕ್ ಮಾಡಿದ್ದಾರೆಂದು ಪತ್ರಿಕೆಯೊಂದರಲ್ಲಿ ಬರೆದಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಸಾಧು - ವೀರಶೈವ ಸಮಾಜದ ಅಧ್ಯಕ್ಷರಾದ ಕೆ.ಆರ್.ಜಯದೇವಪ್ಪ ಅವರು, ಎಲ್ಲಾ ಜಾತಿಯವರಿಗೂ ಬಸವಣ್ಣ ಬೇಕಾಗಿದ್ದಾರೆಂಬುದಕ್ಕೆ ಈ ಪೂರ್ವಭಾವಿ ಸಭೆಯೇ ಸಾಕ್ಷಿ ಎಂದು ಹೇಳಿದರು.

ಬಸವ ಜಯಂತಿ ಕಾರ್ಯಕ್ರಮದಲ್ಲಿ ಅಂತರ್ ಜಾತೀಯ ವಿವಾಹ, ವಚನ ಗೀತೆ ಸ್ಪರ್ಧೆ, ಉಪನ್ಯಾಸಗಳನ್ನು ಏರ್ಪಡಿಸಬೇಕೆಂದು ಸಲಹೆ ನೀಡಿದರು.

ಮಾಜಿ ಸಚಿವ ಎಸ್.ಎಸ್.ಪಾಟೀಲ್ ಅವರು, ಲಿಂಗವಿಲ್ಲದ ಲಿಂಗಾಯಿತರೇ ಹೆಚ್ಚಾಗಿದ್ದಾರೆ. ಎಲ್ಲರೂ ಲಿಂಗವನ್ನು ಧರಿಸುವಂತೆ ಮಾಡಬೇಕಾಗಿದೆ. ಮಹಿಳೆಯರಿಗೆ ಸಮಾನತೆ ನೀಡಬೇಕು ಎಂದು


**(4ನೇ ಪುಟಕ್ಕೆ)**


## ಲೋಕಪಾಲ್ ಮಸೂದೆಗೆ ತಿದ್ದುಪಡಿ : ಕೇಂದ್ರ

ನವದೆಹಲಿ, ಫೆ. 11 - ಬಲಿಷ್ಠ ಹಾಗೂ ಪರಿಣಾಮಕಾರಿ ಲೋಕಪಾಲ್ ಜಾರಿಗೆ ತರಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಹೇಳಿರುವ ಪ್ರಧಾನ ಮಂತ್ರಿ ಕಛೇರಿ ಸಚಿವ ವಿ.ನಾರಾಯಣಸ್ವಾಮಿ, ಮಿತ್ರ ಪಕ್ಷಗಳಲ್ಲದೇ ವಿರೋಧ ಪಕ್ಷಗಳು ನೀಡಿರುವ ಸಲಹೆಗಳನ್ನೂ ಸಹ ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

## ಯಡಿಯೂರಪ್ಪ ಆಸ್ಪತ್ರೆಗೆ ದಾಖಲು

ಬೆಂಗಳೂರು, ಫೆ. 11 - ವಿಧಾನಸಭೆಯಲ್ಲಿ ತಮ್ಮ ಬೆಂಬಲಿಗ ಸಚಿವರು ಬ್ಲೂ ಫಿಲ್ಮ್ ವೀಕ್ಷಿಸಿದ ಘಟನೆ ರಾಜ್ಯ ವ್ಯಾಪಿ ಸೃಷ್ಟಿಸಿದ ಆಕ್ರೋಶ ಹಾಗೂ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಸಿಇಸಿ ತನಿಖೆಗೆ ಒಪ್ಪಿಸಿರುವ ಪ್ರಕರಣದ ಒತ್ತಡದ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆಸ್ಪತ್ರೆ ಸೇರಿದ್ದಾರೆ.

ನಗರದ ಹೊರ ವಲಯದ ಜಿಗಣಿ ಬಳಿಯಿರುವ ವಿವೇಕಾನಂದ ಆಯುರ್ವೇದ ನ್ಯಾಚುರೋಪತಿ ಕೇಂದ್ರದಲ್ಲಿ ನೈಸರ್ಗಿಕ ಚಿಕಿತ್ಸೆಗೆ ಮೊರೆ ಹೋಗಿದ್ದಾರೆ.

ಮೂರು ದಿನಗಳ ಕಾಲ ಯಡಿಯೂರಪ್ಪ ಅವರು ಆ ಕೇಂದ್ರದಲ್ಲಿ ಚಿಕಿತ್ಸೆ ಪಡೆಯಲಿದ್ದು, ತಮ್ಮ ಆಪ್ತ ಬೆಂಬಲಿಗರನ್ನು ಹೊರತುಪಡಿಸಿ ಇತರೆ ನಾಯಕರಿಗೆ ಅಲ್ಲಿ ಪ್ರವೇಶವಿಲ್ಲ.

ಈ ಹಿಂದೆ ಸಾಮಾನ್ಯವಾಗಿ ಜಿಂದಾಲ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರಾದರೂ ಇದೀಗ ಅಲ್ಲಿ ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಇರುವುದರಿಂದ ಜಿಗಣಿ ಬಳಿಯ ಕೇಂದ್ರಕ್ಕೆ ಹೋಗಿದ್ದಾರೆ.

## ಉಪ ಲೋಕಾಯುಕ್ತರ ನೇಮಕಕ್ಕೆ ರಾಜ್ಯಪಾಲರ ತರಾಟೆ

ಬೆಂಗಳೂರು, ಫೆ. 11 - ನ್ಯಾಯಮೂರ್ತಿ ಚಂದ್ರಶೇಖರಯ್ಯ ಅವರನ್ನು ಉಪಲೋಕಾಯುಕ್ತರನ್ನಾಗಿ ನೇಮಿಸುವಾಗ ಸರ್ಕಾರ ಲೋಕಾಯುಕ್ತ ಕಾಯ್ದೆಯನ್ನು ಉಲ್ಲಂಘಿಸಿದೆ. ಉದ್ದೇಶಪೂರ್ವಕವಾಗಿ ಕಾನೂನನ್ನು ತಪ್ಪಾಗಿ ಅರ್ಥೈಸಿದೆ ಎಂದು ರಾಜ್ಯಪಾಲ ಹೆಚ್.ಆರ್.ಭಾರಧ್ವಾಜ್ ಆರೋಪಿಸಿದ್ದಾರೆ.

ರಾಜ್ಯ ಸರ್ಕಾರಕ್ಕೆ ಸೂಕ್ತ ಕಾನೂನು ನಿರ್ದೇಶನ ದೊರೆಯುತ್ತಿಲ್ಲ. ಸರ್ಕಾರಕ್ಕೆ ಪರಿಣಾಮಕಾರಿ ಕಾನೂನು ಮಾರ್ಗದರ್ಶನದ ಅಗತ್ಯವಿದೆ ಎಂದು ಪತ್ರಕರ್ತರ ಜೊತೆ ಮಾತನಾಡುತ್ತಿದ್ದ ಭಾರಧ್ವಾಜ್ ತಿಳಿಸಿದ್ದಾರೆ.


ಲೋಕಾಯುಕ್ತರು ಹಾಗೂ ಉಪ ಲೋಕಾಯುಕ್ತರ ನೇಮಕದ ಬಗ್ಗೆ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಮಾರ್ಗಸೂಚಿಯನ್ನು ನಿಗದಿ ಪಡಿಸಿದೆ. ಆದರೆ, ಸರ್ಕಾರ ತನ್ನಲ್ಲಿಯೇ


**(4ನೇ ಪುಟಕ್ಕೆ)**


☆ **ನವದೆಹಲಿ:** ಒಳ ಮೀಸಲಾತಿ ಬಗ್ಗೆ ಚುನಾವಣಾ ಆಯೋಗವನ್ನೂ ಉಲ್ಲಂಘಿಸಿ ಉದ್ಧಟತನ ತೋರಿರುವ ಕೇಂದ್ರ ಕಾನೂನು ಸಚಿವ ಸಲ್ಮಾನ್ ಖುರ್ಷೀದ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಬಿಜೆಪಿ ಒತ್ತಾಯಿಸಿದೆ.

**ಮಂಡಕ್ಕಿ ಮೆಣಸಿನ್ಕಾಯಿ**

**ಎಸ್.ಎಸ್.ಆನಂದ್**




ಕರೆಂಟ್ ಇಲ್ಲ, ಗ್ಯಾಸ್ ಕೂಡಾ ಖಾಲಿ.... ನೀರು ಕಾಯಿಸ್ತಿದ್ದೀನಿ ಕಣ್ರೆ... ಸಂಪಾದಕರಿಂದ ರಿಜೆಕ್ಟ್ ಆದ ನಿಮ್ಮ ಕಥೆಗಳು!




॥ ಶ್ರೀ ಬನಶಂಕರಿ ದೇವಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಸಿಟಿ ಶಾಮನೂರು ವಾಸಿ **ಶ್ರೀಮತಿ ಶ್ರೀ ವಡೇರಹಳ್ಳಿ ಶಿವರುದ್ರಪ್ಪ ಮತ್ತು ಸಹೋದರರು, ಮಕ್ಕಳು** ಮಾಡುವ ವಿಜ್ಞಾಪನೆಗಳು.

ದಿನಾಂಕ 31.1.2012ರ ಮಂಗಳವಾರ ಸಂಜೆ 4.45ಕ್ಕೆ ನಮ್ಮ ಪೂಜ್ಯ ಅಣ್ಣನವರಾದ **ಶ್ರೀ ವಡೇರಹಳ್ಳಿ ಮಹಾದೇವಪ್ಪ** ಅವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ತತ್ಸಂಬಂಧವಾದ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 12.2.2012ರ ಭಾನುವಾರ ಬೆಳಿಗ್ಗೆ 10.30ಕ್ಕೆ ಶಾಮನೂರಿನ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಲು ವಿನಂತಿ.

ಇಂತಿ ದುಃಖತಪ್ತರು : **ಶ್ರೀ ವಡೇರಹಳ್ಳಿ ಶಿವರುದ್ರಪ್ಪ ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಶಾಮನೂರು ಹಾಗೂ ಬಂಧು-ಮಿತ್ರರು.**

ಇಂದ : **ಶ್ರೀಮತಿ ಶ್ರೀ ವಿ.ಎಂ. ಶಿವಶಂಕರಪ್ಪ ಮತ್ತು ಸಹೋದರರು, ಶಾಮನೂರು. ಮೊಬೈಲ್ : 98445-70297**

ವಿ.ಸೂ.: ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿ.



**FRANCHISEES WANTED**

ALL OVER KARNATAKA

EARN 1-2 LAKHS PM

Leading IT Training Institute with PAN India presence

(Previous Experience not required)

- Investment about 1 lakh, which can be earned back in few days.
- Need about 300sft office


**IRCMD**

ISO 9001 : 2008 Certified

09241717089; 09243111188

www.ircmd.net

karnataka@ircmd.in

ದಾವಣಗೆರೆ

ಭಾನುವಾರ

33/21

ಗರಿಷ್ಠ / ಕನಿಷ್ಠ ಡಿಗ್ರಿ ಸೆಲ್ಸಿಯಸ್‌ಗಳಲ್ಲಿ


**ಸವಿ ನೆನಪು**



**ದಿ॥ ಐ.ಪಿ. ವಿಶ್ವಾರಾಧ್ಯ**


ನಿಧನ : 12.02.2004

**ನೀವು ನಮ್ಮನ್ನಗಲಿ ಇಂದಿಗೆ 8 ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿ ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,**

**ಪತ್ನಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗ**



**ಭಕ್ತಿ ಪೂರ್ವಕ ಶುಭಾಶಯಗಳು**





ಕುವೆಂಪು ವಿಶ್ವ ವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾಗಿರುವ ಸಾಣೇಹಳ್ಳಿ ಶ್ರೀಮಠದ

**ಪರಮಪೂಜ್ಯ ಶ್ರೀ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ**

ಅವರಿಗೆ ನಮ್ಮ ಭಕ್ತಿ ಪೂರ್ವಕ ಶುಭಾಶಯಗಳು.

**ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮೀಜಿಗಳು ಮತ್ತು ಸಮಸ್ತ ಭಕ್ತ ವೃಂದ**

**ಶ್ರೀ ವಾಲ್ಮೀಕಿ ಗುರುಪೀಠ, ರಾಜನಹಳ್ಳಿ. ಹರಿಹರ ತಾ॥**



**ಮುಂಡಾಸದ ಮಲ್ಲಿಕಾರ್ಜುನ್ (ಮಲ್ಲಣ್ಣ) ನಿಧನ**



**ದಾವಣಗೆರೆಯ ವೀರಶೈವ ಸಮಾಜದ ಮುಖಂಡರು, ಮುಂಡಾಸದ ವೀರಭದ್ರಪ್ಪ ಅಂಡ್ ಸನ್ಸ್ ಮಾಲೀಕರು, ದಿ॥ ಮುಂಡಾಸದ ವೀರಭದ್ರಪ್ಪನವರ ಪುತ್ರರಾದ**

**ಮುಂಡಾಸದ ಮಲ್ಲಿಕಾರ್ಜುನ್ (ಮಲ್ಲಣ್ಣ)**

ಇವರು ದಿನಾಂಕ 11.02.2012ರ ಶನಿವಾರ ಬೆಳಿಗ್ಗೆ 6.10ಕ್ಕೆ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯಂದಿರು, ಸೊಸೆ, ಸಹೋದರ, ಸಹೋದರಿಯರು, ಮಾವಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರಿಗೆ 57 ವರ್ಷ ವಯಸ್ಸಾಗಿತ್ತು. ಮೃತರ ಪುತ್ರಿ ವಿದೇಶದಿಂದ ಆಗಮಿಸಬೇಕಾಗಿರುವ ಪ್ರಯುಕ್ತ ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ **ದಿನಾಂಕ 13.02.2012ರ ಸೋಮವಾರ ಬೆಳಿಗ್ಗೆಯಿಂದ ಅವರ ಸ್ವಗೃಹ # 2636, 'ಮುಂಡಾಸ್ ಹೌಸ್' ಎಸ್.ಎಸ್.ಲೇ ಔಟ್, 'ಬಿ' ಬ್ಲಾಕ್, 3ನೇ ಮೇನ್, 3ನೇ ಕ್ರಾಸ್, ದಾವಣಗೆರೆ ಇಲ್ಲಿ ಇಡಲಾಗುವುದು.**

ಅಂತ್ಯಕ್ರಿಯೆಯನ್ನು ದಿನಾಂಕ 13.02.2012ರ ಸೋಮವಾರ ಮಧ್ಯಾಹ್ನ 12.30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

*ಇಂತಿ ದುಃಖ ತಪ್ತರು*

**ಶ್ರೀಮತಿ ಗಿರಿಜ ಮುಂಡಾಸದ ಮಲ್ಲಿಕಾರ್ಜುನ**

**ಶ್ರೀಮತಿ ಲಕ್ಕಿತಾ ಶ್ರೀ ಮುಂಡಾಸದ ವೀರಭದ್ರಪ್ಪ (ಮಂಜು)**

**ಶ್ರೀಮತಿ ಲಕ್ಷ್ಮಿ ಶ್ರೀ ಅನಿಲ್‌ಕುಮಾರ್**

**ಹಾಗೂ ಮುಂಡಾಸದ ವಂಶಸ್ಥರು. ಮೊಬೈಲ್ : 98808-99979**

## ತಿಂಡಿ ಮುಂಡಾಸದ ಮಲ್ಲಣ್ಣನಿಗೆ ನಮನ



ದಿನಾಂಕ 11.2.2012ರಂದು ನಿಧನರಾದ ದಾವಣಗೆರೆಯ
ವೀರಶೈವ ಸಮಾಜದ ಮುಖಂಡರೂ, ನಮ್ಮ ಆತ್ಮೀಯರೂ,
ಮುಂಡಾಸ್ ವೀರಭದ್ರಪ್ಪ ಅಂಡ್ ಸನ್ಸ್ ಮಾಲೀಕರೂ ಆದ
**ಶ್ರೀ ಮುಂಡಾಸದ ಮಲ್ಲಿಕಾರ್ಜುನ್ (ಮಲ್ಲಣ್ಣ)** ಅವರಿಗೆ ನಮ್ಮ ನಮನ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

**ಅಜ್ಜಂಪುರ ಶೆಟ್ರು ಸಂಗಪ್ಪ**
**ಅಜ್ಜಂಪುರ ಶೆಟ್ರು ರಾಜಶೇಖರ್**
**ಜಯಣ್ಣ ಬಳ್ಳಾರಿ (ತರಗಾರ)**
**ಪ್ರಭು (ಕಾಯಿ)**
**ಕಡೇಕೊಪ್ಪ ನಾಗಭೂಷಣ**
**ರಾಜೇಂದ್ರ**
**ಮಾಗಾನಹಳ್ಳಿ ಬಕ್ಕೇಶ್**
**ಬೆಳ್ಳುಳ್ಳಿ ನಾಗಭೂಷಣ್ (ಬ್ಯಾಂಕ್)**
**ರಾಯ್ಕರ್**
**ಗುರಣ್ಣ ಬೆಳ್ಳುಳ್ಳಿ**
**ಕೆ.ವಿ. ನಾಗರಾಜ್ (ಬಟಾಣಿ)**
**ಬಕ್ಕೇಶ್ ಎನ್.ಕೆ.ಎನ್.**

**ವಾಯು ವಿಹಾರ ಬಳಗ, ದಾವಣಗೆರೆ.**

## ನಗರದ ಎಪಿಎಂಸಿಗೆ ನಾಳೆ ರಜೆ

ದಾವಣಗೆರೆ, ಫೆ.11- ಆವರಗೊಳ್ಳದ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವದ ಪ್ರಯುಕ್ತ ನಾಡಿದ್ದು ದಿನಾಂಕ 13 ರ ಸೋಮವಾರ ನಗರದ ಕೃಷಿ ಉತ್ಪನ್ನ ಮಾರುಕಟ್ಟೆಗೂ ಹಾಗೂ ಎಪಿಎಂಸಿ ಕಛೇರಿಗೂ ರಜೆ ಘೋಷಿಸಲಾಗಿದೆ ಎಂದು ಸಮಿತಿಯ ಕಾರ್ಯದರ್ಶಿ ತಿಳಿಸಿದ್ದಾರೆ.

## ಗುಳ್ಳದಹಳ್ಳಿ ಜಿ.ಎಂ. ರುದ್ರಮ್ಮ ನಿಧನ



ಹರಿಹರ ತಾಲ್ಲೂಕು ಗುಳ್ಳದಹಳ್ಳಿ ಗ್ರಾಮದ ವಾಸಿ ಜಿ.ಎಂ. ವೀರಭದ್ರಯ್ಯನವರ ಪತ್ನಿ ಜಿ.ಎಂ. ರುದ್ರಮ್ಮ(65) ಅವರು ದಿನಾಂಕ 11.02.2012ರ ಶನಿವಾರ ರಾತ್ರಿ 11 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.02.2012ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಹರಿಹರ ತಾಲ್ಲೂಕು ಗುಳ್ಳದಹಳ್ಳಿಯಲ್ಲಿ ನೆರವೇರಲಿದೆ.

**-ದುಃಖತಪ್ತ ಕುಟುಂಬ ವರ್ಗ**

## ಕೃಷಿ ಪ್ರಶಸ್ತಿ ವಿಜೇತರಿಗೆ ವಿದೇಶ ಪ್ರವಾಸ

ದಾವಣಗೆರೆ, ಫೆ. 11- ಜಿಲ್ಲೆಯ ಕೃಷಿ ಪ್ರಶಸ್ತಿ ಸ್ಪರ್ಧೆಯಲ್ಲಿ ರಾಜ್ಯ ಮಟ್ಟದಲ್ಲಿ ಬಹುಮಾನ ಪಡೆದವರು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರುಗಳಿಗೆ ವಿದೇಶ ಪ್ರವಾಸಕ್ಕೆ ಆದ್ಯತೆ ನೀಡುವುದಾಗಿ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ವಿದೇಶ ಪ್ರವಾಸ ಬಯಸುವವರು ಕೃಷಿ ಪಂಡಿತ ಹಾಗೂ ಕೃಷಿ ಪ್ರಶಸ್ತಿ ವಿಜೇತರು ತುರ್ತಾಗಿ ಪಾಸ್‌ಪೋರ್ಟ್ ಪಡೆಯಲು ಕೋರಿದೆ. ಈ ಕುರಿತು ಜಂಟಿ ಕೃಷಿ ನಿರ್ದೇಶಕರು ಕಛೇರಿ, ದೂರವಾಣಿ : 08192-230311 ಅಥವಾ 253981ಗೆ ಸಂಪರ್ಕಿಸಲು ಕೋರಲಾಗಿದೆ.

## ಜಿಲ್ಲಾ ಉತ್ಸವಕ್ಕೆ ಹನುಮಂತಪ್ಪ ಖಂಡನೆ

ದಾವಣಗೆರೆ, ಫೆ.11- ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಮಳೆಯಾಗದೆ ರೈತಾಪಿ ಜನರು ನೀರಿಗಾಗಿ ಬವಣೆಪಡುತ್ತಿರುವ ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಉತ್ಸವ ಹಮ್ಮಿಕೊಂಡಿರುವುದನ್ನು ಜಿಲ್ಲಾ ಕಾಂಗ್ರೆಸ್ ಸದಸ್ಯ ಹಾಗೂ ತಾಲ್ಲೂಕು ಪಂಚಾಯ್ತಿ ಮಾಜಿ ಸದಸ್ಯ ಎಲ್.ಬಿ. ಹನುಮಂತಪ್ಪ ಅವರು ಖಂಡಿಸಿದ್ದಾರೆ.

## ಪ್ಯಾಟಿ ಅವರಿಗೆ ಪಿಹೆಚ್‌ಡಿ ಪದವಿ



ಹರಿಹರ, ಫೆ. 11- ಇಲ್ಲಿನ ಗಿರಿಯಮ್ಮ ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎಸ್.ಹೆಚ್. ಪ್ಯಾಟಿ ಇವರಿಗೆ ಡಾಕ್ಟರೇಟ್ ಪದವಿ ನೀಡಲಾಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಕುಲಸಚಿವ ಡಾ|| ಎಸ್.ಎ. ಜಾವೀದ್ ತಿಳಿಸಿದ್ದಾರೆ.

ಪ್ಯಾಟಿ ಅವರು ಕಾಮರ್ಸ್ ವಿಷಯಕ್ಕೆ ಸಂಬಂಧಿಸಿದಂತೆ 'ಉದಯೋನ್ಮುಖ ಉದ್ಯಮಿಗಳನ್ನು ತಯಾರು ಮಾಡುವಲ್ಲಿ ರಾಜ್ಯ ಸರ್ಕಾರದ ಪ್ರಾಯೋಜಿತ ಹಣಕಾಸೇತರ ಸಂಸ್ಥೆಗಳ ಪಾತ್ರ ಒಂದು ಅಧ್ಯಯನ' ವಿಷಯ ಕುರಿತು ಮಂಡಿಸಿದ ಪ್ರೌಢ ಪ್ರಬಂಧಕ್ಕೆ ಡಾಕ್ಟರೇಟ್ ನೀಡಲಾಗಿದೆ.

ದಾವಣಗೆರೆ ವಿವಿ ವಾಣಿಜ್ಯ ವಿಭಾಗದ ಪ್ರೊಫೆಸರ್ ಡಾ.ಹೆಚ್.ಎಸ್. ಅನಿತಾ ಅವರ ಮಾರ್ಗದರ್ಶನದಲ್ಲಿ, ಪ್ಯಾಟಿಯವರು ಪ್ರಬಂಧ ಮಂಡಿಸಿದ್ದರು. ಡಾಕ್ಟರೇಟ್ ಪದವಿಯನ್ನು ಪ್ಯಾಟಿಯವರಿಗೆ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗಿದೆ. ಪ್ಯಾಟಿಯವರು ಪ್ರಾಂಶುಪಾಲರಾಗಿರುವ ಈ ಕಾಲೇಜಿನ ವಿದ್ಯಾರ್ಥಿನಿಯರು ಪ್ರತಿ ವರ್ಷವೂ ಒಂದಕ್ಕಿಂತ ಹೆಚ್ಚು ರ್‍ಯಾಂಕ್‌ಗಳನ್ನು ಪಡೆಯುತ್ತಾ ಬರುತ್ತಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ




ಜಗಳೂರು ತಾ|| ಬಿಳಿಚೋಡು ಗ್ರಾಮದ ವಾಸಿ
**ದಿ|| ಶೆಟ್ರು ಬಿ.ಎಸ್.ಕೆ.ಪಿ.ಸಿ. ಚನ್ನಬಸಪ್ಪನವರ ಮಗ**
**ಶ್ರೀ ಬಿ.ಎಸ್. ಪರಮೇಶ್ವರಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 08.02.2012ರ ಬುಧವಾರ ಬೆಳಿಗ್ಗೆ 10.40ಕ್ಕೆ ನಮ್ಮ ಅಣ್ಣನವರಾದ ದಿ|| ಸಿದ್ದವೀರಪ್ಪನವರ ಧರ್ಮಪತ್ನಿ
**ಶ್ರೀಮತಿ ಬಿ.ಎಸ್. ಮುರಿಗೆಮ್ಮನವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಸಮಾರಾಧನೆ'**ಯನ್ನು ದಿನಾಂಕ 12.02.2012ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಬಿಳಿಚೋಡು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಲೇ|| ಸಿದ್ದವೀರಪ್ಪನವರ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು. ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಶ್ರೀ ಬಿ.ಎಸ್. ಪರಮೇಶ್ವರಪ್ಪ ಮತ್ತು ಮಕ್ಕಳು. ಬಿಳಿಚೋಡು ಶೆಟ್ರು ಸಹೋದರರು ಹಾಗೂ ಬಂಧು-ಮಿತ್ರರು.**
**ಬಿ.ಎಸ್. ಪರಮೇಶ್ವರಪ್ಪ,** ಗೊಬ್ಬರ ವ್ಯಾಪಾರಿಗಳು, ಬಿಳಿಚೋಡು, ಜಗಳೂರು ತಾ||,
ದಾವಣಗೆರೆ ಜಿ||. ಮೊ : 94493-64454, 94481-78263.
**ಬಿ.ಎಸ್. ಮಲ್ಲಿಕಾರ್ಜುನ್,** ಮಾಲೀಕರು, ಸಾಯಿಬಾಬಾ ಬಸ್, ಬಿಳಿಚೋಡು.

**ವಿ.ಸೂ.: ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿ.**

|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



**ಶರಣ ಶ್ರೀ ಕೆ.ಜಿ. ಚಿದಾನಂದ,** ಮಲೇಬೆನ್ನೂರು.
ಜನನ : 21.07.1976 ನಿಧನ : 05.02.2012

ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಮಲೇಬೆನ್ನೂರು ಗ್ರಾಮದ ವಾಸಿ
**ಶ್ರೀಮತಿ ಬಸಮ್ಮ ಶ್ರೀ ಕೆ.ಜಿ. ವೀರನಗೌಡ್ರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 05.02.2012ರ ಭಾನುವಾರ ಬೆಳಿಗ್ಗೆ 8.45ಕ್ಕೆ ನಮ್ಮ ಪುತ್ರನಾದ
**ಶರಣ ಶ್ರೀ ಕೆ.ಜಿ. ಚಿದಾನಂದ**
ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಶಿವಗಣಾರಾಧನೆಯನ್ನು** ದಿನಾಂಕ 13.02.2012ರ ಸೋಮವಾರ ಬೆಳಿಗ್ಗೆ 10ಕ್ಕೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : **ಶ್ರೀಮತಿ ಬಸಮ್ಮ ಶ್ರೀ ಕೆ.ಜಿ. ವೀರನಗೌಡ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು,**
**ಶ್ರೀಮತಿ ನಾರಮ್ಮ ಶ್ರೀ ಅಣಜಿ ಚಂದ್ರಪ್ಪ & ಮಕ್ಕಳು,**
**ಶ್ರೀ ಹೆಚ್.ಜಿ. ಗುರುಸಿದ್ದಪ್ಪ & ಸಹೋದರರು, ಮಕ್ಕಳು**
**ಕರೇಗೌಡ್ರ ವಂಶಸ್ಥರು ಹಾಗೂ ಬಂಧು-ಮಿತ್ರರು**

**ವಿ.ಸೂ.: ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿ.**

## ನಗರದಲ್ಲಿ ಇಂದಿನಿಂದ ಸಂಸ್ಕೃತ ಭಾಷಾ ವ್ಯಾಕರಣ ತರಗತಿ

ಮಾಧ್ವ ಯುವಕ ಸಂಘ ಮತ್ತು ಅಖಿಲ ಭಾರತ ಮಾಧ್ವ ಮಹಾ ಪರಿಷತ್ ಇವರ ಸಂಯುಕ್ತಾಶ್ರಯದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಸಂಸ್ಕತ ಭಾಷಾ ಕಲಿಕೆ, ವ್ಯಾಕರಣ ತರಗತಿಗಳನ್ನು ಉಚಿತವಾಗಿ ಇಂದಿನಿಂದ ನಡೆಸಲಾಗುವುದು.

ತರಗತಿಯನ್ನು ಕುವೆಂಪು ರಸ್ತೆಯಲ್ಲಿರುವ ಸರ್ವಜ್ಞಾಚಾರ್ಯ ಸೇವಾ ಸಂಘದಲ್ಲಿ ನಡೆಸಲಾಗುವುದು. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನ 3 ರಿಂದ 4.30 ರವರೆಗೆ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಸಂಜೆ 5 ರಿಂದ 6.30 ರವರೆಗೆ ನಡೆಸಲಾಗುವುದು. ವಿವರಕ್ಕೆ ಮೊಬೈಲ್ 96636-88803 ಗೆ ಸಂಪರ್ಕಿಸಬಹುದು.

## ಮುಂಡಾಸದ ಮಲ್ಲಣ್ಣನಿಗೆ ನಮನ



ದಿನಾಂಕ 11.2.2012ರಂದು ನಿಧನರಾದ ದಾವಣಗೆರೆಯ
ವೀರಶೈವ ಸಮಾಜದ ಮುಖಂಡರೂ, ನಮ್ಮ ಆತ್ಮೀಯರೂ,
ಮುಂಡಾಸ್ ವೀರಭದ್ರಪ್ಪ ಅಂಡ್ ಸನ್ಸ್ ಮಾಲೀಕರೂ ಆದ
**ಶ್ರೀ ಮುಂಡಾಸದ ಮಲ್ಲಿಕಾರ್ಜುನ್ (ಮಲ್ಲಣ್ಣ)** ಅವರಿಗೆ ನಮ್ಮ ನಮನ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

**ಕಿರುವಾಡಿ ಸೋಮಣ್ಣ**
**ಎ.ಸಿ. ನಮಃಶಿವಾಯಪ್ಪ (ಮಾಯಕೊಂಡ)**
**ನಂದಿಗಾವಿ ರಾಜಣ್ಣ**
**ಬೆಳ್ಳುಳ್ಳಿ ಗುರುಸ್ವಾಮಿ**
**ಕಾರಿಗನೂರು ಗಣೇಶಪ್ಪ**
**ಕಡೇಕೊಪ್ಪ ನಾಗಭೂಷಣ**
**ಎನ್.ಕೆ. ಎನ್. ಬಕ್ಕೇಶ್**
**ಎಸ್.ಕೆ. ಟಿ. ವೆಂಕಟೇಶ್**
**ರಾಮಣ್ಣ (ಪ್ರಸಾದ ಟ್ರೇಡರ್ಸ್)**
**ಕೃಪಾನಂದ (ಮಾಯಕೊಂಡ)**
**ಬಿ.ಟಿ. ಗುರುಪಾದಪ್ಪ**
**ಕಂಬಳಿ ಪವಿ (ಕೆಎಂವಿ)**
**ಬಸಣ್ಣ ಆರ್‌ಎಸ್‌ಟಿ**
**ಯರಗುಂಟೆ ಮಂಜಣ್ಣ**
**ಅಲ್ಲಾವಲಿ ಇನಾಯತ್ ಸಾಬ್**
**ಎಂ.ಬಿ. ಸನಾವುಲ್ಲಾ**
**ಇಜಾಜ್ ಕೆ. ಇಕ್ಬಾಲ್ ಅಂಡ್ ಸನ್ಸ್**
**ಶಿಂಗ್ರಿಹಳ್ಳಿ ಬಾಲಣ್ಣ**
**ಅಂಗಡಿ ಸದಣ್ಣ**
**ಅಂಗಡಿ ವಿಶ್ವನಾಥ**
**ಸಣ್ಣಬಸಪ್ಪ (ಸಿದ್ದಲಿಂಗೇಶ್ವರ)**
**ಹೆಚ್.ಬಿ. ಸುಭಾಷ್**
**ಮುಂಡಾಸ್ ನಾಗಣ್ಣ**
**ಕರಿಶಿವಪ್ಪರ ಸಿದ್ದೇಶ್**
**ಅಣಬೇರು ಜಗದೀಶ್**

**(ಕಾಗೆ) ಕಟ್ಟೆ ಬಳಗ, ಎಪಿಎಂಸಿ, ದಾವಣಗೆರೆ.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 11.2.2012ರಂದು ನಿಧನರಾದ ದಾವಣಗೆರೆಯ
ವೀರಶೈವ ಸಮಾಜದ ಮುಖಂಡರೂ, ನಮ್ಮ ಆತ್ಮೀಯರೂ,
ಮುಂಡಾಸ್ ವೀರಭದ್ರಪ್ಪ ಅಂಡ್ ಸನ್ಸ್ ಮಾಲೀಕರೂ ಆದ
**ಶ್ರೀ ಮುಂಡಾಸದ ಮಲ್ಲಿಕಾರ್ಜುನ್ (ಮಲ್ಲಣ್ಣ)** ಅವರಿಗೆ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.
**ಬಿ.ಎಂ. ಕಡೇಕೊಪ್ಪ ಮತ್ತು ಮಕ್ಕಳು**
**ಎನ್.ಎಂ. ಕಡೇಕೊಪ್ಪ ಮತ್ತು ಮಕ್ಕಳು**
**ವರ್ತಕರು, ದಾವಣಗೆರೆ.**
**ಎ.ಕೆ. ರುದ್ರಮುನಿ (ಎಸಿಕೆ)**

## ಭಾವಪೂರ್ಣ ಶ್ರದ್ಧಾಂಜಲಿ



### ಶ್ರೀ ಮುಂಡಾಸದ ಮಲ್ಲಿಕಾರ್ಜುನ್

**ಅಧ್ಯಕ್ಷರು, ಶ್ರೀ ಬಸವೇಶ್ವರ ದೇವಸ್ಥಾನ ಸಂಘ (ರಿ),**
**ಕಾಯಿಪೇಟೆ, ದಾವಣಗೆರೆ.**

**ಇವರು ದಿನಾಂಕ 11.02.2012ರ ಬೆಳಿಗ್ಗೆ 6.40ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ.**
**ಅಪಾರ ಬಂಧು-ವರ್ಗ, ಜನಾನುರಾಗಿ ಸ್ನೇಹ ಜೀವಿಯಾಗಿದ್ದು,**
**ಇವರ ಅಗಲಿಕೆಯನ್ನು ಕುಟುಂಬ ವರ್ಗದವರು ಸಹಿಸಿಕೊಳ್ಳುವ ಶಕ್ತಿಯನ್ನು**
**ಶ್ರೀ ಬಸವೇಶ್ವರ ಸ್ವಾಮಿಯು ದಯಪಾಲಿಸಲೆಂದು ಕೇಳಿಕೊಳ್ಳುತ್ತೇವೆ.**
**ಗೌರವ ಅಧ್ಯಕ್ಷರು ಮತ್ತು ಸದಸ್ಯರುಗಳು**
**ಶ್ರೀ ಬಸವೇಶ್ವರ ದೇವಸ್ಥಾನ ಸಂಘ (ರಿ), ಕಾಯಿಪೇಟೆ, ದಾವಣಗೆರೆ.**

**ದಿನಾಂಕ 13.02.2012ರ ಸೋಮವಾರ ಮಧ್ಯಾಹ್ನ 12.30 ಗಂಟೆಗೆ**
**ವೀರಶೈವ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ.**

## ರೈಲಿಗೆ ಸಿಕ್ಕು ಅಪರಿಚಿತ ಯುವಕನ ಸಾವು

ದಾವಣಗೆರೆ, ಫೆ.11- ಹೊಳಲ್ಕೆರೆ-ಚಿಕ್ಕಜಾಜೂರು ರೈಲ್ವೆ ನಿಲ್ದಾಣದ ಬಳಿ ಚಲಿಸುತ್ತಿದ್ದ ರೈಲಿಗೆ ಸಿಕ್ಕು ಸುಮಾರು 25 ವರ್ಷ ವಯಸ್ಸಿನ ಅಪರಿಚಿತ ಯುವಕ ಮೃತಪಟ್ಟಿದ್ದಾನೆ.


ದುಂಡು ಮುಖ, ಸದೃಢ ಮೈಕಟ್ಟು ಹೊಂದಿರುವ ಈತ ಹಸಿರು ಬಣ್ಣದ ಗೆರೆಗಳಿರುವ ಶರ್ಟ್, ಕಂದು ಬಣ್ಣದ ಪ್ಯಾಂಟ್ ಧರಿಸಿದ್ದಾನೆ. ಈತನ ಶರ್ಟ್ ಮೇಲೆ ಆರ್.ಜಿ. ಟೈಲರ್, ನಿಟುವಳ್ಳಿ ಎಂದಿದೆ. ಈತನಿಗೆ ಸಂಬಂಧಪಟ್ಟವರು ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಯಲ್ಲಿ ಸಂಪರ್ಕಿಸಬಹುದು.




## ಕೊಂಡಜ್ಜಿ ರಸ್ತೆ ಶಿವಪುರದಲ್ಲಿ ಸೈಟುಗಳು ಮಾರಾಟಕ್ಕಿವೆ

**ಹನುಮಂತ ನಗರ, ಶಿವಪುರ, ಕೊಂಡಜ್ಜಿ ರಸ್ತೆ, ಯರಗುಂಟೆ, ದಾವಣಗೆರೆ.**







**ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳಿಗೆ ಮಾನ್ಯತೆ ಪಡೆದಿರುವ ಕರೂರ್ ಸರ್ವೇ ನಂ.41/1A ಮತ್ತು 41/2ರಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ನಿವೇಶನಗಳು ಮಾರಾಟಕ್ಕಿವೆ.**

**1) 30x40 2) 30x50 3) 40x60**

1) ದಾವಣಗೆರೆ ಜಿಲ್ಲಾಧಿಕಾರಿಗಳಿಂದ ವ್ಯವಸಾಯೇತರ ಉದ್ದೇಶಗಳಿಗಾಗಿ ಭೂ ಅಭಿವೃದ್ಧಿ ಪಡಿಸಿ, ಸರ್ಕಾರಕ್ಕೆ ಸಲ್ಲಿಸಬೇಕಾದ ಎಲ್ಲಾ ಶುಲ್ಕಗಳನ್ನೂ ಪಾವತಿಸಿ, ವಾಸೋಪಯೋಗಕ್ಕಾಗಿ ನಿವೇಶನಗಳನ್ನು ಮಾಡಲು ಮಂಜೂರಾತಿ ಹಾಗೂ ಅನುಮೋದನೆ ಪಡೆಯಲಾಗಿದೆ.
2) ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಂತಿಮ ಅನುಮೋದನೆ ಪಡೆದಿರುವ ನಿವೇಶನಗಳು.
3) ದಾವಣಗೆರೆ ನಗರ ಪಾಲಿಕೆಯಿಂದ ಡೋರ್ ನಂಬರ್ ಹಾಗೂ ಇತರೆ ಎಲ್ಲಾ ದಾಖಲಾತಿಗಳನ್ನು ಹೊಂದಿರುವ ನಿವೇಶನಗಳು.
4) ಕರ್ನಾಟಕ ಸರ್ಕಾರದ ಸಮಗ್ರ ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಳಿ ಇವರ ಷರತ್ತುಗಳ ಪ್ರಕಾರ ಕಾರ್ಯವನ್ನು ನಿರ್ವಹಿಸಿ, ಅನುಮೋದನೆ ಪಡೆಯಲಾಗಿದೆ.
5) ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ ಇವರ ಷರತ್ತುಗಳ ಪ್ರಕಾರ ಕಾರ್ಯ ನಿರ್ವಹಿಸಿ, ವಿದ್ಯುತ್ ಸರಬರಾಜು ಮಾಡಲು ಮಂಜೂರಾತಿ ಹಾಗೂ ಅನುಮೋದನೆ ಪಡೆಯಲಾಗಿದೆ.
6) ಕರ್ನಾಟಕ ಲೋಕೋಪಯೋಗಿ ಇಲಾಖೆಯ ಷರತ್ತುಗಳ ಪ್ರಕಾರ ರಸ್ತೆಯನ್ನು ಡಾಂಬರೀಕರಣಗೊಳಿಸಿ, ಮಂಜೂರಾತಿ ಹಾಗೂ ಅನುಮೋದನೆ ಪಡೆಯಲಾಗಿದೆ.
7) ಕೊಂಡಜ್ಜಿ ರಸ್ತೆ ರಿಂಗ್ ರೋಡ್ ಸರ್ಕಲ್‌ನಿಂದ ಕೇವಲ 1 ಕಿಲೋ.ಮೀಟರ್ ದೂರದಲ್ಲಿ ಕೊಂಡಜ್ಜಿ ಮುಖ್ಯ ರಸ್ತೆಗೆ ನಿವೇಶನಗಳನ್ನು ಅಭಿವೃದ್ಧಿ ಪಡಿಸಲಾಗಿದೆ.
8) ಕೆಂಪು ಗ್ರಾವೆಲ್ ಭೂಮಿಯಾಗಿರುವುದರಿಂದ ಕಟ್ಟಡ ಕಟ್ಟಲು ತಗಲುವ ಖರ್ಚು ಮಿತವಾಗಿರುತ್ತದೆ.
9) ವಿಶಾಲವಾದ 60 ಅಡಿ ಹಾಗೂ 30 ಅಡಿ ರಸ್ತೆಯನ್ನು ಹೊಂದಿದ್ದು, ಇಲ್ಲಿಂದ ಕೇವಲ 2 ಕಿ.ಮೀ ದೂರದಲ್ಲಿ ನಗರ ಅಭಿವೃದ್ಧಿ ಯೋಜನೆ ಪ್ರಕಾರ ಹೊಸ ಜಿಲ್ಲಾಧಿಕಾರಿ ಕಚೇರಿಗೆ ಸಂಪರ್ಕ ಕಲ್ಪಿಸಲು ರಸ್ತೆಯನ್ನು ಬಿಡಲಾಗಿದೆ.
10) ಸಾಲು ಮರಗಳು ಹಾಗೂ ಉದ್ಯಾನವನವನ್ನು ಮಾಡಲಾಗಿದ್ದು, ಮುಂದೆ ಶಾಲೆ ಹಾಗೂ ದೇವಸ್ಥಾನಗಳನ್ನು ನಿರ್ಮಿಸುವ ಯೋಜನೆಯನ್ನು ಹೊಂದಲಾಗಿದೆ.
11) ಕುಡಿಯುವ ನೀರು ಸರಬರಾಜು ಮಾಡಲು ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ್ದು, ಶೀಘ್ರದಲ್ಲೇ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ವ್ಯವಸ್ಥೆ ಮಾಡಲಾಗುತ್ತದೆ.
12) ಪ್ರತಿಯೊಂದು ನಿವೇಶನಗಳಿಗೆ ಕುಡಿಯುವ ನೀರು ಹಾಗೂ ಒಳಚರಂಡಿ ಪೈಪ್‌ಲೈನ್‌ಗಳನ್ನು ಅಳವಡಿಸಲಾಗಿದ್ದು, ಸಂಪರ್ಕ ಕಲ್ಪಿಸಲು ಸುಲಭವಾಗಿರುತ್ತದೆ. ಈಗಿರುವ ನಮ್ಮದೇ ಆದ ಕೊಳವೆ ಬಾವಿಯಿಂದ ಕಟ್ಟಡ ಕಟ್ಟಲು, ನೀರನ್ನು ಉಪಯೋಗಿಸಲು ಅವಕಾಶವಿರುತ್ತದೆ ಮತ್ತು ಎಲ್ಲಾ ರಸ್ತೆಗಳಿಗೂ ಬೀದಿ ದೀಪಗಳನ್ನು ಅಳವಡಿಸಲಾಗಿದೆ.
13) ಈ ಪ್ರಾಜೆಕ್ಟ್‌ನಲ್ಲಿ ನಿವೇಶನ ಖರೀದಿಸಲು ಹಾಗೂ ಕಟ್ಟಡ ಕಟ್ಟಲು, ಬ್ಯಾಂಕಿನಿಂದ ಸಾಲ ಪಡೆಯಲು, ಪ್ರಾಜೆಕ್ಟ್ ಮಂಜೂರಾತಿ ಪಡೆಯಲು ಬೇಕಾದ ಎಲ್ಲಾ ದಾಖಲಾತಿಗಳು ಲಭ್ಯವಿರುತ್ತವೆ.
14) ಈ ನಿವೇಶನಗಳನ್ನು ಖರೀದಿಸಲು ಹಾಗೂ ಹೆಚ್ಚಿನ ವಿವರಗಳಿಗೆ ಈ ನಂಬರ್‌ಗಳಿಗೆ ಸಂಪರ್ಕಿಸಿ.

*ಸಂಪರ್ಕಿಸಬೇಕಾದ ವಿಳಾಸ:* **ಜೆ.ಸತ್ಯನಾರಾಯಣ ರಾವ್**
**ಸದಾಶಿವ ಕಾಂಪ್ಲೆಕ್ಸ್, ಗಣಪತಿ ದೇವಸ್ಥಾನದ ಪಕ್ಕ, ಬಕ್ಕೇಶ್ವರ ಸ್ಕೂಲ್ ಎದುರು, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.**
**ಮೊ: 97421-80862, 94486-40304, 98459-54954, 97407-40500**


## ಭಾವಪೂರ್ಣ ಶ್ರದ್ಧಾಂಜಲಿ



**ವೀರಶೈವ-ಲಿಂಗಾಯತ ಸಮಾಜದ ಮುಖಂಡರೂ, ಕಾಯಿಪೇಟೆ ಧುರೀಣರು**
**ಹಾಗೂ ನಮ್ಮೆಲ್ಲರ ಆತ್ಮೀಯ ಒಡನಾಡಿಗಳಾಗಿದ್ದ**

### ಶ್ರೀ ಮುಂಡಾಸದ ಮಲ್ಲಿಕಾರ್ಜುನ್

**ಅವರ ಅಕಾಲಿಕ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸುತ್ತಾ,**
**ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ.**

- ✦ ಮುಂಡಾಸದ ನಾಗರಾಜ್
- ✦ ಎನ್.ಜಿ. ಶಿವಪುತ್ರಪ್ಪ
- ✦ ಹಳ್ಳೂರು ಮಂಜುನಾಥ್ (ಹೆಚ್.ಹೆಚ್. & ಕೋ)
- ✦ ಕಾಯಿ ಸಂಗಪ್ಪ
- ✦ ಹದಡಿ ಕೊಟ್ರಬಸಪ್ಪ ಮತ್ತು ಮಕ್ಕಳು
- ✦ ಕಾಯಿ ಪ್ರಭು
- ✦ ಮಾಗಾನಹಳ್ಳಿ ಬಸವರಾಜ್
- ✦ ನೆಲವಿಗಿ ಪ್ರಕಾಶ್
- ✦ ಹಳ್ಳೂರು ಸೋಮಶೇಖರ್
- ✦ ಮಾಗಾನಹಳ್ಳಿ ಕೊಟ್ರಪ್ಪ & ಸನ್ಸ್ (ಎಂ.ಸಿ.ಎಸ್.)
- ✦ ಅಂದನೂರು ಪ್ರಕಾಶ್
- ✦ ಐನಳ್ಳಿ ಅಶೋಕ್‌ಕುಮಾರ್
- ✦ ಅಂದನೂರು ಗುರುಬಸವರಾಜ್ ದಾ. ಅರ್ಬನ್ ಬ್ಯಾಂಕ್
- ✦ ಸೋಗಿ ಶಾಂತಕುಮಾರ್

**ಕಾಯಿಪೇಟೆ ಅಭಿಮಾನಿ ಬಂಧುಗಳು**

## ಸಲಗನಹಳ್ಳಿ ಜಿಗಳಿ ತುಳುಜಣ್ಣರ ಸಿದ್ದಮ್ಮ ನಿಧನ




ಹರಿಹರ ತಾಲ್ಲೂಕು ಸಲಗನಹಳ್ಳಿ ಗ್ರಾಮದ ಜಿಗಳಿ ತುಳುಜಣ್ಣರ ಸಿದ್ದಮ್ಮ(108) ಇವರು ದಿನಾಂಕ 11-2-2012ನೇ ಶನಿವಾರ ಸಂಜೆ 7-25 ಗಂಟೆಗೆ ನಿಧನರಾದರು. ಮೃತರು ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗದವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ದಿನಾಂಕ 12-2-2012ನೇ ಭಾನುವಾರ ಮಧ್ಯಾಹ್ನ 12 ಗಂಟೆಗೆ ಸಲಗನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ಜರುಗಲಿದೆ.

## ಖಮರುನ್ನೀಸಾ ನಿಧನ



ದಾವಣಗೆರೆ ವಿದ್ಯಾರ್ಥಿ ಭವನ ಹತ್ತಿರದ ವಾಸಿ, ದಿ. ವಜೀರ್ ಸಾಬ್ ಅವರ ಪತ್ನಿ ಖಮರುನ್ನೀಸಾ (80) ಅವರು ದಿನಾಂಕ 11.02.2012ರ ಸಂಜೆ 6ಕ್ಕೆ ನಿಧನರಾದರು. ಎಂಟು ಜನ ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.02.2012ರ ಭಾನುವಾರ ಮಧ್ಯಾಹ್ನ 2 ಕ್ಕೆ ಪಿ.ಬಿ. ರಸ್ತೆಯ ಹಳೇ ಖಬರಸ್ಥಾನದಲ್ಲಿ ನೆರವೇರಲಿದೆ.

## ಮಾಕನೂರು ಈಶ್ವರಪ್ಪ ನಿಧನ



ದಾವಣಗೆರೆಯ ಆಂಜನೇಯ ಬಡಾವಣೆ ವಾಸಿ ಹಾಗೂ ದಿ|| ಮಾಕನೂರು ಮಲ್ಲೇಶಪ್ಪನವರ ಕಿರಿಯ ಸಹೋದರ ಮಾಕನೂರು ಈಶ್ವರಪ್ಪ (80) ಅವರು ದಿನಾಂಕ 11.02.2012ರ ಶನಿವಾರ ಬೆಳಿಗ್ಗೆ 8 ಗಂಟೆಗೆ ನಿಧನರಾದರು. ಓರ್ವ ಪುತ್ರ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.02.2012ರ ಶನಿವಾರ ಸಂಜೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

## ವಿಟಿಯು ಕುಲಪತಿ ವಜಾಕ್ಕೆ ಆಗ್ರಹಿಸಿ ಇಂಜಿನಿಯರಿಂಗ್ ಕಾಲೇಜು ಬಂದ್

ದಾವಣಗೆರೆ,ಫೆ.11- ಕಳಂಕಿತ ವಿಟಿಯು ಕುಲಪತಿ ಡಾ. ಮಹೇಶಪ್ಪ ಅವರನ್ನು ವಜಾಗೊಳಿಸುವಂತೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಆಗ್ರಹಿಸಿದ್ದು, ರಾಜ್ಯಾದ್ಯಂತ ಇಂಜಿನಿಯರಿಂಗ್ ಕಾಲೇಜು ಬಂದ್‌ಗೆ ಮೊನ್ನೆ ಕರೆ ನೀಡಿತ್ತು.

ಮಹೇಶಪ್ಪ ರಾಜ್ಯಪಾಲರಿಗೆ ತಪ್ಪು ಮಾಹಿತಿ ನೀಡಿ ಆಯ್ಕೆಯಾಗಿರುವುದರ ಕುರಿತಂತೆ ರಾಜ್ಯ ಹೈಕೋರ್ಟ್ ಇತ್ತೀಚೆಗೆ ಆದೇಶ ನೀಡಿದೆ. ಡಾ. ಮಹೇಶಪ್ಪ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯಪಾಲರಿಗೆ ನಿರ್ದೇಶಿಸಿದೆ. ಆದರೆ ರಾಜ್ಯಪಾಲರು ತನಿಖೆಗೆ ಆದೇಶಿಸಿದ್ದಾರೆ.

ತಕ್ಷಣ ವಿಟಿಯು ಕುಲಪತಿ ಡಾ. ಮಹೇಶಪ್ಪ ಅವರನ್ನು ರಾಜ್ಯಪಾಲರು ವಜಾಗೊಳಿಸಬೇಕು. ಕುಲಪತಿ ಬೋಧನಾ ಸಮಿತಿ, ರಾಜ್ಯಪಾಲರು ಮತ್ತು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ಕೊಟ್ಟು ಕ್ರಿಮಿನಲ್ ಅಪರಾಧ ಮಾಡಿರುವ ಡಾ. ಮಹೇಶಪ್ಪ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ತಕ್ಷಣದಿಂದ ಯಾವುದೇ ನೀತಿ ನಿರೂಪಕ ನಿರ್ಣಯಗಳನ್ನು ಕೈಗೊಳ್ಳದಂತೆ ಹಾಗೂ 50,000ಕ್ಕೂ ಹೆಚ್ಚಿನ ಹಣಕಾಸಿನ ವ್ಯವಹಾರಗಳನ್ನು ಮಹೇಶಪ್ಪ ಮಾಡದಂತೆ ನಿರ್ಬಂಧಿಸಬೇಕು. ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಭ್ರಷ್ಟ ಕುಲಪತಿಗಳನ್ನು ಸಂರಕ್ಷಿಸುವ ತಮ್ಮ ಪರಿಪಾಠವನ್ನು ರಾಜ್ಯಪಾಲರು ನಿಲ್ಲಿಸಬೇಕೆಂದು ಎಬಿವಿಪಿ ಒತ್ತಾಯಿಸಿದೆ.

## ಹೊನ್ನಾಳಿಯಲ್ಲಿ ಜೆಡಿಎಸ್ ಪ್ರತಿಭಟನೆ

ಹೊನ್ನಾಳಿ, ಫೆ. 11- ಅಶ್ಲೀಲ ದೃಶ್ಯ ವೀಕ್ಷಣೆ ಮಾಡಿದ ಕಳಂಕಿತ ಸಚಿವರ ವಿರುದ್ಧ ತಾಲ್ಲೂಕು ಜೆಡಿಎಸ್ ಪಕ್ಷವು ಅಧ್ಯಕ್ಷ ಮಹೇಶ್ವರ್ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ವಿಧಾನಸಭಾ ಸ್ಥಾನದಿಂದ ಕೈಬಿಟ್ಟು, ಅವರನ್ನು ಪಕ್ಷದಿಂದ ಕೈ ಬಿಡುವುದಲ್ಲದೇ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಮುಖಂಡರಾದ ಶಿವಲಿಂಗಪ್ಪ, ಸುರೇಶ್, ಷಣ್ಮುಖಪ್ಪ, ಆನಂದ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಬಿವಿವೀ ಪುಸ್ತಕ ಬಿಡುಗಡೆ

ವಿಚಾರವಾದಿ ಪ್ರೊ॥ ಬಿ.ವಿ. ವೀರಭದ್ರಪ್ಪ ಅವರ 'ದಿ ಕಾಮನ್ ಪೀಪಲ್ ಇನ್ ದಿ ವೇದಾಸ್' (ಅನುವಾದ : ಪ್ರೊ॥ ಎಂ. ಬಸವರಾಜ್) ಪುಸ್ತಕವು ಇಂದು ಬೆಳಿಗ್ಗೆ 10.30 ಕ್ಕೆ ರೋಟರಿ ಬಾಲ ಭವನದಲ್ಲಿ ಬಿಡುಗಡೆಗೊಳ್ಳಲಿದೆ. ಅಲ್ಲದೇ, ಕಂನಾಡಿಗಾ ನಾರಾಯಣ ಅವರ 'ಕಾಂಡಾ-ದಿ ಹಿಂಡಸೈಟ್ ಸಾಗಾ' (ಅನುವಾದ : ಪ್ರೊ॥ ಪರಿಮಳಾ ನಾಯಕ್) ಪುಸ್ತಕವೂ ಬಿಡುಗಡೆಯಾಗಲಿದೆ.

ವಿಚಾರವಾದಿ ಪ್ರೊ॥ ಕೆ.ಎಸ್. ಭಗವಾನ್ ಅವರು ಪುಸ್ತಕ ಬಿಡುಗಡೆ ಮಾಡುವರು. ಜಲ ಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಬಿ.ಜಿ. ಗುರುಪಾದ ಸ್ವಾಮಿ ಅಧ್ಯಕ್ಷತೆ ವಹಿಸುವರು. ಅನುವಾದಕ ಪ್ರೊ॥ ಶ್ರೀನಿವಾಸ್ ವಿ. ಸುತ್ರಾವೆ ಅತಿಥಿಯಾಗಿ ಪಾಲ್ಗೊಳ್ಳುವರು. ಬೆಂಗಳೂರಿನ ಕಣ್ವ ಪಬ್ಲಿಕೇಷನ್ಸ್ ಸಂಸ್ಥೆ ವತಿಯಿಂದ ಈ ಕಾರ್ಯಕ್ರಮ ಏರ್ಪಾಡಾಗಿದೆ.


**WALK IN INTERVIEW**

ON 13TH FEB 2012, Time : 10 am to 2 pm.
WALK IN INTERVIEW FOR THE POST OF

**BUSINESS DEVELOPMENT OFFICERS & SENIOR BUSINESS DEVELOPMENT OFFICER**

IN REPUTED BANKING SECTOR
**Fresher's can also apply.**
For more details contact :
**87222-29621**

ಪ್ರಯಾಣಿಕರಿಗೆ ಸಂತಸದ ಸುದ್ದಿ

**ಶ್ರೀ ದುರ್ಗಾಂಬ ಟ್ರಾವೆಲ್ಸ್**

ಶ್ರೀ ಕೃಷ್ಣ ಇಂಜಿನಿಯರಿಂಗ್ ಕಾಂಪೌಂಡ್, ಹಳೇ ಬಸ್ ನಿಲ್ದಾಣದ ಎದುರು, ದಾವಣಗೆರೆ.
ಫೋನ್ : 08192-232262, 94484-15595, 98807-29049

**ದಾವಣಗೆರೆಯಿಂದ ಮಂಗಳೂರು**

ಮಾರ್ಗ: ಕುಂದಾಪುರ, ಉಡುಪಿ, ಮಣಿಪಾಲ್




ದಾವಣಗೆರೆಯಿಂದ ಮಂಗಳೂರಿಗೆ ಪ್ರತಿದಿನ ರಾತ್ರಿ 9.30ಕ್ಕೆ ಹೊಸ ಮಾದರಿಯ ಸ್ಲೀಪರ್ ಏರ್‌ಬಸ್ 2X1 ವ್ಯವಸ್ಥೆಯ ಬಸ್ಸನ್ನು ಪ್ರಾರಂಭಿಸಲಾಗಿದೆ.

ಆನ್‌ಲೈನ್ ಬುಕ್ಕಿಂಗ್ : www.sridurgambatravels.com

**REQUIRED**

**immediately for a reputed firm**

1. **OFFICE MANAGER :** Experienced in Educational Institution back ground
2. **MARKETING EXECUTIVE :** Experienced in selling Computer Hardware.
3. **MARKETING EXECUTIVE :** Experienced in Educational Institutional Sales.
4. **COUNSELLORS :** Preferably Female Candidate, knowledge of Computers.
5. **ACCOUNTANT :** Experienced Accounts, Knowledge of Tally and MS Office is a must.

Good spoken and written knowledge of English is must for all the position above.
Salary will be in par with the industry for good and experienced candidates. Fresher can also apply.

**Walk in interview on 14.02.2012, Time : 9.30 am Onwards.**

Venue : # 215/9, 'Nadigar Plaza' 1st Floor, 3rd Main, 5th Cross, P.J. Extension, Davangere-04
**Phone : 08192-656326, 80955-50751**
Land Mark : Near Unity Hospital, Above Laxmi Vilas Bank ATM, St. Paul's Convent Road.

**ಹೊಸ ಬಿಲ್ಡಿಂಗ್ ಬಾಡಿಗೆಗೆ ಇದೆ**

ಬಿನ್ನಿ ಕಂಪನಿ ರಸ್ತೆ (ಹೆಚ್. ಎಂ. ರಸ್ತೆ) ಹೆಚ್. ಡಿ. ಎಫ್. ಸಿ ಬ್ಯಾಂಕ್ ಪಕ್ಕದಲ್ಲಿ ಬ್ಯಾಂಕ್, ಆಫೀಸ್, ಶೋರೂಂಗಳಿಗೆ ಸೂಕ್ತವಾದ ಗ್ರೌಂಡ್ ಫ್ಲೋರ್ 1500 ಚದರ ಅಡಿ ಹಾಗೂ ಮೊದಲನೆ ಮಹಡಿ 1260 ಚದರ ಅಡಿ ಬಾಡಿಗೆಗಿದೆ.
ಸಂಪರ್ಕಿಸಿ : 98809 22889

**ವಿವಾಹ ಮಹೋತ್ಸವ - ಶುಭಾಶಯಗಳು**




ದಿನಾಂಕ 12.02.2012ರ ಭಾನುವಾರ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿರುವ ಆತ್ಮೀಯ ಸ್ನೇಹಿತರಾದ

**ಸಿದ್ರಾಮೇಶ್** ಜೊತೆ **ರೂಪ** **ಸಂತೋಷಕುಮಾರ್** ಜೊತೆ **ವಿಜಯಲಕ್ಷ್ಮಿ**

ಇವರುಗಳ ವಿವಾಹ ಮಹೋತ್ಸವಕ್ಕೆ ಹಾರ್ದಿಕ ಶುಭಾಶಯಗಳು.


ಮಹಾಂತೇಶ

ರಕ್ಷಿತಾ

ಹರೀಶ್

**SSLC ಉಚಿತ ಪರೀಕ್ಷಾ ಮಾಹಿತಿ ಶಿಬಿರ**

13.2.2012ರ ಸೋಮವಾರದಿಂದ ಪ್ರಾರಂಭ
**ಬ್ರಿಲಿಯಂಟ್ ಬ್ರೈನ್ ಅಬಾಕಸ್**
ಶಿವಪ್ಪಯ್ಯ ಸರ್ಕಲ್ ಹತ್ತಿರ, ಕೆಟಿಜೆ ನಗರ, 1ನೇ ಕ್ರಾಸ್, ದಾವಣಗೆರೆ.
ಮೊಬೈಲ್ : 9740590916

**ತೋಟ ಇರುವ ರೈತರಿಗೆ ಸುವರ್ಣಾವಕಾಶ**

**ಸಹಾಯ ಧನ ಲಭ್ಯ**

ರೈತರಿಗೆ ತೋಟಗಾರಿಕೆ ಇಲಾಖೆಯಿಂದ ಟ್ರ್ಯಾಕ್ಟರ್ ಚಾಲಿತ ವಾಟರ್ ಟ್ಯಾಂಕರ್ (5000 Liter) ಹಾಗೂ ಅಡಿಕೆ ಸುಲಿಯುವ



ಒಕ್ಕಣೆ ಯಂತ್ರ ತೋಟಗಾರಿಕೆ ಇಲಾಖೆಯಿಂದ ಸಹಾಯ ಧನ ಲಭ್ಯ.



**'ಮನು' ಇಂಡಸ್ಟ್ರೀಸ್**
ಚನ್ನಗಿರಿ ರಂಗಪ್ಪ ಎಸ್ಟೇಟ್, ರವಿ ಮಿಲ್ ಮುಂಭಾಗ ರಸ್ತೆ, ದಾವಣಗೆರೆ. ಫೋ : 97401-13445, 96200-21125


**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸರ್ವರಿಗೂ ತಿಳಿಯಬಯಸುವುದೇನೆಂದರೆ ನನ್ನ ಕಕ್ಷಿದಾರರಾದ ಪ್ರಸನ್ನಕುಮಾರ ಕೆ.ಎಂ. ಬಿನ್ ಬೂದಯ್ಯ ಕೆ.ಎಂ. ಅವರು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ಅದರ ಹಕ್ಕುದಾರಿ ಸ್ವಾಧೀನ ಮಾಲೀಕರಾದ ದಾವಣಗೆರೆ ಸಿಟಿ, ನಿಟುವಳ್ಳಿ ಸರಸ್ವತಿ ಬಡಾವಣೆ, 'ಬಿ' ಬ್ಲಾಕ್, ಡೋ.ನಂ. 781/27ರಲ್ಲಿ ವಾಸವಾಗಿರುವ ಶ್ರೀ ಕೆ.ಪಿ. ಮಲ್ಲಿಕಾರ್ಜುನ ಬಿನ್ ಕೆ. ಪರಮೇಶ್ವರಪ್ಪ ಇವರಿಂದ ಖರೀದಿಸುತ್ತಿದ್ದು ಷೆಡ್ಯೂಲ್ ಸೊತ್ತಿನ ಮೇಲೆ ಯಾರಾದರೂ ಯಾವುದೇ ತರಹದ ಕಾನೂನು ರೀತ್ಯ ಹಕ್ಕು, ಹಿತಾಸಕ್ತಿ, ಭೋಗ್ಯಾದಿ ಹಕ್ಕು, ಚಾರ್ಜ್ ಅಥವಾ ಜೀವನಾಂಶದ ಹಕ್ಕುಗಳು ವಗೈರೆ ಇದ್ದಲ್ಲಿ ಈ ತಾರೀಖಿನಿಂದ 10 ದಿನಗಳೊಳಗಾಗಿ ಈ ಕೆಳಕಂಡ ವಿಳಾಸಕ್ಕೆ ಕಾನೂನು ರೀತ್ಯಾ ಹಕ್ಕನ್ನು ಸಾಬೀತುಗೊಳಿಸತಕ್ಕಂತಹ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ತಿಳಿಸುವುದು ತಪ್ಪಿದಲ್ಲಿ ಷೆಡ್ಯೂಲ್ ಸೊತ್ತಿನಲ್ಲಿ ಕಾನೂನು ರಿತ್ಯ ಯಾರದ್ದು ಯಾವುದೇ ತರಹದ ಹಕ್ಕು, ಆಸಕ್ತಿ ಇಲ್ಲವೆಂದು ಪರಿಗಣಿಸಿ, ನಮ್ಮ ಕಕ್ಷಿದಾರರು ಷೆಡ್ಯೂಲ್ ಸೊತ್ತನ್ನು ಖರೀದಿಸುವ ಬಗ್ಗೆ ಶುದ್ಧ ಕ್ರಯ ಪತ್ರವನ್ನು ಮಾಡಿಸಿಕೊಳ್ಳುವರೆಂದು ಈ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್ :** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ನಿಟುವಳ್ಳಿ ಗ್ರಾಮದ ರಿ. ಸರ್ವೆ ನಂ. 18/2ಬಿ4ರಲ್ಲಿ ನಿವೇಶನಗಳನ್ನು ಮಾಡಿದ್ದು, ಅದರಲ್ಲಿ ಸೈಟ್ ನಂ. 54, ಇದರ ಡೋರ್ ನಂ. 1552/1, ಖಾತೆ ನಂ. 1531 ಅಳತೆ 60X40 ಅಡಿ ಪೂರಾ ನಿವೇಶನದ ಉತ್ತರಾರ್ಧ ಭಾಗದ ಚಾಲ್ತಿ ಡೋರ್ ನಂ. 1552/1ಪಿ, ಖಾತೆ ನಂ. 1531/ಎ ಇದರ ಅಳತೆ ಪೂ.ಪ. 60 ಅಡಿ, ಉ.ದ. 20 ಅಡಿ ಮತ್ತು ಇದೇ ಸೈಟ್ ನಂ. 54ರ ದಕ್ಷಿಣಾರ್ಧ ಭಾಗ, ಚಾಲ್ತಿ ಡೋರ್ ನಂ. 1552/1, ಖಾತೆ ನಂ. 1531 ಅಳತೆ, ಪೂ.ಪ. : 60, ಉ.ದ. : 20 ಅಡಿವುಳ್ಳ ಎರಡು ಸೈಟುಗಳು.

ಸಹಿ/- **(ಎಸ್. ಪ್ರಕಾಶ್)**, ವಕೀಲರು.
ಸಂಪರ್ಕಿಸಬೇಕಾದ ದೂರವಾಣಿ : **99803-29529**

**ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ದಾವಣಗೆರೆ**

ಇವರ ಘನ ಸನ್ನಿಧಾನದಲ್ಲಿ
ಅಮಲ್ಜಾರಿ ಪ್ರಕರಣ : 99/2011.

ಡಿಕ್ರಿಧಾರಕ : ಎ.ಕೆ. ಶಿವಯೋಗಿ ಬಿನ್ ಎ. ಕೊಟ್ರಪ್ಪ, ವಯಸ್ಸು 37 ವರ್ಷಗಳು, ವ್ಯಾಪಾರಿ, ಡೋ.ನಂ. 3367/16, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ. -ವಿರುದ್ಧ- ತೀರ್ಪುಋಣಿದಾರ : ರಶ್ಮಿ ಬಿನ್ ಲೇಟ್ ಶ್ರೀಮತಿ ಪಿ. ನಾಗರತ್ನಮ್ಮ, ವಯಸ್ಸು 34 ವರ್ಷಗಳು. ಕೇರಾಫ್ ಶ್ರೀಮತಿ ಶಶಿಕಲಾ ಕೋಂ. ಮಹಾಬಲೇಶ್ವರ, ಡೋರ್ ನಂ. 1698/4ಎ, 'ರಜನಿ' ಮಾವಿನತೋಪು ಆಸ್ಪತ್ರೆ, ಶಾಮನೂರು ರಸ್ತೆ, ಮುಖ್ಯ ರಸ್ತೆ, ದಾವಣಗೆರೆ.

**ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5, ನಿಯಮ 20-ಎ ರಡಿಯಲ್ಲಿ**

**ತೀರ್ಪುಋಣಿದಾರರಿಗೆ ಹೊರಡಿಸಲಾದ ಪತ್ರಿಕಾ ನೋಟೀಸ್ ಏನೆಂದರೆ :-**

ಮೇಲ್ಕಂಡ ಡಿಕ್ರಿಧಾರಕನು ನಿಮ್ಮ ವಿರುದ್ಧ ಈ ನ್ಯಾಯಾಲಯದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ 09.03.2011 ರಂದು ಅಸಲು ದಾವೆ ಸಂಖ್ಯೆ 169/10ರಲ್ಲಿ ಮಾಡಿರುವ ತೀರ್ಪು ಮತ್ತು ಡಿಕ್ರಿಯಂತೆ ಕ್ರಯಪತ್ರವನ್ನು ಬರೆದುಕೊಡಲು ತಮಗೆ ನಿರ್ದೇಶನ ನೀಡುವಂತೆ ಅದಕ್ಕೆ ತಾವು ತಪ್ಪಿದ್ದಲ್ಲಿ ನ್ಯಾಯಾಲಯವೇ ಆಯುಕ್ತರನ್ನು ನೇಮಿಸುವಂತೆ ಕ್ರಯಪತ್ರವನ್ನು ಬರೆದುಕೊಡುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾನೆ. ನ್ಯಾಯಾಲಯವು ಅರ್ಜಿಯನ್ನು ದಾಖಲಿಸಿಕೊಂಡು ತಮಗೆ ನೋಟೀಸನ್ನು ಹೊರಡಿಸಿದರೂ ತಾವು ಹಾಜರಾಗಿರುವುದಿಲ್ಲ. ನಂತರ ಡಿಕ್ರಿಧಾರಕನು ನೋಟಿಸನ್ನು ಪತ್ರಿಕೆ ಪ್ರಕಟಣೆಯ ಮೂಲಕ ಹೊರಡಿಸಲು ಕೋರಿಕೊಂಡಂತೆ ತಮಗೆ ಈ ಪತ್ರಿಕಾ ನೋಟೀಸನ್ನು ಹೊರಡಿಸಲಾಗಿದೆ.

ತಮ್ಮ ಹಾಜರಾತಿಗಾಗಿ ದಿನಾಂಕ 05.03.2012 ರಂದು ಮೇಲ್ಕಂಡ ಪ್ರಕರಣದ ಮುದ್ದತ್ತು ಇದ್ದು, ಆ ದಿನ ಬೆಳಿಗ್ಗೆ 11 ಗಂಟೆಗೆ ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಮೇಲ್ಕಾಣಿಸಿದ ದಿನ ಹಾಗೂ ಸಮಯ ಹಾಗೂ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ದಿನಾಂಕ 02.02.2012 ರಂದು ನೀಡಲಾಗಿದೆ.

ಡಿಕ್ರಿಧಾರಕನ ಪರ ವಕೀಲರು
ಸಹಿ/- **(ಕೆ.ಕೆ. ದಾದಾಪೀರ್)**
ವಕೀಲರು, ಕೆಟಿಜೆ ನಗರ,
8ನೇ ಕ್ರಾಸ್, ದಾವಣಗೆರೆ-2.

ನ್ಯಾಯಾಲಯದ ಆದೇಶಾನುಸಾರ
ಸಹಿ/- **(ಮಹಾಲಿಂಗಪ್ರಭು)** ಮುಖ್ಯ ಲಿಪಿಕಾಧಿಕಾರಿಗಳು,
ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿ.ವಿ.) ನ್ಯಾಯಾಲಯ,
ದಾವಣಗೆರೆ.

|| ಶ್ರೀ ಗಂಗಾಂಭಿಕ ದೇವಿ ಪ್ರಸನ್ನ || || ಶ್ರೀ ದುರ್ಗಾಂಬಿಕಾ ದೇವಿ ಪ್ರಸನ್ನ ||

**ಮದುವೆಯ ಮಮತೆಯ ಕರೆಯೋಲೆ**

ಚಿತ್ರದುರ್ಗ ಪೋಸ್ಟ್ ಆಫೀಸ್ ಕ್ವಾಟ್ರಸ್ ವಾಸಿ ಶ್ರೀಮತಿ ಪ್ರೇಮಮ್ಮ ಶಿಕ್ಷಕರು, ದಿ. ಶ್ರೀ ಡಿ.ವಿ. ವೆಂಕಟೇಶ್ ಹಾಗೂ ದಾವಣಗೆರೆ ತಾ॥, ಜಿ॥, ಗೊಲ್ಲರಹಳ್ಳಿ ವಾಸಿ ಶ್ರೀಮತಿ ಕಮಲಮ್ಮ ದಿ॥ ಶ್ರೀ ಮಂಜಪ್ಪ ಇವರುಗಳು ಮಾಡುವ ವಿಜ್ಞಾಪನೆಗಳು.
ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀ ಮನ್ನೃಪ ಶಾಲಿವಾಹನ ಶಕೆ 1933ನೇ ಶ್ರೀ ಖರನಾಮ ಸಂವತ್ಸರ ಕೃಷ್ಣ ಪಕ್ಷ
ದಿ. : 13.02.2012ನೇ ಸೋಮವಾರ ಬೆಳಿಗ್ಗೆ 9.00 ರಿಂದ 10.15ರವರೆಗೆ ಸಲ್ಲುವ ಮೀನಾ ಲಗ್ನದ ಶುಭ ಮುಹೂರ್ತದಲ್ಲಿ
ಶ್ರೀಮತಿ ಪ್ರೇಮಮ್ಮ ಶಿಕ್ಷಕರು ದಿ॥ ಶ್ರೀ ಡಿ.ವಿ. ವೆಂಕಟೇಶ್ ಇವರ ಜೇಷ್ಠ ಪುತ್ರ

**ಚಿ॥ ರಾ॥ ವಿ. ಹರೀಶ್ ವಿವಾಹ ಚಿ॥ ಕುಂ॥ಸೌ॥ ರೂಪ**

(ಶ್ರೀಮತಿ ಕಮಲಮ್ಮ ಶ್ರೀ ದಿ. ಮಂಜಪ್ಪ ಇವರ ಜೇಷ್ಠ ಸುಪುತ್ರಿ

ಇವರ ವಿವಾಹ ಮಹೋತ್ಸವವನ್ನು **ಶ್ರೀ ಕ್ಷೇತ್ರ ಧರ್ಮಸ್ಥಳ, ಶ್ರೀ ಮಂಜುನಾಥ ದೇವಸ್ಥಾನ**ದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕುಟುಂಬ ಸಮೇತರಾಗಿ ಆಗಮಿಸಿ, ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ

ತಮ್ಮ ಆಗಮನಾಭಿಲಾಷಿಗಳು : **ಶ್ರೀಮತಿ ಪ್ರೇಮಮ್ಮ ಶ್ರೀ ದಿ॥ ಡಿ.ವಿ. ವೆಂಕಟೇಶ್, ಶ್ರೀಮತಿ ಕಮಲಮ್ಮ ಶ್ರೀ ದಿ॥ ಮಂಜಪ್ಪ**
ತಮ್ಮ ಸುಖಾಗಮನ ಬಯಸುವವರು : **ಶ್ರೀ ಚಂದ್ರಪ್ಪ**, ಶಾಸಕರು, ಚಿತ್ರದುರ್ಗ **ಶ್ರೀ ವೈ. ರಾಮಪ್ಪ**, ಜಿ.ಪಂ. ಮಾಜಿ ಅಧ್ಯಕ್ಷರು, ದಾವಣಗೆರೆ.
**ಶ್ರೀ ಡಿ. ಬಸವರಾಜ್**, ಮಾಜಿ ಮಹಾಪೌರರು, ದಾವಣಗೆರೆ. **ಹಾಗೂ ಬಂಧು-ಮಿತ್ರರು.**

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.






**ಶುಭಾಶಯಗಳು**


ಶ್ರೀ ಸುಧೀಂದ್ರಬಾಬು

ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್‌ರವರು **ಮೆ॥ ಪ್ರತೀಕ್ ಕನ್ಸಲ್ಟೆನ್ಸಿ ಸರ್ವೀಸಸ್, ದಾವಣಗೆರೆ** ಇವರು ನಿರ್ಮಿಸಿರುವ ಕಟ್ಟಡಕ್ಕೆ ದಾವಣಗೆರೆ ಜಿಲ್ಲೆಯಲ್ಲಿ **ಅತ್ಯುತ್ತಮ ಗೃಹ ಕಟ್ಟಡ ಎಂದು ಗುರುತಿಸಿದ್ದು,**

**ಐಸಿಐ-ಅಲ್ಟ್ರಾಟೆಕ್ ಅವಾರ್ಡ್-2011ರ ವಿಜೇತರಾಗಿದ್ದಾರೆ.**

ಶುಭಾಶಯಗಳನ್ನು ಕೋರುವವರು....

✧ ಎ.ರಾಮು (ಎಟಿಕೆ) ✧ ಕುಮಾರಸ್ವಾಮಿ ✧ ಗಿರೀಶ್ ಮಾಗಾನಹಳ್ಳಿ,
**ದಾವಣಗೆರೆ ಆಪ್ಟಿಕಲ್ಸ್ ಫ್ರೆಂಡ್ಸ್ ಗ್ರೂಪ್**

**ಭಕ್ತಿಪೂರ್ವಕ ಶುಭಾಶಯಗಳು**



ಕುವೆಂಪು ವಿಶ್ವ ವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾಗಿರುವ ಸಾಣೇಹಳ್ಳಿ ಶ್ರೀಮಠದ
**ಪರಮಪೂಜ್ಯ ಶ್ರೀ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ**
ಅವರಿಗೆ ನಮ್ಮ ಭಕ್ತಿ ಪೂರ್ವಕ ಶುಭಾಶಯಗಳು.



**ಶ್ರೀ ಬಸವ ಗುರುಕುಲ ವಿದ್ಯಾಸಂಸ್ಥೆ (ರಿ), ಕುಂಬಳೂರು**




| | | | | |
|---|---|---|---|---|
| ಬಿ. ಸಿದ್ದಪ್ಪ<br>ಉಪಾಧ್ಯಕ್ಷರು | ಹೆಚ್.ಬಿ. ಶಿವಕುಮಾರ್<br>ಕಾರ್ಯದರ್ಶಿ | ಕೆ. ಚಿದಾನಂದಪ್ಪ<br>ಖಜಾಂಚಿ | ಕೆ. ತೀರ್ಥಪ್ಪ<br>ನಿರ್ದೇಶಕರು | ಸಣ್ಣಗೌಡ್ರ ನಾಗರಾಜಪ್ಪ<br>ನಿರ್ದೇಶಕರು |



| | | | | |
|---|---|---|---|---|
| ಹೆಚ್.ಬಿ. ಶಿವರುದ್ರಪ್ಪ<br>ನಿರ್ದೇಶಕರು | ಡಿ.ಹೆಚ್. ರವೀಂದ್ರ<br>ನಿರ್ದೇಶಕರು | ಬಿ.ಎಂ. ಹನುಮಂತಪ್ಪ<br>ನಿರ್ದೇಶಕರು | ಎನ್.ಜೆ. ಕಲ್ಲೇಶ್<br>ನಿರ್ದೇಶಕರು | ಬಿ.ಪಿ. ಬಸವನಗೌಡ<br>ನಿರ್ದೇಶಕರು |

**ಭಕ್ತಿ ಪೂರ್ವಕ ಶುಭಾಶಯಗಳು**



ಪ್ರಗತಿಪರ ಚಿಂತಕರೂ, ರಂಗಭೂಮಿ ಬಗ್ಗೆ ಅಪಾರ ಕಾಳಜಿಯುಳ್ಳವರು, ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಫೆಲೋಷಿಪ್ ಪ್ರಶಸ್ತಿ ಪುರಸ್ಕೃತರೂ ಆದ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಶಾಖೆ ಸಾಣೇಹಳ್ಳಿ ಶ್ರೀಮಠದ
**ಪರಮಪೂಜ್ಯ ಶ್ರೀ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಮಹಾ ಸ್ವಾಮೀಜಿ**
ಅವರು ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾಗಿರುವ ಈ ಶುಭ ಸಂದರ್ಭದಲ್ಲಿ ಅವರಿಗೆ ನಮ್ಮೆಲ್ಲರ ಭಕ್ತಿ ಪೂರ್ವಕ ಶುಭಾಶಯಗಳು.

**ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.**

ಕಾರ್ಯಕಾರಿ ಮಂಡಳಿ ಸದಸ್ಯರು

**ಶ್ರೀಯುತ ಎಂ.ಬಿ ಸಂಗಮೇಶ್ವರಗೌಡ**
ಅಧ್ಯಕ್ಷರು


**ಶ್ರೀಯುತ ಐಗೂರು ಸಿ.ಚಂದ್ರಶೇಖರ್**
ಉಪಾಧ್ಯಕ್ಷರು

ನಿರ್ದೇಶಕರುಗಳು :

- ❖ ಶ್ರೀಯುತ ಎ.ಜೆ.ಸಂದೀಪ್
- ❖ ಶ್ರೀಯುತ ಆಲೂರು ಬಿ.ನಾಗಭೂಷಣ್
- ❖ ಶ್ರೀಯುತ ದೊಗ್ಗಳ್ಳಿ ಎಂ.ಬಸವರಾಜ್
- ❖ ಶ್ರೀಯುತ ಈ.ಚಂದ್ರಣ್ಣ
- ❖ ಶ್ರೀಯುತ ಕೆ.ಜಿ.ಚಿದಾನಂದ
- ❖ ಶ್ರೀಯುತ ಎಂ.ಎಸ್.ಮಹೇಶ್ವರಯ್ಯ
- ❖ ಶ್ರೀಯುತ ಜಿ.ಡಿ.ದೇವರಾಜ
- ❖ ಶ್ರೀಯುತ ಎಂ.ಚಂದ್ರಶೇಖರಯ್ಯ
- ❖ ಶ್ರೀಯುತ ಡಿ.ಸುರೇಂದ್ರಪ್ಪ
- ❖ ಶ್ರೀಯುತ ಬಿ.ರೇವಣಸಿದ್ದಪ್ಪ
- ❖ ಶ್ರೀಯುತ ಹೆಚ್.ಎಂ.ಸುಧಾ

**ಶ್ರೀಯುತ ಹೆಚ್.ಎಸ್.ಬಸವಂತಪ್ಪ**, ಪ್ರಧಾನ ವ್ಯವಸ್ಥಾಪಕರು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು.

**ಭಕ್ತಿ ಪೂರ್ವಕ ಅಭಿನಂದನೆಗಳು**



**ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿಗೆ ಪುರಸ್ಕೃತರಾಗಿರುವ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಶಾಖೆ ಸಾಣೇಹಳ್ಳಿ ಮಠದ ಪಟ್ಟಾಧ್ಯಕ್ಷರಾದ**
**ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರಿಗೆ**
**ಭಕ್ತಿ ಪೂರ್ವಕ ಅಭಿನಂದನೆ.**



| | | | | |
|---|---|---|---|---|
| ಹೆಚ್.ಜಿ. ನಾಗೇಂದ್ರಪ್ಪನವರು | ಶ್ರೀ ಮುದೇಗೌಡ್ರ ಬಸವರಾಜಪ್ಪನವರು | ಶ್ರೀ ಡಿ. ಸುರೇಂದ್ರಪ್ಪನವರು | ಶ್ರೀ ದೊಗ್ಗಳ್ಳಿ ಬಸವರಾಜ್‌ರವರು | ಶ್ರೀ ಕರೇಶಿವಪ್ಪರ ಸಿದ್ದೇಶ್‌ರವರು |



| | | | | |
|---|---|---|---|---|
| ಶ್ರೀ ಆಲೂರು ನಾಗಭೂಷಣ್‌ರವರು | ಶ್ರೀ ಬಿ.ಜಿ.ಆರ್. ಹಾಲೇಶ್‌ರವರು | ಶ್ರೀ ಎನ್.ಜಿ. ಸ್ವಾಮಿಯವರು | ಶ್ರೀ ಅಣಬೇರು ಜಗದೀಶ್‌ರವರು | ಶ್ರೀ ಜೆ.ಸಿ. ಕಲ್ಲೇಶ್‌ರವರು |



| | | | | |
|---|---|---|---|---|
| ಶ್ರೀ ಕೆ.ಎನ್. ಸೋಮಶೇಖರಪ್ಪನವರು | ಶ್ರೀ ಬಿ.ಎಂ. ಬಸವರಾಜ್‌ರವರು | ಶ್ರೀ ಎ. ಬಸವರಾಜಪ್ಪನವರು | ಶ್ರೀ ಎಸ್. ಶಿವಮೂರ್ತಿಯವರು | ಶ್ರೀ ಬಿ. ಸಣ್ಣವೀರಪ್ಪನವರು |

**ಶ್ರೀ ತರಳಬಾಳು ಜಗದ್ಗುರು ಶ್ರೀ ಗುರುಶಾಂತರಾಜ ದೇಶೀಕೇಂದ್ರ ವಿದ್ಯಾರ್ಥಿ ನಿಲಯದ ಕಾರ್ಯಕಾರಿ ಸಮಿತಿ, ನೌಕರ ವರ್ಗ ಹಾಗೂ ವಿದ್ಯಾರ್ಥಿ ವೃಂದ, ಹದಡಿ ರಸ್ತೆ, ದಾವಣಗೆರೆ-2.**

# ದೊಡ್ಡಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ಬಸವ ಜಯಂತಿ




(1ನೇ ಪುಟದಿಂದ)

ಆಶಿಸಿದರು.

ಹಿರಿಯ ಸಾಹಿತಿ ಚನ್ನವೀರ ಕಣವಿ ಅವರು, ಬಸವ ಜಯಂತಿಯನ್ನು ಪ್ರಥಮ ಬಾರಿಗೆ ಆಚರಿಸಿದ ಸ್ಥಳದಲ್ಲಿ ಸ್ಮಾರಕ ನಿರ್ಮಿಸಬೇಕು. ಬಸವಣ್ಣನವರ 100 ವಚನಗಳ ಸಣ್ಣ ಪುಸ್ತಕ ಹಾಗೂ ಭಾವ ಚಿತ್ರವನ್ನು ಮನೆ ಮನೆಗೆ ಮುಟ್ಟಿಸಬೇಕೆಂದು ಸಲಹೆ ನೀಡಿದರು.

ಬಸವಣ್ಣನವರ ವಚನಗಳನ್ನು ಬೇರೆ ಭಾಷೆಗಳಿಗೆ ತರ್ಜುಮೆ ಮಾಡಬೇಕು. ರಾಷ್ಟ್ರ ಮಟ್ಟದಲ್ಲಿ ದೆಹಲಿಯಲ್ಲಿ, ರಾಜ್ಯ ಮಟ್ಟದಲ್ಲಿ ಬೆಂಗಳೂರಿನಲ್ಲಿ ಅದ್ಧೂರಿಯಾಗಿ ಕಾರ್ಯಕ್ರಮ ನಡೆಸಬೇಕು ಎಂದರು.

ಬಸವ ಜಯಂತಿ ಆಚರಣೆಗೆ ಕ್ರಿಯಾ ಯೋಜನೆ ರೂಪಿಸಬೇಕು. ವಿಚಾರ ಸಂಕಿರಣವನ್ನು ಏರ್ಪಡಿಸಬೇಕೆಂದ ಅವರು, ಯಾವುದೇ ಭಿನ್ನಾಭಿಪ್ರಾಯವಿಲ್ಲದೇ ಒಗ್ಗಟ್ಟಾಗಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ತಿಳಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಮಲ್ಲಪ್ಪ ಅವರು, ಬಸವಣ್ಣನವರ ಬಗ್ಗೆ ಉಪನ್ಯಾಸ ಕೇಳುತ್ತೇವೆ. ಆದರೆ, ಅದರಂತೆ ನಡೆಯುತ್ತಿಲ್ಲ, ನಾವು ಪರಿವರ್ತನೆಯಾಗುತ್ತಿಲ್ಲ ಎಂದು ವಿಷಾದಿಸಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಅವರು, ಬಸವ ಜಯಂತಿ ಕಾರ್ಯಕ್ರಮ ಆಚರಣೆಗೆ ತಮ್ಮ ಪ್ರೋತ್ಸಾಹ - ಸಹಕಾರ ಸದಾ ಇದೆ. ಯಾರೂ ಕಾರ್ಯಕ್ರಮಕ್ಕೆ ಕಳಂಕ ತರದಂತೆ ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮಿಗಳು, ಬಸವ ಜಯಂತಿಯನ್ನು ಪ್ರಥಮ ಬಾರಿಗೆ ನಗರದ ವಿರಕ್ತ ಮಠದಲ್ಲಿ ಹರ್ಡೇಕರ್ ಮಂಜಪ್ಪ ಮತ್ತು ಶ್ರೀ ಮೃತ್ಯುಂಜಯ ಅಪ್ಪನವರು ಆಚರಿಸಿದರೆಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಮುಖಂಡ ಡಿ.ಬಸವರಾಜ್ ಅವರು, ಪ್ರತಿಯೊಂದು ಊರಿನಲ್ಲೂ ಬಸವಣ್ಣನವರ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ತಿಳಿಸಿದರು.

ವಿಶ್ವ ಶರಣ ಸಂಕುಲದ ಸಂಚಾಲಕರಾದ ಅರವಿಂದ್ ಜತ್ತಿ ಅವರು, ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಎಲ್ಲರೂ ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು, ಒಮ್ಮನಸ್ಸಿನಿಂದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ನಾನು ಶೂನ್ಯ, ನೀನು ಶೂನ್ಯ, ಒಂದೇ ಒಂದು ಉಳಿಯುತ್ತದೆ. ಅದೇ ಬಸವಣ್ಣ ಎಂದು ಬಸವ ಜಯಂತಿ ಶತಮಾನೋತ್ಸವ ಆಚರಣೆ ಬಗ್ಗೆ ಮಾರ್ಮಿಕವಾಗಿ ನುಡಿದರು.

ಸಭೆಯಲ್ಲಿ ಕೈಗೊಂಡ ಪ್ರಮುಖ ನಿರ್ಣಯಗಳನ್ನು ವಿವರಿಸಿದ ಅವರು, ರಾಷ್ಟ್ರ ಮಟ್ಟದಲ್ಲಿ ಆಚರಿಸುವ ಬಸವ ಜಯಂತಿ ಸಮಾರಂಭದಲ್ಲಿ 10 ಭಾಷೆಗಳಲ್ಲಿ ಬಸವಣ್ಣನವರ ವಚನ ಪುಸ್ತಕಗಳನ್ನು ರಾಷ್ಟ್ರಪತಿಯವರಿಂದ 10 ರಾಜ್ಯಗಳ ಮುಖ್ಯಮಂತ್ರಿಗಳಿಗೆ ನೀಡುವಂತೆ ಕಾರ್ಯಕ್ರಮ ರೂಪಿಸಬೇಕೆಂದು ನಿರ್ಧರಿಸಲಾಯಿತು ಎಂದರು.

ಶಾಲೆಗಳ ಪಠ್ಯ ಪುಸ್ತಕಗಳಲ್ಲಿ ಬಸವಣ್ಣನವರ ವಚನಗಳನ್ನು ಅಳವಡಿಸಬೇಕೆಂದು ಸರ್ಕಾರದ ಮೇಲೆ ಒತ್ತಡ ತರಬೇಕೆಂದು ನಿರ್ಣಯಿಸಲಾಯಿತು.

ಹರ್ಡೇಕರ್ ಮಂಜಪ್ಪ - ಶ್ರೀ ಮೃತ್ಯುಂಜಯಪ್ಪ ಅಪ್ಪಗಳ ಜೊತೆ ಬಸವಣ್ಣನವರ ಭಾವಚಿತ್ರ ಇರುವ ಅಂಚೆ ಚೀಟಿಯನ್ನು ಹೊರ ತರಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಲು ತೀರ್ಮಾನಿಸಲಾಯಿತು.

ಸರ್ಕಾರಿ ಕಛೇರಿಗಳಲ್ಲಿ, ಶಾಲಾ - ಕಾಲೇಜುಗಳಲ್ಲಿ ಬಸವಣ್ಣನವರ ಭಾವಚಿತ್ರಗಳನ್ನು ಹಾಕಬೇಕೆಂದು ಸರ್ಕಾರವನ್ನು ಒತ್ತಾಯಿಸಲು ನಿರ್ಣಯಿಸಲಾಯಿತು.

ವೇದಿಕೆಯಲ್ಲಿ ಶಾಸಕ ಚಂದ್ರಕಾಂತ್ ಬೆಲ್ಲದ್, ಬಾಪೂಜಿ ವಿದ್ಯಾಸಂಸ್ಥೆ ಅಧ್ಯಕ್ಷ ಕಾಸಲ್ ವಿಠಲ್, ವರ್ತಕ ಕಂದನಕೋವಿ ರುದ್ರಪ್ಪ, ಮುಖಂಡರಾದ ಕೆ.ಬಿ.ಶಂಕರ ನಾರಾಯಣ, ಕ್ಷೀರ ಸಾಗರದ ಹನುಮಂತಪ್ಪ, ಟಿ.ಜಯದೇವಪ್ಪ, ದಿನೇಶ್ ಶೆಟ್ಟಿ, ಎ.ಹೆಚ್. ಶಿವಮೂರ್ತಿ ಸ್ವಾಮಿ, ದೇವರಮನಿ ಶಿವಕುಮಾರ್, ಶ್ರೀ ಮಲ್ಲಿಕಾರ್ಜುನ ಶ್ರೀಗಳು, ರಾಮಾನಾಯಕ್, ದವಳೇಶಿ ಮತ್ತಿತರರು ಉಪಸ್ಥಿತರಿದ್ದರು.

ಪೂರ್ವಭಾವಿ ಸಭೆಯನ್ನು ಏರ್ಪಡಿಸಲು ಮಹಾಂತೇಶ್ ಅಗಡಿ, ಎ.ಎಸ್.ಮೃತ್ಯುಂಜಯ, ಅಜ್ಜಂಪುರ ಸಿದ್ದಮಲ್ಲಪ್ಪ, ಅಜ್ಜಂಪುರ ಶಂಭುಲಿಂಗಪ್ಪ, ಹೆಚ್.ಎಂ.ಸ್ವಾಮಿ, ರುದ್ರೇಶ್ ಮತ್ತಿತರರು ಬಹುವಾಗಿ ಶ್ರಮಿಸಿದರು.

## ದೂರವಾಣಿ ಕದ್ದಾಲಿಕೆ : ಸನ್ ಟ್ಯಾಬ್ಲಾಯ್ಡ್ ಸಿಬ್ಬಂದಿ ಸೇರಿ 8 ಜನರ ಬಂಧನ

ಲಂಡನ್, ಫೆ. 11 - 'ನ್ಯೂಸ್ ಆಫ್ ದಿ ವರ್ಲ್ಡ್' ದೂರವಾಣಿ ಕದ್ದಾಲಿಗೆ ಹಗರಣಕ್ಕೆ ಸಂಬಂಧಿಸಿದಂತೆ 'ದಿ ಸನ್' ಟ್ಯಾಬ್ಲಾಯ್ಡ್ ಪತ್ರಿಕೆಯ ಐವರು ಸಿಬ್ಬಂದಿ ಸೇರಿದಂತೆ ಎಂಟು ಜನರನ್ನು ಬಂಧಿಸಲಾಗಿದೆ. ದೂರವಾಣಿ ಕದ್ದಾಲಿಕೆಗಾಗಿ ಪೊಲೀಸರು ಹಾಗೂ ರಕ್ಷಣಾ ಇಲಾಖೆಗೆ ಲಂಚ ನೀಡಲಾಗಿತ್ತು.

ಬ್ರಿಟನ್ ಸಶಸ್ತ್ರ ಪಡೆಗಳ ಹಾಲಿ ಪೊಲೀಸ್ ಅಧಿಕಾರಿ, ರಕ್ಷಣಾ ಇಲಾಖೆಯ ಓರ್ವ ಉದ್ಯೋಗಿ ಹಾಗೂ ಸನ್ ಟ್ಯಾಬ್ಲಾಯ್ಡ್ ಪತ್ರಿಕೆಯ ಐವರು ಸಿಬ್ಬಂದಿ ಬಂಧಿತರಲ್ಲಿ ಸೇರಿದ್ದಾರೆ. ಸುದ್ದಿ ಪತ್ರಿಕೆಗಳಿಗೆ ಅಗತ್ಯವಾದ ಸಂಚಲನಾತ್ಮಕ ಸುದ್ದಿ ನೀಡಲು ಪೊಲೀಸರು ಹಾಗೂ ಸಾರ್ವಜನಿಕ ಅಧಿಕಾರಿಗಳು ಲಂಚ ಪಡೆದಿದ್ದರು ಎಂದು ಆರೋಪಿಸಲಾಗಿದೆ.

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಕೌಸರ್ ರೇಷ್ಮಾ

ದಾವಣಗೆರೆ, ಫೆ.11- ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಯನ್ನಾಗಿ ಶ್ರೀಮತಿ ಕೌಸರ್ ರೇಷ್ಮಾ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಕೌಸರ್ ರೇಷ್ಮಾ ಅವರು, ಈವರೆಗೂ ತೀರ್ಥಹಳ್ಳಿ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.

## ರಸ್ತೆ ಅಗಲೀಕರಣಕ್ಕಾಗಿ ಐತಿಹಾಸಿಕ ಸ್ಮಾರಕ ನಾಶ : ವ್ಯಾಪಕ ಖಂಡನೆ

ಜಗಳೂರು, ಫೆ. 11- ರಾಜ್ಯ ಹೆದ್ದಾರಿ ಅಗಲೀಕರಣಕ್ಕಾಗಿ ದೊಣೆಹಳ್ಳಿ ಗ್ರಾಮದ ಬಳಿ ಇದ್ದ ಮರೆನೂರು ಮಹಾರಾಜರ ಕಾಲದ ಐತಿಹಾಸಿಕ ಸ್ಮಾರಕ ಮಂಟಪವನ್ನು ರಾಜ್ಯ ರಸ್ತೆ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ನೆಲಸಮಗೊಳಿಸಿರುವುದನ್ನು ವಿವಿಧ ಜನಪರ ಸಂಘಟನೆಗಳು ಖಂಡಿಸಿವೆ.

1932-34ರ ಸಮಯದಲ್ಲಿ ದೊಣ್ಣೆಹಳ್ಳಿ ಜಿನಿಗಿಹಳ್ಳಕ್ಕೆ ಸೇತುವೆ ನಿರ್ಮಿಸಿ ಉದ್ಘಾಟನೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಅವರು ಆಗಮಿಸಿದ ಸ್ಮರಣಾರ್ಥ ನಿರ್ಮಿಸಿದ್ದ ಮಂಟಪವನ್ನು ಹೆದ್ದಾರಿ ನಿರ್ಮಿಸಲು ನೆಲಸಮಗೊಳಿಸಿರುವುದು ತಾಲ್ಲೂಕು ಆಡಳಿತದ ವೈಫಲ್ಯವಾಗಿದೆ.

ಸದರಿ ಸ್ಥಳದಲ್ಲಿಯೇ ಸ್ಮಾರಕವನ್ನು ಪುನರ್ ನಿರ್ಮಿಸಬೇಕೆಂದು ವಿದ್ಯಾರ್ಥಿ ಫೆಡರೇಷನ್ ಮುಖಂಡರಾದ ರೋಷನ್ ಅಲಿ, ನಾಗರಾಜ್, ಮಹಾಲಿಂಗಪ್ಪ, ತಿಪ್ಪೇಸ್ವಾಮಿ, ಯುವಜನ ಫೆಡರೇಷನ್ ಮುಖಂಡರಾದ ಆರ್. ಓಬಳೇಶ್, ದಲಿತ ಸಂಘರ್ಷ ಸಮಿತಿ ಮುಖಂಡ ನಾಗಲಿಂಗಪ್ಪ ಮತ್ತಿತರರು ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಪಡಿಸಿದ್ದಾರೆ.

## ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಬಸವರಾಜ್ ಶಿವಗಂಗಾ



ದಾವಣಗೆರೆ, ಫೆ.11- ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯನ್ನಾಗಿ ಬಸವರಾಜ್ ವಿ.ಶಿವಗಂಗಾ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಜಬ್ಬಾರ್ ತಿಳಿಸಿದ್ದಾರೆ.

ಶಾಸಕ ಡಾ।। ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳ ಶಿಫಾರಸ್ಸಿನ ಮೇರೆಗೆ ಈ ನೇಮಕ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ಹೊನ್ನಾಳಿ ವಸತಿ ಶಾಲೆಗಳ ಪ್ರವೇಶಕ್ಕೆ ಅರ್ಜಿ

ಹೊನ್ನಾಳಿ, ಫೆ. 11- ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಮತ್ತು ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ಇಲಾಖೆಯ ಮುರಾರ್ಜಿ ವಸತಿ ಶಾಲೆಗೆ 2012-13ನೇ ಸಾಲಿಗೆ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಪ್ರತಿಭಾನ್ವಿತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ 6ನೇ ತರಗತಿಗೆ ಫೆ. 25ರ ವರೆಗೆ ಅರ್ಜಿ ವಿತರಿಸಲಾಗುವುದು.


ಶುಭಾಶಯಗಳು



ಶ್ರೀ ಸುಧೀಂದ್ರಬಾಬು

ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್‌ರವರು ಮೆ।। ಪ್ರತೀಕ್ ಕನ್ಸಲ್ಟೆನ್ಸಿ ಸರ್ವೀಸಸ್, ದಾವಣಗೆರೆ ಇವರು ನಿರ್ಮಿಸಿರುವ ಕಟ್ಟಡಕ್ಕೆ ದಾವಣಗೆರೆ ಜಿಲ್ಲೆಯಲ್ಲಿ ಅತ್ಯುತ್ತಮ ಗೃಹ ಕಟ್ಟಡ ಎಂದು ಗುರುತಿಸಿದ್ದು,

ಐಸಿಐ-ಅಲ್ಟ್ರಾಟೆಕ್ ಅವಾರ್ಡ್-2011ರ ವಿಜೇತರಾಗಿದ್ದಾರೆ.

ಶುಭಾಶಯಗಳನ್ನು ಕೋರುವವರು....

ಕಲ್ಪತರು ಪ್ಲೈವುಡ್ಸ್

ಭಗವಾನ್ ಮಹಾವೀರ ರಸ್ತೆ, ದಾವಣಗೆರೆ.


# ಎರಡನೇ ರಾಜಧಾನಿ ಆಗಲು ಅರ್ಹ

(1ನೇ ಪುಟದಿಂದ)

ಸಂಸದ ಜಿ.ಎಂ.ಸಿದ್ದೇಶ್ ಅವರು, ಚನ್ನಗಿರಿ ತಾಲ್ಲೂಕಿನ ಉಬ್ರಾಣಿ ಏತ ನೀರಾವರಿ ಯೋಜನೆಗೆ ಸರ್ಕಾರ 106 ಕೋಟಿ ರೂ. ಖರ್ಚು ಮಾಡಿದೆ. ದಾವಣಗೆರೆ ತಾಲ್ಲೂಕಿನ 22 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಶೇ.70ರಷ್ಟು ಪೂರ್ಣಗೊಂಡಿದೆ. 15 ಕೋಟಿ ರೂ. ವೆಚ್ಚದಲ್ಲಿ ಜಿಲ್ಲಾಧಿಕಾರಿ ಕಛೇರಿ ಸಂಕೀರ್ಣ ಕಟ್ಟಡ ಮುಕ್ತಾಯಗೊಂಡಿದೆ. ಜಿಲ್ಲೆಗೆ ಬಸವ - ಬುದ್ಧ - ಯೋಜನೆಯಲ್ಲಿ 48 ಸಾವಿರ ಮನೆ ಮಂಜೂರಾಗಿವೆ ಎಂದು ಹೇಳಿ, ಜಿಲ್ಲೆಯ ಆಯ್ದ ಸ್ಥಳಗಳನ್ನು ಪ್ರವಾಸಿ ತಾಣಗಳನ್ನಾಗಿಸಲು ಪ್ರಯತ್ನಿಸುವುದಾಗಿ ಹೇಳಿಕೊಂಡರು.

ಸಚಿವ ಎಂ.ಪಿ. ರೇಣುಕಾಚಾರ್ಯ ಜಿಲ್ಲೆ ಪ್ರಗತಿ ಸಾಧಿಸುತ್ತಿದ್ದು, ಅಧಿಕಾರಿಗಳು ಹಳ್ಳಿಯಿಂದ ಬರುವ ಜನರಿಗೆ ನಾನಾ ನೆಪ ಹೇಳದೇ ಪ್ರಾಮಾಣಿಕವಾಗಿ ಸ್ಪಂದಿಸಿ ಕೆಲಸ ಮಾಡಿ ಕೊಡುವ ಮೂಲಕ ಜಿಲ್ಲಾ ಹಬ್ಬವನ್ನು ಸಾರ್ಥಕ ಪಡಿಸಬೇಕೆಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ ಮುಖ್ಯ ಸಚೇತಕ ಎ.ಹೆಚ್.ಶಿವಯೋಗಿಸ್ವಾಮಿ, ಶಾಸಕ ಎಸ್.ವಿ. ರಾಮಚಂದ್ರ, ಬಸವರಾಜ ನಾಯ್ಕ ಮಾತನಾಡಿದರು.

ಶಾಸಕ ಚಂದ್ರಕಾಂತ್ ಬೆಲ್ಲದ್, ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಎಸ್.ಎಂ.ವೀರೇಶ್, ಪಾಲಿಕೆ ಮೇಯರ್ ಹೆಚ್. ಎನ್.ಗುರುನಾಥ್, ಉಪ ಮೇಯರ್ ರತ್ನಾಬಾಯಿ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯದರ್ಶಿ ಗುತ್ತಿ ಜಂಬುನಾಥ್, ಸುಗಮ ಸಂಗೀತ ರಾಜ್ಯಾಧ್ಯಕ್ಷ ವೈ.ಕೆ.ಮುದ್ದುಕೃಷ್ಣ, ದಾವಣಗೆರೆ ವಿ.ವಿ. ಉಪ ಕುಲಪತಿ ಡಾ।। ಇಂದುಮತಿ, ಅಪರ ಜಿಲ್ಲಾಧಿಕಾರಿ ವಿಜಯ ಕುಮಾರ್, ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಷಡಾಕ್ಷರಪ್ಪ, ಇ.ಓ. ಎಲ್.ಎಸ್. ಪ್ರಭುದೇವ್, ತಹಶೀಲ್ದಾರ್ ಡಾ।। ಬಿ.ಆರ್.ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

ಸಮಾರಂಭಕ್ಕೂ ಮುನ್ನ ದುರ್ಗಾಂಬಿಕಾ ದೇವಸ್ಥಾನ ದಿಂದ, ಮೈದಾನದವರೆಗೆ ಡೊಳ್ಳು, ಆನೆ, ನಂದಿಕೋಲು, ವಾದ್ಯ ಮೇಳದೊಂದಿಗೆ ಮೆರವಣಿಗೆ ನಡೆಯಿತು. ಸಭೆ ನಂತರ ಗುರು ಕಿರಣ್ ಅವರಿಂದ ರಸಮಂಜರಿ, ಅನೇಕ ನೃತ್ಯ ರೂಪಕ ಕಾರ್ಯಕ್ರಮಗಳು ನಡೆದವು.

# 2500 ಆಯ್ದ ವಚನಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಲು ನಿರ್ಧಾರ

ದಾವಣಗೆರೆ, ಫೆ. 11- ಅಮೇರಿಕಾ, ಆಸ್ಟ್ರೇಲಿಯಾ, ಸಿಂಗಾಪುರ, ದುಬೈ, ಯು.ಕೆ., ಕೆನಡಾ ರಾಷ್ಟ್ರಗಳಲ್ಲಿ ಬಸವ ಸಂಘಟನೆಗಳನ್ನು ಉತ್ತೇಜಿಸಲು ಬಸವಣ್ಣನವರ ಹಾಗೂ 176 ಇತರೆ ಶರಣರ 2500 ಆಯ್ದ ವಚನಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ ಲೋಕಾರ್ಪಣೆಗೊಳಿಸಲು ನಿರ್ಧರಿಸಲಾಗಿದೆ ಎಂದು ವಿಶ್ವ ಶರಣ ಸಂಕುಲದ ಸಂಚಾಲಕ ಅರವಿಂದ ಜತ್ತಿ ತಿಳಿಸಿದರು.

ಅವರು ಇಂದು ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಬಸವ ಜಯಂತಿ ಶತಮಾನೋತ್ಸವ ಆಚರಣೆ ಸಂಬಂಧ ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ವಿವರಿಸುತ್ತಿದ್ದರು.

ಇಂಗ್ಲಿಷ್‌ನಿಂದ ರಷ್ಯನ್ ಭಾಷೆಯಲ್ಲಿ ಭಾಷಾಂತರಿಸಿದ ವಚನಗಳನ್ನು ರಷ್ಯಾದಲ್ಲಿಯೇ ಬಿಡುಗಡೆ ಮಾಡಬೇಕು. ಇಂಗ್ಲಿಷ್ ಭಾಷೆಯಲ್ಲಿನ ವಚನಗಳನ್ನು ಪ್ರಪಂಚದ 2ನೇ ದೊಡ್ಡ ಭಾಷೆಯಾಗಿರುವ ಸ್ಪ್ಯಾನಿಷ್ ಭಾಷೆಗೆ ಭಾಷಾಂತರಿಸಬೇಕು ಎಂದು ನಿರ್ಣಯಿಸಲಾಯಿತು ಎಂದರು.

ದೇಶದ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶದ ಅಲಿಘಡ ಮುಸ್ಲಿಂ ವಿಶ್ವವಿದ್ಯಾನಿಲಯದಲ್ಲಿ ಆಯಾ ಭಾಷೆಯಲ್ಲಿನ ವಚನಗಳನ್ನು ಲೋಕಾರ್ಪಣೆ ಮಾಡಬೇಕೆಂದು ನಿರ್ಧರಿಸಲಾಗಿದೆ ಎಂದು ಹೇಳಿದರು.

ದೆಹಲಿಯಲ್ಲಿ ಶರಣ ಲೋಕ, ಅನುಭವ ಮಂಟಪ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಒತ್ತಡ ತರಬೇಕು. ರಾಷ್ಟ್ರಮಟ್ಟದಲ್ಲಿ ಕಾಯಕ ಪ್ರಶಸ್ತಿಯನ್ನು ಬಸವಣ್ಣನವರ ನೆನಪಿನಲ್ಲಿ ಘೋಷಿಸಲು ಪ್ರಧಾನ ಮಂತ್ರಿಗಳಿಗೆ ಒತ್ತಾಯಿಸಬೇಕೆಂದು ನಿರ್ಧರಿಸಲಾಯಿತು ಎಂದರು.

ರಾಷ್ಟ್ರೀಯ ವಿಚಾರಧಾರೆಯ ಪ್ರಸಾರಕ್ಕಾಗಿ ಟಿ.ವಿ. ಚಾನಲ್ ಸ್ಥಾಪಿಸಲು ಸಮಿತಿ ನೇಮಿಸುವಂತೆ ಸರ್ಕಾರವನ್ನು ಒತ್ತಾಯಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

## ಫೋನ್ ಮಾಡಿದ್ದ ನಿಜ, ಪ್ರಾಣ ಬೆದರಿಕೆ ಹಾಕಿಲ್ಲ

### - ಸಚಿವ ರೇಣುಕಾಚಾರ್ಯ

ದಾವಣಗೆರೆ, ಫೆ. 11 - ಗುತ್ತಿಗೆದಾರ ಸವಳಂಗದ ಬೆಣ್ಣೆ ಲಿಂಗರಾಜ್ ಅವರಿಗೆ ಫೋನ್ ಮಾಡಿದ್ದು ನಿಜ. ಆದರೆ, ಪ್ರಾಣ ಬೆದರಿಕೆ ಹಾಕಿಲ್ಲವೆಂದು ಸಚಿವ ಎಂ.ಪಿ. ರೇಣುಕಾಚಾರ್ಯ ಇಂದಿಲ್ಲಿ ಪ್ರತಿಕ್ರಿಯಿಸಿದ್ದಾರೆ.

ಜಿಲ್ಲಾ ಹಬ್ಬದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಸಚಿವರು ಪತ್ರಕರ್ತರೊಂದಿಗೆ ಮಾತನಾಡಿ ಮೇಲಿನಂತೆ ಪ್ರತಿಕ್ರಿಯಿಸಿ, ಗುತ್ತಿಗೆದಾರ ಲಿಂಗರಾಜ್ ಪಿ.ಎಂ.ಜಿ.ಎಸ್.ವೈ. ಯೋಜನೆಯಲ್ಲಿ 2007ರಲ್ಲಿ ರಸ್ತೆ ನಿರ್ಮಾಣದಲ್ಲಿ 1 ಕೋಟಿ 47 ಲಕ್ಷ ರೂ. ಟೆಂಡರ್ ಪಡೆದು ಕಳಪೆ ಕಾಮಗಾರಿ ಮಾಡಿದ್ದರು. ಈಗ ಹೊನ್ನಾಳಿಗೆ ಎಸ್‌ಸಿ/ಎಸ್‌ಟಿ ಕಲ್ಯಾಣ ಅಭಿವೃದ್ಧಿಗೆಂದು 100 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಇದಕ್ಕೂ ಟೆಂಡರ್ ಹಾಕಿದ್ದಾರೆ. ಕಳಪೆ ಕಾಮಗಾರಿ ಮಾಡಿ, ಈಗ ಮತ್ತೆ ಟೆಂಡರ್ ಹಾಕಿರುವುದನ್ನು ಅವರಿಗೆ ಫೋನ್ ಮಾಡಿ ಪ್ರಶ್ನಿಸಿದ್ದೆ ಎಂದು ಹೇಳಿದರು.

ಸಚಿವರು ಫೋನ್ ಮಾಡಿದಾಗ ಗುತ್ತಿಗೆದಾರ ಸವಳಂಗ ಬೆಣ್ಣೆ ಲಿಂಗರಾಜ್, ಯಶವಂತಪುರ ರೈಲ್ವೆ ನಿಲ್ದಾಣದಲ್ಲಿದ್ದರೆಂದು ಹೇಳಲಾಗಿದ್ದು, ಗುತ್ತಿಗೆದಾರರು ಸಚಿವರ ವಿರುದ್ಧ ಪ್ರಾಣ ಬೆದರಿಕೆ ದೂರನ್ನು ಬೆಂಗಳೂರಿನ ಠಾಣೆಯಲ್ಲಿ ದಾಖಲಿಸಿದ್ದಾರೆ.

## ಉಪ ಲೋಕಾಯುಕ್ತರ ನೇಮಕಕ್ಕೆ ರಾಜ್ಯಪಾಲರ ತರಾಟೆ

(1ನೇ ಪುಟದಿಂದ)

ಚರ್ಚೆ ನಡೆಸಿ, ನ್ಯಾಯಮೂರ್ತಿ ಚಂದ್ರಶೇಖರಯ್ಯ ಅವರನ್ನು ಉಪ ಲೋಕಾಯುಕ್ತರನ್ನಾಗಿ ನೇಮಿಸಿದೆ. ಅದು ಮುಖ್ಯ ನ್ಯಾಯಮೂರ್ತಿ ವಿಕ್ರಮಜಿತ್ ಸೇನ್ ಅವರ ಜೊತೆ ಚರ್ಚಿಸಿಲ್ಲ ಎಂದು ರಾಜ್ಯಪಾಲರು ಹೇಳಿದ್ದಾರೆ.

ಆದರೆ, ನಾನು ರಾಜಕೀಯ ಅಜೆಂಡಾ ಹೊಂದಿದ್ದೇನೆ ಎಂದು ಸರ್ಕಾರ ಅನಗತ್ಯವಾಗಿ ಆರೋಪ ಮಾಡುತ್ತಿದೆ. ನಾನು ಸರ್ಕಾರದ ಮುಖ್ಯಸ್ಥನಾಗಿ ನನ್ನ ಕರ್ತವ್ಯವನ್ನು ಸೂಕ್ತವಾಗಿ ನಿರ್ವಹಿಸುತ್ತಿದ್ದೇನೆ ಎಂದವರು ತಿಳಿಸಿದ್ದಾರೆ.

## ಜೆಡಿಎಸ್ ಉಪಾಧ್ಯಕ್ಷರಾಗಿ ಹೆಚ್.ವಿ. ಪ್ರಭುಲಿಂಗಪ್ಪ

ದಾವಣಗೆರೆ, ಫೆ. 11 - ಜಿಲ್ಲಾ ಜನತಾದಳ (ಜಾತ್ಯತೀತ) ಪಕ್ಷದ ಜಿಲ್ಲಾ ಉಪಾಧ್ಯಕ್ಷರಾಗಿ ಹೆಚ್.ವಿ. ಪ್ರಭುಲಿಂಗಪ್ಪ ನೇಮಕಗೊಂಡಿದ್ದಾರೆ.

# ರಾಜೀನಾಮೆ ಕೊಡುವುದಿಲ್ಲ, ನನ್ನ ಪದಚ್ಯುತಿಗೆ ವಿಧಾನಸಭೆಯೇ ವೇದಿಕೆಯಾಗಲಿ

ಬೆಂಗಳೂರು, ಫೆ. 11 - ಉಪ ಲೋಕಾಯುಕ್ತ ಹುದ್ದೆ ನೇಮಕ ವಿವಾದದಿಂದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಹಾಗೂ ನ್ಯಾಯಮೂರ್ತಿ ಚಂದ್ರಶೇಖರಯ್ಯ ನಡುವೆ ಸಂಘರ್ಷ ಏರ್ಪಡುವ ಲಕ್ಷಣಗಳು ಕಂಡು ಬರುತ್ತಿವೆ.

ಉಪ ಲೋಕಾಯುಕ್ತರ ನೇಮಕ ಕುರಿತು ಸರ್ಕಾರ ತನ್ನ ಸಲಹೆ ಕೇಳಿಲ್ಲ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಕ್ರಮ್ ಜಿತ್ ಸೇನ್ ಹೇಳಿರುವ ಬೆನ್ನಲ್ಲೇ, ನಾನು ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ. ನನ್ನನ್ನು ಇಷ್ಟ ಬಂದಂತೆ ಇಳಿಸಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಚಂದ್ರಶೇಖರಯ್ಯ ಖಾರವಾಗಿ ತಿಳಿಸಿದ್ದಾರೆ.

ಆ ಮೂಲಕ ಉಪಲೋಕಾಯುಕ್ತ ನೇಮಕಾತಿ ವಿವಾದ ಜಟಿಲಗೊಳ್ಳುವ ಲಕ್ಷಣಗಳಿದ್ದು, ನ್ಯಾಯಾಂಗ ಕ್ಷೇತ್ರದ ಹಿರಿಯರ ಪರಸ್ಪರ ಭಿನ್ನಾಭಿಪ್ರಾಯಗಳ ನಡುವೆ ಸದಾನಂದಗೌಡ ನೇತೃತ್ವದ ಬಿಜೆಪಿ ಸರ್ಕಾರ ತೀವ್ರ ಇಕ್ಕಟ್ಟಿನಲ್ಲಿ ಸಿಲುಕುವಂತಾಗಿದೆ.

ಇಂದು ತಮ್ಮನ್ನು ಸಂಪರ್ಕಿಸಿದ ಸುದ್ಧಿಗಾರರ ಜತೆ ಮಾತನಾಡಿದ ಉಪ ಲೋಕಾಯುಕ್ತ ಚಂದ್ರಶೇಖರಯ್ಯ ಅವರು, ಲೋಕಾಯುಕ್ತ ಕಾಯ್ದೆಯ ಪ್ರಕಾರ ನನ್ನನ್ನು

**ಉಪ ಲೋಕಾಯುಕ್ತ ಚಂದ್ರಶೇಖರಯ್ಯ**

ಕೆಳಗಿಳಿಸಲು ಸಾಧ್ಯವಿಲ್ಲ. ಹಾಗೊಂದು ವೇಳೆ ಕೆಳಗಿಳಿಸಬೇಕು ಎಂದಾದರೆ ಅದಕ್ಕೆ ವಿಧಾನಸಭೆಯೇ ವೇದಿಕೆ ಆಗಬೇಕು ಎಂದು ಹೇಳಿದರು.

ತಮ್ಮನ್ನು ಕೆಳಗಿಳಿಸಬೇಕು ಎಂದಾದರೆ ವಿಧಾನಸಭೆಯಲ್ಲಿ ಚರ್ಚೆಯಾಗಬೇಕು. ಮೂರನೇ ಎರಡು ಭಾಗದಷ್ಟು ಶಾಸಕರು ತಮ್ಮ ಪದಚ್ಯುತಿಯ ಪರವಾಗಿ ಮತ ಹಾಕಿದರೆ ಮಾತ್ರವೇ ಮುಂದಿನ ಮಾತು ಎಂದರು.

ನನ್ನ ವಿರುದ್ಧ ಯಾವ ಆರೋಪವೂ ಇಲ್ಲ. ನಾನು ಯಾವ ತಪ್ಪನ್ನು ಮಾಡಿಯೂ ಇಲ್ಲ ಎಂದ ಅವರು, ಇಷ್ಟಾದರೂ ನನ್ನ ವಿರುದ್ಧ ಕೆಲವರು ಪಿತೂರಿ ನಡೆಸುತ್ತಿದ್ದಾರೆ. ಆದರೆ ನಾನು ಯಾವುದಕ್ಕೂ ಬಗ್ಗಿ ರಾಜೀನಾಮೆ ಕೊಡುವುದಿಲ್ಲ ಎಂದು ನುಡಿದರು.

ಮೈಸೂರಿನಲ್ಲಿ ನಡೆದಿದೆ ಎನ್ನಲಾದ ರೆಸಾರ್ಟ್ ಪ್ರಕರಣದ ಕುರಿತು ಆಂತರಿಕ ತನಿಖೆಯಾಗಿರುವುದು ನಿಜವಾದರೂ ಆ ತನಿಖೆ ಎಲ್ಲೂ ನಾನು ತಪ್ಪಿತಸ್ಥ ಎಂದು ಹೇಳಿಲ್ಲ ಅಂತ ಚಂದ್ರಶೇಖರಯ್ಯ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇದೇ ರೀತಿ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ನಾನು ಕೊಟ್ಟ ತೀರ್ಪಿನ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ನನ್ನ ಮೇಲೆ ಚಪ್ಪಲಿ ಎಸೆದ ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಈ ಬೆಳವಣಿಗೆಯ ಪೂರ್ತಿ ವಿವರವನ್ನು ಗಮನಿಸಬೇಕು ಎಂದವರು ಹೇಳಿದರು.

## ಇರಾನ್‌ಗೆ ಭಾರತದ ವ್ಯಾಪಾರಿ ನಿಯೋಗ : ಅಮೆರಿಕಗೆ ಕಿರಿಕಿರಿ

ವಾಷಿಂಗ್ಟನ್, ಫೆ. 11 - ಇರಾನ್ ತನ್ನ ಅಣು ಯೋಜನೆ ಕೈ ಬಿಡಬೇಕೆಂದು ಅಮೆರಿಕ ಗರಿಷ್ಠ ಆರ್ಥಿಕ ಒತ್ತಡ ಹೇರುತ್ತಿರುವುದರ ನಡುವೆಯೇ, ಭಾರತ ಅಲ್ಲಿಗೆ ಬೃಹತ್ ವ್ಯಾಪಾರಿ ನಿಯೋಗ ರವಾನಿಸಿರುವುದು ಭಾರತ - ಅಮೆರಿಕ ಸಂಬಂಧಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ನಿಯೋಗ ಕಳಿಸುವುದಾಗಿ ವಾಣಿಜ್ಯ ಕಾರ್ಯದರ್ಶಿ ರಾಹುಲ್ ಖುಲ್ಲರ್ ಹೇಳಿರುವುದು ಅಮೆರಿಕ-ಭಾರತದ ಸಂಬಂಧಗಳ ಮೇಲೆ ಪರಿಣಾಮ ಬೀರಲಿದೆ ಎಂದು ಅಂತರ ರಾಷ್ಟ್ರೀಯ ಸಂಬಂಧಗಳ ಪರಿಣಿತರು ಹೇಳಿದ್ದಾರೆ.

ಅಮೆರಿಕದ ನೇತೃತ್ವದಲ್ಲಿ ಹಲವಾರು ಅಂತರ ರಾಷ್ಟ್ರೀಯ ದಿಗ್ಬಂಧನಗಳಿಗೆ ಗುರಿಯಾಗಿರುವ ಇರಾನ್‌ಗೆ ನೆರವಾಗುವುದು ಸರಿಯಲ್ಲ ಎಂದು ಅಮೆರಿಕದ ಅಧಿಕಾರಿಗಳು ಭಾರತಕ್ಕೆ ಎಚ್ಚರಿಸಿದ್ದಾರೆ ಎನ್ನಲಾಗುತ್ತಿದೆ.

# ಗುಜರಾತಿನಲ್ಲಿ 7,000 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆ

ಅಹಮದಾಬಾದ್, ಫೆ. 11 - ಗುಜರಾತಿನಲ್ಲಿ ಶೀಘ್ರವೇ 7,000 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆಯಾಗಲಿದ್ದು, ಇದು ವಿದ್ಯುತ್ ಕೊರತೆಯಿಂದ ಬಳಲುತ್ತಿರುವ ಇತರೆ ರಾಜ್ಯಗಳಿಗೆ ನೆರವಾಗಲಿದೆ ಎಂದು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಪ್ರಸಕ್ತ ನಾವು 4,000 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದಿಸುತ್ತಿದ್ದೇವೆ. ನಾವು ಶೀಘ್ರದಲ್ಲೇ 7,000 ಮೆಗಾವ್ಯಾಟ್ ವಿದ್ಯುತ್ ಹೆಚ್ಚುವರಿಯಾಗಿ ಉತ್ಪಾದಿಸ ಲಿದ್ದೇವೆ. ಇದು ದೇಶದ ಕತ್ತಲನ್ನು ನಿವಾರಿ ಸಲು ನೆರವಾಗಲಿದೆ ಎಂದು ಮೋದಿ ಹೇಳಿದ್ದಾರೆ.

2001ರಲ್ಲಿ ನಾನು ಅಧಿಕಾರಕ್ಕೆ ಬಂದಾಗ ರಾಜ್ಯ ಸುಮಾರು 2,000 ಮೆಗಾ ವ್ಯಾಟ್ ವಿದ್ಯುತ್ ಕೊರತೆ ಎದುರಿಸುತ್ತಿತ್ತು. ಊಟ ಮಾಡುವ ಸಮಯದಲ್ಲಾದರೂ ವಿದ್ಯುತ್ ಇರುವಂತೆ ಮಾಡಿ ಎಂದು ರಾಜ್ಯದ ಜನರು ಮನವಿ ಮಾಡಿಕೊಳ್ಳುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ, ವಿದ್ಯುತ್ ಕೊರತೆಯಿಂದ ಹೆಚ್ಚುವರಿ ವಿದ್ಯುತ್ ಉತ್ಪಾದಿಸುವತ್ತ ಹೆಜ್ಜೆ ಹಾಕಿದ್ದೇವೆ ಎಂದು ಮೋದಿ ಹೇಳಿದ್ದಾರೆ.

ವಿದ್ಯುತ್ ಘಟಕಗಳ ಆರೋಗ್ಯ ಕುಸಿಯುತ್ತಿದೆ ಎಂದು ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಇತ್ತೀಚೆಗೆ ವಿಷಾದಿಸಿದ್ದರು. ಇಷ್ಟೆಲ್ಲಾ ಸಮಸ್ಯೆಗಳ ನಡೂವೆಯೂ ಗುಜರಾತ್ ವಿದ್ಯುತ್ ಕಂಪನಿ ಲಾಭದಾಯಕ ಸಂಸ್ಥೆಯಾಗಿದೆ ಎಂದವರು ತಿಳಿಸಿದ್ದಾರೆ.


ಬಹುಜನರ ಅಪೇಕ್ಷೆಯ ಮೇರೆಗೆ 15 ದಿನಗಳ ವಿಸ್ತರಣೆ

ಲಯನ್ಸ್ ಕ್ಲಬ್, ದಾವಣಗೆರೆ ಇವರ ಆಶ್ರಯದಲ್ಲಿ ಸ್ಪೆಕ್ಟ್ರಮ್ ಸಂಸ್ಥೆ, ಶಿವಮೊಗ್ಗ, ಇವರಿಂದ

We Serve

ಪ್ರಾಥಮಿಕ ವೈದ್ಯಕೀಯ ತಪಾಸಣೆ ಕೇವಲ ರೂ. 250/-

ದಿನಕ್ಕೆ ಕಡ್ಡಾಯವಾಗಿ ನೋಂದಣಿ ಮಾಡಿಸಿದ 50 ಜನರಿಗೆ ಮಾತ್ರ ಪರೀಕ್ಷೆ ಮಾಡಲಾಗುವುದು.

ಮಾಡಿಸುವ ವೈದ್ಯ ಪರೀಕ್ಷೆ :
✦ ಪೂರ್ತಿ ಕೊಲೆಸ್ಟ್ರಾಲ್ ಪರೀಕ್ಷೆ
✦ ಮೂತ್ರಪಿಂಡ ಪರೀಕ್ಷೆ
✦ ಮಧುಮೇಹ (ಸಕ್ಕರೆ ಕಾಯಿಲೆ)
✦ ಪೂರ್ತಿ ಲಿವರ್ ಪರೀಕ್ಷೆ
✦ ಇ.ಸಿ.ಜಿ. (ಹೃದಯ ಗಂಡಸರಿಗೆ)
✦ ಹಿಮೋಗ್ಲೋಬಿನ್ ಪರೀಕ್ಷೆ
✦ ಮೂತ್ರ ಪರೀಕ್ಷೆ
✦ ಸೀರಮ್ ಕ್ಯಾಲ್ಸಿಯಂ (ಮಹಿಳೆಯರಿಗೆ)

ದಿನಾಂಕ 09 ಜನವರಿಯಿಂದ 20 ಫೆಬ್ರವರಿ 2012

ಸಮಯ : ಬೆಳಿಗ್ಗೆ 6 ರಿಂದ 9 ರವರೆಗೆ

ಸ್ಥಳ : ಲಯನ್ಸ್ ಕ್ಲಬ್, ದೇವರಾಜ ಅರಸು ಬಡಾವಣೆ, ಅನ್ನಪೂರ್ಣ ದೇವಸ್ಥಾನದ ಎದುರು, ಕೋರ್ಟ್ ಹಿಂಭಾಗ, ದಾವಣಗೆರೆ.

~~1400/-~~ 250/-

ಪರೀಕ್ಷೆಗೆ ಬರುವ ವ್ಯಕ್ತಿ ಖಾಲಿ ಹೊಟ್ಟೆಯಲ್ಲಿ (ಏನನ್ನೂ ತಿನ್ನದೇ, ಕುಡಿಯದೇ) ಬರಬೇಕು.

ವಿ.ಸೂ. : ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ, ಪೊಲೀಸ್ ಇಲಾಖೆ, ಅಗ್ನಿಶಾಮಕ ದಳದ ಸಿಬ್ಬಂದಿಯವರಿಗೆ ಹಾಗೂ ಪೌರ ಕಾರ್ಮಿಕರಿಗೆ 40% (100 ರೂಪಾಯಿ) ರಿಯಾಯಿತಿ ಇರುತ್ತದೆ. ಇವರುಗಳು ತಮ್ಮ ಗುರುತಿನ ಚೀಟಿ ಜೆರಾಕ್ಸ್ ಪ್ರತಿಯೊಂದಿಗೆ ಮುಂಚಿತವಾಗಿ ನೋಂದಣಿ ಮಾಡಿಸತಕ್ಕದ್ದು. ಪ್ರತಿ ದಿನ 50 ಜನರಿಗೆ ಪರೀಕ್ಷೆ ಮಾಡಲಾಗುವುದು. ಮೊದಲ ಬಂದವರಿಗೆ ಆದ್ಯತೆ.



ಉಚಿತ ಮೂಲವ್ಯಾಧಿ ತಪಾಸಣಾ ಶಿಬಿರ



ಹುಬ್ಬಳ್ಳಿ ಆಯುರ್ವೇದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಡಾ।। ಶ್ರೀನಿವಾಸ್ ಬನ್ನಿಗೋಳ್ ಇವರಿಂದ

ಉಚಿತ ಮೂಲವ್ಯಾಧಿ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. (ಔಷಧಿ ಮತ್ತು ಚಿಕಿತ್ಸೆ ಹೊರತು ಪಡಿಸಿ)

ಶಿಬಿರದ ದಿನಾಂಕ 12.02.2012ರ ಭಾನುವಾರ.

ಬೆಳಿಗ್ಗೆ 9.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ

ಶಿಬಿರದಲ್ಲಿ ಕ್ಷಾರ ಸೂತ್ರ ಚಿಕಿತ್ಸೆ ಪಡೆದವರಿಗೆ ವಿಶೇಷ ರಿಯಾಯಿತಿ

ಇತರೆ ಸೌಲಭ್ಯಗಳು : ✦ ಮಸಾಜ್ : (ಪೌಡರ್ ಅಥವಾ ತೈಲ) ಸರ್ವಾಂಗ, ಏಕಾಂಗ. ✦ ಸ್ವರ್ಣಾಮೃತ ಪ್ರಾಶನ ಸಂಸ್ಕಾರ : (ಪ್ರತಿ ತಿಂಗಳ ಪುಷ್ಯ ನಕ್ಷತ್ರದಂದು) ✦ ಋತುಕಾಲಿಕ ಪಂಚಕರ್ಮ ಚಿಕಿತ್ಸೆಗಳು ✦ ಯೋಗಾಸನ, ಪ್ರಾಣಾಯಾಮ ಮತ್ತು ಧ್ಯಾನ ತರಗತಿಗಳು. ✦ ಬ್ಯೂಟಿ ಸ್ಪಾಟ್ : ಮಹಿಳೆಯರಿಗೆ ಮತ್ತು ಪುರುಷರಿಗೆ, ಸೌಂದರ್ಯ ವರ್ಧಕ ಸಂಸ್ಕಾರ ಹಾಗೂ ವಿವಿಧ ಕೇಶ ವಿನ್ಯಾಸ (ಹೇರ್ ಕಟ್ ಮಹಿಳೆಯರಿಗೆ ಮಾತ್ರ) ವಿಶೇಷ ಫೇಷಿಯಲ್ಸ್‌ಗಳು. ✦ ಚಿಕಿತ್ಸೆಗಳು : ಸ್ತ್ರೀಯರಿಗೆ ಸಂಬಂಧಿಸಿದ ವ್ಯಾಧಿಗಳು, ಚರ್ಮರೋಗ, ಅಸ್ತಮಾ, ಸ್ಥೂಲಕಾಯ, ಸಂಧಿಶೂಲ, ಗ್ಯಾಸ್ಟ್ರಿಕ್ ತೊಂದರೆ, ಪಾರ್ಶ್ವ ವಾಯುಗಳಿಗೆ.

Jiva Life abode

ಜೀವ ಆಯುರ್ವೇದ ಮಲ್ಟಿ - ಸ್ಪೆಷಾಲಿಟಿ ಆಸ್ಪತ್ರೆ

13ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ.

ಸಂಪರ್ಕಕ್ಕೆ : 9844004321, 9886410690, 9844001731



ಭಾಗ್ಯರಂಗ ಚಿಟ್ಸ್ ಪ್ರೈ ಲಿ., ದಾವಣಗೆರೆ

ಭಾಗ್ಯರಂಗ ಚಿಟ್ಸ್‌ನೊಂದಿಗೆ ತಾವು ಯೋಚಿಸಿದಾಗ ಜೀವನ ಸರಳ


ವಿಳಾಸ :

'ಸತ್ಯಸದನ' ಡೋರ್ ನಂ. 998, ಲಾಯರ್ ರಸ್ತೆ, 2ನೇ ಅಂತಸ್ತು, ಕೆ.ಬಿ. ಬಡಾವಣೆ, ದಾವಣಗೆರೆ-2. ಫೋನ್ : 08192-325044

ಹೊಸ ಗ್ರೂಪ್‌ಗಳು ಪ್ರಾರಂಭವಾಗುವ ವಿವರ

| ಮಾಸಿಕ ಚಂದಾ (ರೂ.ಗಳಲ್ಲಿ) | ಅವಧಿ (ತಿಂಗಳು) | ಸದಸ್ಯರು | ಚಿಟ್‌ಮೌಲ್ಯ | ಮಾಸಿಕ ಚಂದಾ (ರೂ.ಗಳಲ್ಲಿ) | ಅವಧಿ (ತಿಂಗಳು) | ಸದಸ್ಯರು | ಚಿಟ್‌ಮೌಲ್ಯ |
|---|---|---|---|---|---|---|---|
| 1,000 | 25 | 25 | 25,000 | 20,000 | 30 | 30 | 6,00,000 |
| 2,000 | 25 | 25 | 50,000 | 20,000 | 50 | 50 | 10,00,000 |
| 2,000 | 50 | 50 | 1,00,000 | 25,000 | 40 | 40 | 10,00,000 |
| 4,000 | 25 | 25 | 1,00,000 | 50,000 | 30 | 30 | 15,00,000 |
| 5,000 | 40 | 40 | 2,00,000 | 50,000 | 50 | 50 | 25,00,000 |
| 10,000 | 50 | 50 | 5,00,000 | 1,00,000 | 40 | 40 | 40,00,000 |



**JANATHAVANI,** Regd No. 27369/75, Printed by **H.S.Jayasheela,** at Jayadhara Offset Printers, # 326, Dixit Road, Kastur Ba Extension, Davangere -2. Editor: **M.S.Vikas.** Owned & Published by **M.S.Vikas,** from # 326, Dixit Road, Kasturba Extension, Davangere-2.





## ಜಿಲ್ಲಾ ಉತ್ಸವದ ಅದ್ದೂರಿ ಮೆರವಣಿಗೆಗೆ ಸಚಿವರಿಂದ ಚಾಲನೆ

ದಾವಣಗೆರೆ ಜಿಲ್ಲಾ ಉತ್ಸವದ ಅಂಗವಾಗಿ ಶನಿವಾರ ದಾವಣಗೆರೆಯಲ್ಲಿ ಏರ್ಪಾಡಾಗಿದ್ದ ಮೆರವಣಿಗೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ಸಚಿವ ಗೋವಿಂದ ಕಾರಜೋಳ ಅವರು ಚಾಲನೆ ನೀಡಿದರು. ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆಯು ರಾಜ ಬೀದಿಗಳ ಮುಖಾಂತರ ಸಭಾ ಕಾರ್ಯಕ್ರಮ ಏರ್ಪಾಡಾಗಿದ್ದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಅಂತ್ಯಗೊಂಡಿತು. ಸಚಿವ ಎಸ್.ಎ. ರವೀಂದ್ರನಾಥ್, ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ, ವಿಧಾನ ಪರಿಷತ್ ಮುಖ್ಯ ಸಚೇತಕ ಡಾ. ಎ. ಎಚ್. ಶಿವಯೋಗಿ ಸ್ವಾಮಿ, ಶಾಸಕರುಗಳಾದ ಡಾ. ಶಾಮನೂರು ಶಿವಶಂಕರಪ್ಪ, ಎಂ. ಬಸವರಾಜನಾಯ್ಕ, ನಗರ ಪಾಲಿಕೆ ಮಹಾಪೌರ ಎಚ್.ಎನ್. ಗುರುನಾಥ್, ಜಿ.ಪಂ. ಅಧ್ಯಕ್ಷ ವೀರೇಶ್ ಹನಗವಾಡಿ, ದೂಡಾ ಅಧ್ಯಕ್ಷ ಬಳ್ಳೆಕಟ್ಟೆ ಮಲ್ಲಿಕಾರ್ಜುನಪ್ಪ, ಜಿಲ್ಲಾಧಿಕಾರಿ ಎಸ್.ಎಸ್. ಪಟ್ಟಣಶೆಟ್ಟಿ, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗುತ್ತಿ ಜಂಬುನಾಥ್ ಮತ್ತಿತರ ಮುಂತಾದ ಗಣ್ಯರು ಮೆರವಣಿಗೆಯ ನೇತೃತ್ವ ವಹಿಸಿದ್ದರು.




ದಾವಣಗೆರೆ ಜಿಲ್ಲಾ ಉತ್ಸವದ ಅಂಗವಾಗಿ ಶನಿವಾರ ದಾವಣಗೆರೆಯಲ್ಲಿ ಶಾಲಾ ಮಕ್ಕಳಿಂದ ರಸ್ತೆ ಓಟ ನಡೆಯಿತು.

# ನಗರದಲ್ಲಿ ಇಂದು ಶ್ವಾನ ಪ್ರದರ್ಶನ



ದಾವಣಗೆರೆ, ಫೆ.11- ಜಿಲ್ಲಾಡಳಿತ ಹಾಗೂ ದಾವಣಗೆರೆ ಪೆಟ್ ಲವರ್ಸ್ ಅಸೋಸಿಯೇಷನ್ ಇವರ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 12ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ನಗರದ ಮೋತಿ ವೀರಪ್ಪ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ರಾಜ್ಯ ಮಟ್ಟದ ಶ್ವಾನ ಪ್ರದರ್ಶನವನ್ನು ಜಿಲ್ಲಾ ಉತ್ಸವದ ಅಂಗವಾಗಿ ಏರ್ಪಡಿಸಲಾಗಿದೆ ಎಂದು ಪೆಟ್ ಲವರ್ಸ್ ಅಸೋಸಿಯೇಷನ್ ಅಧ್ಯಕ್ಷ ವೀರಣ್ಣ ಯಾದವಾಡ ಅವರು ಇಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಈ ಪ್ರದರ್ಶನದಲ್ಲಿ ವಿವಿಧ ತಳಿಯ 300 ಕ್ಕೂ ಹೆಚ್ಚು ಶ್ವಾನಗಳು ಭಾಗವಹಿಸಲಿವೆ. ವಿವಿಧ ತಳಿಯ ನಾಯಿಗಳಿಗೆ ಪ್ರತ್ಯೇಕ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ತರಬೇತಿ ಪಡೆದ ಶ್ವಾನಗಳಿಂದ ಚಾತುರ್ಯ ಪ್ರದರ್ಶನವಿರುತ್ತದೆ. ನೋಂದಣಿ ಶುಲ್ಕ ಪ್ರತಿ ಶ್ವಾನಕ್ಕೆ 100 ರೂ.ಗಳನ್ನು ನಿಗದಿಗೊಳಿಸಲಾಗಿದೆ ಎಂದು ಹೇಳಿದರು.

ಭಾಗವಹಿಸುವ ಎಲ್ಲಾ ಶ್ವಾನಗಳಿಗೆ ಉಚಿತವಾಗಿ ಲಸಿಕೆಯನ್ನು ಹಾಕಲಾಗುವುದು ಹಾಗೂ ಪೆಟ್ ಮ್ಯಾನ್ ಕೈಂಡ್ ಕಂಪನಿಯ ಜಂತು ನಾಶಕ ಗುಳಿಗೆ ವಿತರಿಸಲಾಗುವುದು. ಪ್ರಥಮ ಬಹುಮಾನವಾಗಿ 10,000 ರೂ., ದ್ವಿತೀಯ ಬಹುಮಾನವಾಗಿ 7,500 ರೂ. ಮತ್ತು ತೃತೀಯ ಬಹುಮಾನವಾಗಿ 5,000 ರೂ.ಗಳನ್ನು ನೀಡಲಾಗುವುದು ಎಂದರು.

ಈ ಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎ. ರವೀಂದ್ರನಾಥ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ವಿಧಾನ ಪರಿಷತ್ ಮುಖ್ಯ ಸಚೇತಕ ಡಾ. ಎ.ಎಚ್. ಶಿವಯೋಗಿ ಸ್ವಾಮಿ ಅಬಕಾರಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರಾದ ಬಸವರಾಜನಾಯ್ಕ, ಎಸ್.ವಿ. ರಾಮಚಂದ್ರ, ಜಿ. ಕರುಣಾಕರ ರೆಡ್ಡಿ, ಬಿ.ಪಿ. ಹರೀಶ್, ಮಾಡಾಳ್ ವಿರೂಪಾಕ್ಷಪ್ಪ ಸೇರಿದಂತೆ ಅನೇಕ ಗಣ್ಯರು ಭಾಗವಹಿಸುವರು ಎಂದು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಲ್ಲೂರು ರಾಘುವೇಂದ್ರ, ಜೆ. ಜಿತೇಂದ್ರ, ಎಂ.ಎಸ್. ಅಶೋಕ್, ಪಿ.ಜೆ. ಲೋನಪ್ಪ (ಜೋಬಿ), ಬಿ.ಸಿ. ಬಸವರಾಜ್, ಬೂಸ್ನೂರು ವೀರಣ್ಣ ಮತ್ತಿತರರಿದ್ದರು.



# ಕೈ ಮುಗಿದು ಒಳಗೆ ಬಾ ಇದು ಫಲ-ಪುಷ್ಪ ಕಾಶಿ

**ದೇವಿಕ ಸುನೀಲ್**

ಸೇವಂತಿಗೆ ಗೊತ್ತು. ಕಾಕಡ ಗೊತ್ತು. ಕನಕಾಂಬರ ಗೊತ್ತು. ಪೆಟೂನಿಯಾ, ವ್ಯಾಕ್ಸ್ ಫ್ಲವರ್, ಜಿಂಬರ್, ಜರ್ಬೇರಾ ಕೋಲಿಯಾಸ್, ಅಕ್ಯಾಲಿಫಾ ಗೊತ್ತಾ.... ಇಲ್ಲ ಅಲ್ವಾ. ಬನ್ನಿ ಹಾಗಾದರೆ ನಗರದ ಹೈಸ್ಕೂಲ್ ಮೈದಾನಕ್ಕೆ.

ಇವೆಲ್ಲಾ ಕಣ್ಣಿಗೂ, ಮನಸ್ಸಿಗೂ ಮುದ ನೀಡುವ ಹೂವುಗಳ ಹೆಸರುಗಳು ಕಣ್ರೀ.... ದಾವಣಗೆರೆ ಜಿಲ್ಲಾ ಉತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ವತಿಯಿಂದ ಹಮ್ಮಿಕೊಂಡಿರುವ ಫಲ-ಪುಷ್ಪ ಪ್ರದರ್ಶನದಲ್ಲಿ ಫಲಕ್ಕಿಂತ ಪುಷ್ಪಗಳದೇ ಮೇಲುಗೈ ಎನ್ನಬಹುದು.

ಪ್ರದರ್ಶನದ ಪ್ರಾರಂಭದಿಂದ ಕೊನೆಯ ಸಾಲಿನವರೆಗೂ ಮಣ್ಣಿನ ಕುಂಡಗಳಲ್ಲಿ ಗುಲಾಬಿ, ಕಾಕ್ಸ್ ಕೂಂಬ್ (ಸೆಲೋಷಿಯಾ), ಸಾಲ್ವಿಯಾ, ಆಂಥೂರಿಯಂ, ಅಕ್ಯಾಲಿಫಾ, ಆರ್ಕಿಡ್ ಹೂವುಗಳು ಸ್ವಾಗತ ಕೋರುತ್ತವೆ.

ಆವರಣದ ಮಧ್ಯಭಾಗದಲ್ಲಿ ಬೆಂಗಳೂರಿನ ಕಾಳಿದಾಸ ಗ್ರೂಪ್ ವತಿಯಿಂದ ಅಲಂಕರಣಗೊಂಡ ಪುಷ್ಪಗಳು ಗಮನ ಸೆಳೆಯುತ್ತವೆ. ಸುಮಾರು 8 ಸಾವಿರಕ್ಕೂ ಹೆಚ್ಚು ಡಚ್ ರೋಸ್ ನಿಂದ ರೂಪಿಸಿರುವ ಗಂಡು ಭೇರುಂಡ ಕ್ಷಣ ಕಾಲ ತನ್ನತ್ತ ಮನ ಸೆಳೆಯದೆ ಬಿಡದು.


ಅಕ್ಕಪಕ್ಕ ಬಾಳೆದಿಂಡುಗಳ ಕಂಬಗಳಿಗೆ ಲತೆಗಳ ಶೃಂಗಾರ. ಇಂಪೋರ್ಟೆಡ್ ಹೂವುಗಳ ಅಲಂಕಾರ. ಮಧ್ಯೆ ಮಧ್ಯೆ ವ್ಯಾಕ್ಸ್ ಫ್ಲವರ್, ಆಲ್ಪೀನಿಯಾ, ಟೂಲಿಪ್ಸ್, ಪೆಟೂನಿಯಾ, ಬರ್ಡ್ ಆಫ್ ಪ್ಯಾರಡೈಸ್, ಏಷಿಯಾಟಿಕ್ ಲಿಲ್ಲೀಸ್, ಗ್ಲಾಡಿಯೋಲಸ್, ಕ್ರೈಸಾಂತಮ್, ಟಾರ್ಚ್ ಜಿಂಬರ್, ಜೇಂಟ್ ಆರ್ಕಿಡ್‌ಗಳ ಸುಂದರ ಚಿತ್ತಾರ ಅರಸಿಕರನ್ನೂ ಹತ್ತಿರ ಸೆಳೆಯದೆ ಇರವು.

ಅಲಂಕರಣಗೊಂಡ ಉದ್ಯಾನವನದಲ್ಲಿ ಬಳಸಿರುವ ನೀರಿನ ಕಾರಂಜಿ, ಬುದ್ಧನ ಮೂರ್ತಿ, ಸೋಪಾನಗಳಂತಹ ಕಲಾತ್ಮಕ ಕೃತಿಗಳು ಹಾಗೂ ಸಾಕಷ್ಟು ಬಗೆಯ ಹೂವುಗಳನ್ನು ಪೂರೈಸಿರುವುದು ದಾವಣಗೆರೆಯ ಈಡನ್ ಗಾರ್ಡನ್ಸ್‌ನ ಸೀಮಾ ಸುರೇಶ್ ಎಂಬುದು ವಿಶೇಷ. ತರಕಾರಿ ದುಗ್ಗಮ್ಮನಿಗೆ ಉಘೇ..... ಉಘೇ.... ಇನ್ನೇನು ನಗರ ದೇವತೆ ದುರ್ಗಾಂಬಿಕೆಯ ಜಾತ್ರೆ ಸಮೀಪಿಸುತ್ತಿರುವ ಸಂದರ್ಭಕ್ಕೆ ತಕ್ಕಂತೆ ದುಗ್ಗಮ್ಮನ ಮೂರ್ತಿಯನ್ನು ತರಕಾರಿಗಳಿಂದ ತಯಾರಿಸಿ, ಅಲಂಕರಿಸಿದ್ದಾರೆ. ಮೂರ್ತಿಯ ಮುಂದೆ ಕಲ್ಲಂಗಡಿ ಹಣ್ಣಿನಿಂದ ದಾವಣಗೆರೆಯ ಶಾಸಕ ಡಾ|| ಶಾಮನೂರು ಶಿವಶಂಕರಪ್ಪ ಹಾಗೂ ತೋಟಗಾರಿಕೆ ಪಿತಾಮಹ ಎಂದೇ ಖ್ಯಾತಿ ಹೊಂದಿರುವ ಮರಿಗೌಡರ ಮುಖಗಳನ್ನು ಶಿವಮೊಗ್ಗದ ಹರೀಶ್ ಕೆತ್ತಿದ್ದಾರೆ. ಇದಲ್ಲದೆ ಶಿರಡಿ ಸಾಯಿಬಾಬಾರ ಮೂರ್ತಿ, ಗಣಪತಿ ಹಾಗೂ ಜ್ಞಾನಪೀಠ ಪ್ರಶಸ್ತಿ ವಿಜೇತರ ಮುಖಗಳನ್ನು ಕಲ್ಲಂಗಡಿಯಲ್ಲಿ ಕೆತ್ತಲಾಗಿದೆ.

ಇಲ್ಲಿ ಸೌತೆ ಮೀನು ನೀರಿನಲ್ಲಿದೆ. ಸಿಹಿ ಕುಂಬಳದ ಹೂವುಗಳಿವೆ. ಹಾಗಲ ಮೊಸಳೆ ಇದೆ. ಹೂವು ದಾನಿಯಲ್ಲಿ ಸೌತೆ, ಬೀಟ್‌ರೂಟ್ ಕನ್ನಡಕ, ಕ್ಯಾರೆಟ್‌ನ ಕೈ-ಕಾಲು ಹಾಗೂ ಕೋಸ್ ಬಟ್ಟೆ ಧರಿಸಿರುವ ಗಾಂಧಿ ತಾತನಿದ್ದಾನೆ. ಸರಸ್ವತಿ, ಗಣಪತಿ, ಈಶ್ವರ ಮುಂತಾದ ದೇವರುಗಳು ತರಕಾರಿಯಲ್ಲಿ ಮೈ ತಳೆದು ಕಲಾವಿದನ ಕೈಚಳಕ ತೋರಿಸುತ್ತಿವೆ.

**ಫಲ-ಪುಷ್ಪ ಪ್ರದರ್ಶನ ಹಾಗೂ ಪುಷ್ಪ ಕೃಷಿ ಕುರಿತ ವಿಚಾರಗೋಷ್ಠಿಯನ್ನು ಸಕ್ಕರೆ ಹಾಗೂ ತೋಟಗಾರಿಕೆ ಸಚಿವ ಎಸ್.ಎ.ರವೀಂದ್ರನಾಥ್ ಉದ್ಘಾಟಿಸಿದರು. ಮಹಾಪೌರ ಹೆಚ್.ಎನ್. ಗುರುನಾಥ್, ಜಿ.ಪಂ.ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಸಿ.ಇ.ಓ ಗುತ್ತಿ ಜಂಬುನಾಥ್, ಪ್ರಭಾರ ಎಸ್ಪಿ ಚವ್ಹಾಣ್, ಜಿ.ಪಂ.ಉಪಾಧ್ಯಕ್ಷೆ ಪ್ರೇಮಾ ಸಿದ್ದೇಶ್, ದೂಡಾ ಅಧ್ಯಕ್ಷ ಜೆ. ಮಲ್ಲಿಕಾರ್ಜುನಪ್ಪ, ಜಿ.ಪಂ.ಸದಸ್ಯೆಯರಾದ ಅಂಬಿಕಾ ರಾಜಪ್ಪ, ಸಹನಾ ರವಿ, ಮೀನಾಕ್ಷಿ ಬಾಯಿ, ಉಮ್ಲೀಬಾಯಿ, ಕೃಷಿಕ ಸಮಾಜದ ಅಧ್ಯಕ್ಷ ಹನುಮಂತಪ್ಪ, ಕದ್ರಿ ಗೌಡ, ಮುರುಗೇಶಪ್ಪ ಮತ್ತಿತರರಿದ್ದರು.**

ಪ್ರಾರಂಭದಲ್ಲಿಯೇ ಎಡ ಬದಿಯಲ್ಲಿ ಜಿಲ್ಲೆಯ ರೈತರುಗಳು ಬೆಳೆದಿರುವ ವಿವಿಧ ಬಗೆಯ ತರಕಾರಿಗಳು, ವಾಣಿಜ್ಯ ಬೆಳೆಗಳು, ಹೂವು, ಹಸಿರು ಸೊಪ್ಪುಗಳನ್ನು ಪ್ರದರ್ಶಿಸಿ, ರೈತನ ಹೆಸರು, ಪ್ರದರ್ಶಿಸಿರುವ ವಸ್ತುವಿನ ಹೆಸರನ್ನು ಬರೆದಿಡಲಾಗಿದೆ. ಸಾಮಾನ್ಯವಾಗಿ ಸಿಗದ ಕಾರೇ ಹಣ್ಣು, ಸೀಮೆ ಬದನೆ, ಗೇರು ಬೀಜ, ಚಕ್ಕೋತಾ, ಹರಿಸು, ಹಳದಿ, ಕೆಂಪು ಬಣ್ಣದ ದಪ್ಪ ಮೆಣಸಿನಕಾಯಿ, ರಾಮಫಲ, ಹಾಲುಗುಂಬಳವನ್ನು ಇಲ್ಲಿ ವೀಕ್ಷಿಸಬಹುದು.



ಬೋನ್ಸಾಯ್ ಗಾರ್ಡನ್, ಕ್ಯಾಕ್ಟಸ್ ಗಾರ್ಡನ್‌ಗಳನ್ನು ವಿಧವನ್ನು ಇಲ್ಲಿ ಕಾಣಬಹುದು. ಹೊರಗಡೆ ರೈತರಿಗೆ ಕೃಷಿ ಯಂತ್ರಗಳು, ಕೃಷಿ ಸಂಬಂಧಿ ವಸ್ತುಗಳ ಬಗ್ಗೆ ಮಾಹಿತಿ ನೀಡುವ ಮಳಿಗೆಗಳನ್ನು ತೆರೆಯಲಾಗಿದೆ. ರೈತರಿಗೆ ಪುಷ್ಪ ಕೃಷಿ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ.

ಇಂದಿನಿಂದ ಮೂರು ದಿನಗಳ ಕಾಲ ನಡೆಯುವ ಫಲ-ಪುಷ್ಪ ಪ್ರದರ್ಶನ ನೋಡುಗರಿಗೆ ಕಲಾ ನೈಪುಣ್ಯತೆಯನ್ನು ಪ್ರತಿಬಿಂಬಿಸಿದರೆ, ರೈತ ಬಾಂಧವರಿಗೆ ಮಾಹಿತಿ ಕಾರ್ಯಾಗಾರದಂತಿದೆ. ಮತ್ತೇಕೆ ತಡ ಹೊರಡಿ.....

# ಜಿಲ್ಲಾ ಉತ್ಸವ : ನಗರದಲ್ಲಿ ಇಂದು ಮತ್ತು ನಾಳೆ ಗೀತೋತ್ಸವ - 2012

ಕರ್ನಾಟಕ ಸುಗಮ ಸಂಗೀತ ಪರಿಷತ್ತು ಮತ್ತು ಜಿಲ್ಲಾಡಳಿತದ ವತಿಯಿಂದ ಗೀತೋತ್ಸವ-2012 (9ನೇ ಸುಗಮ ಸಂಗೀತ ಸಮ್ಮೇಳನ) ಸಮ್ಮೇಳನದ ಉದ್ಘಾಟನಾ ಸಮಾ ರಂಭವನ್ನು ಇಂದು ಬೆಳಿಗ್ಗೆ 9 ಗಂಟೆಗೆ ನಗರದ ಜೆಜೆಎಂ ಮೆಡಿಕಲ್ ಕಾಲೇಜು ಆವರಣದಲ್ಲಿರುವ ಬಾಪೂಜಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸಮ್ಮೇಳನಾಧ್ಯಕ್ಷರಾಗಿ ಉಭಯ ಗಾನ ವಿದುಷಿ ಡಾ. ಶ್ಯಾಮಲಾ ಜಿ. ಭಾವೆ ಅವರು ಆಗಮಿಸುವರು. ಈ ಸಂದರ್ಭದಲ್ಲಿ ಜಯದೇವ ವೃತ್ತದಿಂದ ಬಾಪೂಜಿ ಸಭಾಂಗಣದವರೆಗೆ ಸಮ್ಮೇಳನಾಧ್ಯಕ್ಷರು ಹಾಗೂ ಸಾಹಿತಿ, ಕಲಾವಿದರ ಮೆರವಣಿಗೆ ನಡೆಯಲಿದೆ. ಮಹಾನಗರ ಪಾಲಿಕೆಯ ಮಹಾಪೌರ ಹೆಚ್.ಎನ್. ಗುರುನಾಥ್ ಕಾರ್ಯಕ್ರಮಕ್ಕೆ ಚಾಲನೆ ನೀಡುವರು.

ಬೆ.10 ಗಂಟೆಯಿಂದ ಸಮೂಹ ಗಾಯನ ದಾವಣಗೆರೆ ಜಿಲ್ಲಾ ಕಲಾವಿದರಿಂದ ನಾಡಗೀತೆ, ಜಿಲ್ಲಾಧಿಕಾರಿಯವರಿಂದ ಸ್ವಾಗತ ನುಡಿ ಹಾಗೂ ಬೆಂಗಳೂರಿನ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷರಾದ ವೈ.ಕೆ. ಮುದ್ದುಕೃಷ್ಣ ಅವರಿಂದ ಪ್ರಾಸ್ತಾವಿಕ ನುಡಿ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಯವರಿಂದ ವರದಿ ಹಾಗೂ ನಾಡೋಜ ಪ್ರೊ. ಚೆನ್ನವೀರ ಕಣವಿ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಸಕ್ಕರೆ, ತೋಟಗಾರಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎ. ರವೀಂದ್ರನಾಥ್ ಅವರು ಗೀತ ಸಂಗಮ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಸಚಿವರಾದ ಗೋವಿಂದ ಕಾರಜೋಳ ಅವರು ಲಹರಿ ಸಂಸ್ಥೆ ಹೊರ ತಂದಿರುವ ಸ್ನೇಹ ಹಾಗೂ ನೀನು ಮಲ್ಲಿಗೆ ಬಳ್ಳಿ ಧ್ವನಿ ಸಾಂದ್ರಿಕೆಗಳನ್ನು ಬಿಡುಗಡೆ ಮಾಡುವರು.

ಸಮ್ಮೇಳನಾಧ್ಯಕ್ಷರಾದ ಉಭಯ ಗಾನ ವಿದುಷಿ ಡಾ. ಶ್ಯಾಮಲಾ ಜಿ. ಭಾವೆ ಅವರ ಭಾಷಣ, ಅಬಕಾರಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರು ಸಮ್ಮೇಳನಾಧ್ಯಕ್ಷರಿಗೆ ಗೌರವಾರ್ಪಣೆ ಮಾಡುವರು. ಸಂಸದ ಜಿ.ಎಂ. ಸಿದ್ದೇಶ್ವರ್ ಅವರು, ನಿಕಟಪೂರ್ವ ಸಮ್ಮೇಳನಾಧ್ಯಕ್ಷರಿಗೆಗೌರವಾರ್ಪಣೆಮಾಡುವರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಶ್ರೀಮತಿ ಶ್ಯಾಮಲಾ ಜಾಗಿರ್ದಾರ್ ಅವರು ಉಪಸ್ಥಿತರಿರುವರು.

**ಕವಿತಾ ವಾಚನ ಕಾರ್ಯಕ್ರಮ:** ಫೆ.12 ರ ಮ.12 ಗಂಟೆಯಿಂದ ಅನನ್ಯ, ಶ್ರೀ ರಂಗದರ್ಶನ, ಸುರಭಿ, ಪ್ರಜ್ವಲ್ ಅವರಿಂದ ನವಶೋಧ, ನಾಡೋಜ ಚೆನ್ನವೀರ ಕಣವಿ, ಡಾ. ಹೆಚ್. ಎಸ್. ವೆಂಕಟೇಶ ಮೂರ್ತಿ, ಎಂ.ಎನ್. ವ್ಯಾಸರಾವ್, ಹೇಮಾ ಪಟ್ಟಣ ಶೆಟ್ಟಿ, ಡಾ.ಎನ್.ಎಸ್. ಲಕ್ಷ್ಮಿ ನಾರಾಯಣ ಭಟ್ಟ, ಟಿ.ಎನ್. ಸೀತಾರಾಂ, ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಎಂ.ಆರ್. ಕಮಲ, ಡಾ.ರಾಜೇಶ್ವರಿಗೌಡ ಇವರಿಂದ ಕವಿತಾ ವಾಚನ ಕಾರ್ಯಕ್ರಮ ನಡೆಯಲಿದೆ.

**ಗಾಯನ ಗಂಗೋತ್ರಿ :** ಮ.3 ಗಂಟೆ ಯಿಂದ ಶಾರದ ಸಂಗೀತ ಶಾಲೆ, ಚರಣಾಮೃತ ಸಂಗೀತ ಶಾಲೆ, ಸುಶ್ರಾವ್ಯ ಸಂಗೀತ ವಿದ್ಯಾಲಯ, ಇಂಚರ ಸುಗಮ ಸಂಗೀತ ಶಾಲೆ ಇವರಿಂದ ಗಾಯನ ಗಂಗೋತ್ರಿ ಕಾರ್ಯಕ್ರಮ ನಡೆಯಲಿದೆ.

**ಜಾನಪದ ಝೇಂಕಾರ :** ಅಪ್ಪಗೆರೆ ತಿಮ್ಮ ರಾಜು, ಡಾ. ವೇಮಗಲ್ ನಾರಾಯಣಸ್ವಾಮಿ, ಜಯಂತಿ ಶ್ರೀನಿವಾಸ್, ಡಾ.ಬಾನಂದೂರು ಕೆಂಪಯ್ಯ, ನರಸಿಂಹಮೂರ್ತಿ, ರಮಾ ಅರವಿಂದ್ ಇವರಿಂದ ಜಾನಪದ ಝೇಂಕಾರ ಕಾರ್ಯಕ್ರಮ ನಡೆಯಲಿದೆ.

**ಅನುರಣನ :** ಅನುರಣನ ಕಾರ್ಯಕ್ರಮ (ಮರೆಯಲಾರದ ಮಹನೀಯರು ನಡೆಸಿ ಕೊಡುವವರು)ವನ್ನು ಶ್ರೀನಿವಾಸ್ ಜಿ. ಕಪ್ಪಣ್ಣ, ಮಾಲತಿ ಶರ್ಮಾ, ಎನ್. ಅಪರ್ಣಾ ಇವರು ನಡೆಸಿ ಕೊಡುವರು.

**ಸಮೂಹ ಗಾಯನ :** ಸಂಜೆ 6 ಗಂಟೆ ಯಿಂದ ಹೈಸ್ಕೂಲ್ ಮೈದಾನದಲ್ಲಿನ ಮುಖ್ಯ ವೇದಿಕೆಯಲ್ಲಿ ಸಮೂಹ ಗಾಯನ (ತರಬೇತಿ ಶಿಬಿರದಲ್ಲಿ ಆಯ್ಕೆಯಾದ ಕಲಾವಿದ ರಿಂದ ಜಿಲ್ಲಾ ಉತ್ಸವ ಕಾರ್ಯಕ್ರಮ)ವನ್ನು ಏರ್ಪಡಿಸಲಾಗಿದೆ.

**ಗೀತ ನೃತ್ಯ :** ಶ್ರೀಮತಿ ವೈಜಯಂತಿ ಕಾಶಿ ಮತ್ತು ತಂಡದಿಂದ ಗೀತ ನೃತ್ಯ ಕಾರ್ಯಕ್ರಮ ನಡೆಸಿಕೊಡುವರು.

**ಗೀತ ಸಂಗೀತ :** ಶಿವಮೊಗ್ಗ ಸುಬ್ಬಣ್ಣ, ಪುತ್ತೂರು ನರಸಿಂಹನಾಯಕ್, ಕಿಕ್ಕೇರಿ ಕೃಷ್ಣಮೂರ್ತಿ, ವಿಜಯ ಹಾವನೂರು, ಡಾ.ಕೆ. ರಾಮೇಶ್ವರಪ್ಪ, ವೃಂದಾ ಎಸ್.ರಾವ್, ವೈಷ್ಣವರಾವ್, ಚಂದ್ರಿಕಾ ಬದ್ರಿನಾಥ್, ಭಾಗ್ಯ. ವಿ.ರಾವ್, ರಶ್ಮಿ ಮಂಜುನಾಥ್, ಸುಧೀರ್ ಎಂ.ಎಸ್. ಕಸ್ತೂರಿಶಂಕರ್, ಮಾಲತಿ ಶರ್ಮಾ, ಇಂದು ವಿಶ್ವನಾಥ್, ಪ್ರೇಮಲತಾ ದಿವಾಕರ್, ಕೆ.ಎಸ್. ಸುರೇಖ ಇವರಿಂದ ಗೀತ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಶಾಸಕ ಡಾ|| ಶಾಮನೂರು ಶಿವಶಂಕರಪ್ಪ, ಅಬಕಾರಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮುಖ್ಯ ಸಚೇತಕರಾದ ಡಾ|| ಎ.ಹೆಚ್. ಶಿವಯೋಗಿಸ್ವಾಮಿ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಎಸ್.ಎಂ. ವೀರೇಶ್ ಹನಗವಾಡಿ, ಕರ್ನಾಟಕ ಬಣಜಾರ್ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಮಾಯಕೊಂಡ ಶಾಸಕ ಎಂ.ಬಸವರಾಜ್ ನಾಯ್ಕ, ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷರು ಹಾಗೂ ಜಗಳೂರು ಶಾಸಕ ಎಸ್.ವಿ. ರಾಮಚಂದ್ರ, ಚನ್ನಗಿರಿ ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ, ಹರಿಹರ ಶಾಸಕ ಬಿ.ಪಿ. ಹರೀಶ್, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಗಮದ ಅಧ್ಯಕ್ಷ ಟಿ. ಗುರುಸಿದ್ದನಗೌಡ, ಅನಿವಾಸಿ ಭಾರತೀಯ ಸಮಿತಿ ಹಾಗೂ ವಿಧಾನ ಪರಿಷತ್ ಶಾಸಕರಾದ ಕ್ಯಾಪ್ಟನ್ ಗಣೇಶ್ ಕಾರ್ನಿಕ್, ಹರಪನಹಳ್ಳಿ ಶಾಸಕ ಜಿ. ಕರುಣಾಕರ ರೆಡ್ಡಿ, ವಿಧಾನ ಪರಿಷತ್ ಶಾಸಕ ಶಶಿಲ್ ಜಿ. ನಮೋಶಿ, ಜಿ. ಹೆಚ್. ತಿಪ್ಪಾರೆಡ್ಡಿ, ವೈ.ಎ. ನಾರಾಯಣಸ್ವಾಮಿ, ಮೃತ್ಯುಂಜಯ ಜಿನಗ, ಸಿದ್ದರಾಮಣ್ಣ, ಮನೋಹರ್ ಮಸ್ಕಿ, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿ ಕಾರದ ಅಧ್ಯಕ್ಷ ಜಿ. ಮಲ್ಲಿಕಾರ್ಜುನಪ್ಪ ಹಾಗೂ ಇತರೆ ಜನ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

**ಸಮೂಹ ಗಾಯನ :** ಫೆ.13 ರ ಬೆಳಿಗ್ಗೆ 9.30 ರಿಂದ ಸಮೂಹ ಗಾಯನ ಕಾರ್ಯಕ್ರಮ ನಡೆಯಲಿದೆ.

**ಚಿಣ್ಣರ ಗಾಯನ :** ಶಿಬಿರದಲ್ಲಿ ಬೆಳಿಗ್ಗೆ 10ಕ್ಕೆ ತರಬೇತಿ ಪಡೆದ ಚಿಣ್ಣರಿಂದ, ಚಿಣ್ಣರ ಗಾಯನ ಕಾರ್ಯಕ್ರಮ ನಡೆಯಲಿದೆ.

**ಸುಗಮ ಸಂಗೀತದ ಇತಿಮಿತಿಗಳು-ಹೊಸ ಸಾಧ್ಯತೆಗಳು :** ಬೆ. 10.15 ರಿಂದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅಧ್ಯಕ್ಷತೆಯಲ್ಲಿ ಸುಗಮ ಸಂಗೀತದ ಇತಿಮಿತಿಗಳು - ಹೊಸ ಸಾಧ್ಯತೆಗಳು ಕಾರ್ಯಕ್ರಮದಲ್ಲಿ ರತ್ನಮಾಲಾ ಪ್ರಕಾಶ್, ನರಸಿಂಹನಾಯಕ್, ಎನ್.ಎಸ್. ಪ್ರಸಾದ್ ಹಾಗೂ ಅರ್ಚನಾ ಉಡುಪ ಮತ್ತು ಇತರರು ಭಾಗವಹಿಸುವರು.

**ಕವಿ-ಕಾವ್ಯ-ಗಾಯನ :** ಬೆ.11.15 ರಿಂದ ಡಾ. ಜಿ.ಎಸ್. ಸಿದ್ದಲಿಂಗಯ್ಯನವರ ಅಧ್ಯಕ್ಷತೆ ಯಲ್ಲಿ ಕವಿಗಳಾದ ನಾಡೋಜ ಚೆನ್ನವೀರ ಕಣವಿ, ಡಾ.ಎನ್. ಎಸ್. ಲಕ್ಷ್ಮಿನಾರಾಯಣ ಭಟ್ಟ, ಪ್ರೊ|| ಚಂದ್ರಶೇಖರ ಪಾಟೀಲ, ಡಾ.ಸಾ.ಶಿ. ಮರಳಯ್ಯ, ಡಾ.ಹೆಚ್.ಎಸ್. ವೆಂಕಟೇಶ ಮೂರ್ತಿ, ಡಾ. ದೊಡ್ಡರಂಗೇಗೌಡ, ಬಿ.ಆರ್. ಲಕ್ಷ್ಮಣರಾವ್, ಸುಬ್ರಾಯ ಚೊಕ್ಕಾಡಿ, ಎಂ.ಎನ್. ವ್ಯಾಸರಾವ್, ಎಂ.ಆರ್. ಕಮಲ, ಸುಕನ್ಯಮಾರುತಿ, ಡಾ. ಬಸವರಾಜ ಸಬರದ, ಡುಂಡಿರಾಜ್ ಭಾಗವಹಿಸುವರು.

ಗಾಯನದಲ್ಲಿ ಜ್ಯೋತಿ ರವಿಪ್ರಕಾಶ್, ತನ್ಮಯಿ ಕೃಷ್ಣಮೂರ್ತಿ, ಪಂಚಮ್ ಹಳಿಬಂಡಿ, ಡಾ.ರೋಹಿಣಿಮೋಹನ್, ಸೌಮ್ಯ ಉಪಾ ಧ್ಯಾಯ, ಕನ್ನಿಕಾ ಸಿಂಗರ್, ರಮ್ಯ ಸೂರಜ್, ಉದಯ ಅಂಕೋಲ, ಶೃತಿ ತುಮಕೂರು, ಜಯಂತಿ ಭಟ್, ಸುರೇಖ ಹೆಗ್ಡೆ, ರಾಜಾರಾಮ್, ಮಲ್ಲಿಗೆ ಸುಧೀರ್ ಇವರೆಲ್ಲರೂ ಭಾಗವಹಿಸುವರು.

**ಗಾನ ಲಹರಿ :** ಮ.1 ಗಂಟೆಯಿಂದ ಉಭಯ ಗಾನ ವಿದುಷಿ ಡಾ.ಶ್ಯಾಮಲಾ ಜಿ. ಭಾವೆ ಅವರಿಂದ ಗಾನ ಲಹರಿ ಕಾರ್ಯಕ್ರಮ ನಡೆಯಲಿದೆ.

**ಹಾಡು ಹಳೆಯದಾದರೇನು - ಕೇಳಿ ನಮ್ಮ ಹಾಡು :** ಶ್ಯಾಮಲಾ ಜಾಗಿರ್ದಾರ್, ಗರ್ತಿಕೆರೆ ರಾಘಣ್ಣ, ನಾರಾಯಣರಾವ್ ಮಾನೆ, ಸೋಮಸುಂದರಂ, ಟಿ.ವಿ. ರಾಜು, ದಾವಣಗೆರೆ ಮಹಂತೇಶ್ ಇವರು ಹಾಡು ಹಳೆಯದಾದರೇನು-ಕೇಳಿ ನಮ್ಮ ಹಾಡು ಕಾರ್ಯಕ್ರಮವನ್ನು ನಡೆಸಿ ಕೊಡುವರು.

**ಸಮಾರೋಪ ಸಮಾರಂಭ :** ಗೀತೋತ್ಸವ- 2012 (9ನೇ ಸುಗಮ ಸಂಗೀತ ಸಮ್ಮೇಳನ) ಸಮ್ಮೇಳನದ ಸಮಾರೋಪ ಸಮಾರಂಭ ಫೆ. 13 ರ ಸಂಜೆ. 5ಕ್ಕೆ (ತರಬೇತಿ ಶಿಬಿರದಲ್ಲಿ ಆಯ್ಕೆಯಾದ ಕಲಾವಿದರಿಂದ ಜಿಲ್ಲಾ ಉತ್ಸವ ಕಾರ್ಯಕ್ರಮ) ನಗರದ ಜೆಜೆಎಂ ಮೆಡಿಕಲ್ ಕಾಲೇಜು ಆವರಣದಲ್ಲಿರುವ ಬಾಪೂಜಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

**ಸಮಾರೋಪ ಭಾಷಣ :** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮುಖ್ಯಮಂತ್ರಿ ಚಂದ್ರು ಅವರು ಅಧ್ಯಕ್ಷತೆ ವಹಿಸುವರು. ಪ್ರಖ್ಯಾತ ಕವಿಗಳಾದ ಡಾ. ಎನ್.ಎಸ್. ಲಕ್ಷ್ಮಿನಾರಾಯಣ ಭಟ್ಟ ಅವರು ಸಮಾರೋಪ ಭಾಷಣ ಮಾಡುವರು. ಮುಖ್ಯ ಅತಿಥಿಗಳಾಗಿ ಡಾ.ಸಿ. ಸೋಮಶೇಖರ್ ಆಗಮಿಸುವರು.

**ಸಮೂಹ ಗಾಯನ :** ಸಂಜೆ 6.30 ಕ್ಕೆ ಹೈಸ್ಕೂಲ್ ಮೈದಾನದ ಮುಖ್ಯ ವೇದಿಕೆಯಲ್ಲಿ ಸಮೂಹ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ. ತರಬೇತಿ ಶಿಬಿರದಲ್ಲಿ ಆಯ್ಕೆಯಾದ ಕಲಾವಿದರಿಂದ ಜಿಲ್ಲಾ ಉತ್ಸವದ ಕಾರ್ಯಕ್ರಮ ನಡೆಯಲಿವೆ.

**ಗೀತ ಸಂಗೀತ :** ವೈ.ಕೆ. ಮುದ್ದುಕೃಷ್ಣ, ಮುದ್ದುಮೋಹನ್, ಶ್ರೀನಿವಾಸ ಉಡುಪ, ರಮೇಶ್ ಚಂದ್ರ, ಮೃತ್ಯುಂಜಯ ದೊಡ್ಡವಾಡ, ಅಂಬಯ್ಯ ನುಲಿ, ರತ್ನಮಾಲಾ ಪ್ರಕಾಶ್, ಬಿ.ಕೆ. ಸುಮಿತ್ರ, ಸಂಗೀತಾಕಟ್ಟಿ ಕುಲಕರ್ಣಿ, ಅರ್ಚನಾ ಉಡುಪ, ದಿವ್ಯಾ ರಾಘವನ್, ಹೇಮಾ ಪ್ರಸಾದ್, ನಾಗಚಂದ್ರಿಕಾ ಭಟ್, ಆನಂದ ಮಾದಲಗೆರೆ, ಶ್ರೀಧರ್ ಅಯ್ಯರ್, ಜಯರಾಂ, ರೇಖಾಪ್ರೇಮಕುಮಾರ್ ಹಾಗೂ ಮಹೇಶ್ ಇವರೆಲ್ಲರೂ ಶ್ರೀಮತಿ ಎನ್. ಅಪರ್ಣಾ ಮತ್ತು ಮಾಲತಿ ಶರ್ಮಾರವರ ನಿರೂಪಣೆಯಲ್ಲಿ ಗೀತ ಸಂಗೀತ ಕಾರ್ಯಕ್ರಮ ನಡೆಯಲಿದೆ.

# ಬಿಸಿಲು-ಬೆಳದಿಂಗಳೆಂಬ ಧ್ಯಾನ...




ತರಳಬಾಳು ಜಗದ್ಗುರು ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ವಿಚಾರಗಳನ್ನು ಅಂಕಣ ಬರಹಗಳಲ್ಲಿ ಹಂಚಿಕೊಳ್ಳುವುದು ಪ್ರಾರಂಭವಾಗಿ ಮೂರು ವರ್ಷಗಳಾದವು. "ಬಿಸಿಲು ಬೆಳದಿಂಗಳು" ಅಂಕಣ ಬರಹ ಸತತವಾಗಿ 150 ವಾರಗಳನ್ನು ದಾಟಿ ಬಂದಿದೆ. ಆ ವರೆಗೆ ಸಭೆ ಸಮಾರಂಭಗಳಲ್ಲಿ ಮಾತನಾಡುತ್ತಿದ್ದ ವಿಚಾರಗಳು ಆಗಾಗ ಜನತಾವಾಣಿ ಪತ್ರಿಕೆಯೂ ಸೇರಿದಂತೆ, ಇತರೆ ದಿನ ಪತ್ರಿಕೆಗಳ ಅಗ್ರ ಲೇಖನಗಳಾಗಿ ಪ್ರಕಟವಾಗಿದ್ದುಂಟು. ನಂತರ ಒಂದು ಪತ್ರಿಕೆಯ ಖಾಯಂ ಕಾಲಂನಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಈವರೆಗೆ 10 ಸಂಕಲನಗಳಲ್ಲಿ ಪ್ರಕಟಿಸಲಾಗಿದೆ.

ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಅಂಕಣ ಲೇಖನಗಳನ್ನು ವಿಭಾಗಿಸಿ ಪ್ರತಿ ವರ್ಷವೂ ಎರಡು ಪುಸ್ತಕಗಳನ್ನು ಹೊರ ತರಲಾಗುತ್ತಿದೆ. ಇದರಿಂದಾಗಿ ಪತ್ರಿಕೆಗಳು ರದ್ದಿಗೆ ಸೇರಿದರೂ ಪುಸ್ತಕಗಳು ಖಾಯಂ ಆಗಿ ಉಳಿಯುತ್ತವೆ. ತರಳಬಾಳು ಜಗದ್ಗುರು ಬೃಹನ್ಮಠದ ಸಾಹಿತ್ಯ ಸಿರಿ ಪ್ರಕಾಶನದಿಂದ ಈವರೆಗೆ ಪ್ರಕಟವಾಗಿರುವ 10 ಪುಸ್ತಕಗಳ ಪೈಕಿ ಇತ್ತೀಚೆಗೆ ಕಡೂರಿನಲ್ಲಿ ನಡೆದ ತರಳಬಾಳು ಹುಣ್ಣಿಮೆಯಲ್ಲಿ ನಾಲ್ಕು ಪುಸ್ತಕಗಳನ್ನು ಬಿಡುಗಡೆ ಗೊಳಿಸಲಾಯಿತು.

ಆಡುಮುಟ್ಟದ ಸೊಪ್ಪಿಲ್ಲ ಎಂಬಂತೆ ಶ್ರೀ ಶಿವಮೂರ್ತಿ ಸ್ವಾಮಿಗಳು ಲೇಖನಗಳಿಗೆ ಆರಿಸಿಕೊಳ್ಳದ ವಿಷಯಗಳಿಲ್ಲ. ಎಲ್ಲವೂ ಅನುಭವ ಚಿಂತನೆಯಿಂದ ರೂಪುಗೊಂಡಿವೆ. ಹಳ್ಳಿಯ ಅರಳಿಕಟ್ಟೆಯ ವಿಚಾರಗಳಿಂದ ಹಿಡಿದು ಅಮೇರಿಕಾದ ಜೋಡಿ ಗೋಪುರದವರೆಗೆ, ಭಕ್ತರ ಮನದ ಅಂತರಾಳದಿಂದ ಹಿಡಿದು ಆಧ್ಯಾತ್ಮದ ಹಾದಿ ವರೆಗೆ, ಜನ ಪ್ರತಿನಿಧಿಗಳ ಪಾಳೆಗಾರಿಕೆ ಇರಬಹುದು, ಶಿಷ್ಟಾಚಾರ ಮತ್ತು ವ್ಯವಹಾರ ಇರಬಹುದು, ಬದುಕಿಗೆ ಬೇಕಾದ ತಾಳ ಮೇಳನ್ನು ಸರಿಯಾದ ತಕ್ಕಡಿಯಲ್ಲಿಟ್ಟು ತೂಗಿ ಹೇಳುವ ಕಲೆ ಒಂದುವ ಮಠದ ಸ್ವಾಮಿಗಳಾಗಿಯೂ ರೂಢಿಸಿಕೊಂಡಿರುವ ಕೌಶಲ್ಯ ಸಾಹಿತ್ಯ ಸಿರಿಯಾಗಿ ಹರಿದು ಬಂದಿದೆ.

"ಕೆರೆ-ಹಳ್ಳ-ಭಾವಿಗಳು ಮೈದೆರೆದರೆ ಗೊಳ್ಳೆ ಗೊರಚೆ ಚಿಪ್ಪುಗಳನ್ನು ಕಾಣಬಹುದು, ವಾರಿಧಿ ಮೈದೆರೆದರೆ ಮುತ್ತು ರತ್ನಗಳನ್ನು ಕಾಣಬಹುದು, ಕೂಡಲ ಸಂಗನ ಶರಣರು ಮನ ದೆರೆದು ಮಾತನಾಡಿದರೆ ಲಿಂಗವನೇ ಕಾಣಬಹುದು. ಎನ್ನುವ ಬಸವಣ್ಣನ ವಿಚಾರಗಳಿಗೆ ಸಂವಾದಿಯಾಗಿ ಡಾ|| ಶಿವಮೂರ್ತಿ ಸ್ವಾಮಿಗಳು ಮನದೆರೆದು ಬರವಣಿಗೆಗೆ ಇಳಿಸಿರುವುದೆಲ್ಲಾ ಪಾರಲೌಕಿಕವಾಗಿ ಬದುಕಿನ ವ್ಯಾಪಾರಗಳನ್ನು ಪಾರದರ್ಶಕವಾಗಿ ಹೇಳಿ ಓದುಗರ ಅಂತರಂಗವನ್ನು ಮುಟ್ಟಿ ನೋಡಿಕೊಳ್ಳುವಂತೆ ಮಾಡುತ್ತವೆ.

ಪುರಾಣ, ವೇದಶಾಸ್ತ್ರಗಳಲ್ಲಿರುವ ಘಟನೆಗಳನ್ನು ಶ್ರೀಗಳು ಸ್ವಾರಸ್ಯಕರ ಕಥೆಗಳನ್ನಾಗಿ ಹೆಣೆಯುತ್ತಾರೆ. ಪ್ರವಾಸಗಳನ್ನು ಸಿನಿಮಾ ರೀತಿಯಲ್ಲಿ ಬಿಚ್ಚುತ್ತಾರೆ. ಕಲೆ, ವಿಜ್ಞಾನ ಇತಿಹಾಸ ಸಮಕಾಲೀನ ಯಾವುದೇ ವಿಷಯಗಳು ಶ್ರೀಗಳ ವಿಚಾರ ಮೂಸೆಯಲ್ಲಿ ಬೆಂದು ಬಂದಿವೆ.

ಸಮಾಜವನ್ನು ನಿತ್ಯವೂ ನಿಕಟವಾಗಿ ನೋಡುತ್ತಿರುವ ಶ್ರೀಗಳಿಗೆ ಎರಡು ಬಗೆಯ ಜನರ ಪರಿಚಯವಿದೆ ಎಂದು ತಮ್ಮ ಸೂಕ್ಷ್ಮ ದುರ್ಬೀನಿನಲ್ಲಿ ಕಾಣಿಸುತ್ತಾರೆ. "ಹೃದಯದಲ್ಲಿ ನಮ್ಮನ್ನು ಮನಸಾರೆ ಆರಾಧಿಸುವವರು ಒಂದು ವರ್ಗ. ಕೇವಲ ವ್ಯಾವಹಾರಿಕವಾಗಿ ನಮ್ಮನ್ನು ಬಳಸಿಕೊಂಡು ವೈಯಕ್ತಿಕ ಲಾಭಕ್ಕಾಗಿ ತೋರಿಕೆಯ ಭಕ್ತಿಯನ್ನು ಪ್ರದರ್ಶಿಸುವವರು ಇನ್ನೊಂದು ವರ್ಗ"ಎಂದು ಹೇಳುವಲ್ಲಿ ಭಕ್ತರ ಬೂಟಾಟಿಕೆಯೂ ತಿಳಿಯದಿರುತ್ತದೆಯೇ? ಆದರೆ ಇವೆಲ್ಲಾ ಒರೆಹಚ್ಚಿ ನೋಡುವ ವಿಚಾರಗಳಲ್ಲ ಎಂಬುದಕ್ಕೆ ಶ್ರೀಗಳ ಅಭಿಪ್ರಾಯ ಹೀಗಿದೆ.

"ತಾತ್ವಿಕವಾಗಿ ನೋಡಿದರೆ ಮಠಾಧೀಶರಿಗೆ ವೈಯಕ್ತಿಕ ಆಸ್ತಿ ಬರೀ ಸೊನ್ನೆ. ಇದನ್ನು ಎರಡು ಅರ್ಥದಲ್ಲಿ ಗ್ರಹಿಸಬಹುದು. ಒಂದು ಲೌಕಿಕವಾಗಿ ಅವರಿಗೆ ವೈಯಕ್ತಿಕವಾದ ಯಾವ ಆಸ್ತಿಯೂ ಇರುವುದಿಲ್ಲ. ಪಾರಲೌಕಿಕವಾಗಿ ಅವರ ನಿಜವಾದ ಆಸ್ತಿ ಶರಣರ ನುಡಿಗಟ್ಟಿನಲ್ಲಿ "ಶೂನ್ಯ ಸಂಪಾದನೆ". ಅವರು ಶಿಷ್ಯ ಮಂಡಳಿಯು ಕೊಟ್ಟ ಕಾಣಿಕೆಯ ಸಂರಕ್ಷಕರೇ ಹೊರತು ಅದರ ಮಾಲೀಕರಲ್ಲ. ಶಿಷ್ಯ ಸಮುದಾಯದ ಸೇವೆಯೇ ಶಿವನ ಸೇವೆಯೆಂದು ಪರಿಭಾವಿಸುವ ಸ್ವಾಮಿಗಳಿಗೆ ಧ್ಯಾನಿಸಲು ಬೇರೆ ಶಿವನಿಲ್ಲ" ಧ್ಯಾನಿಸುವುದೇನಿದ್ದರೂ ಭಕ್ತರಿಗಾಗಿ ಬಿಸಿಲು-ಬೆಳದಿಂಗಳು!

**-ಎಂ.ಎಸ್. ಶರಣ್**

# ಹಟ್ಟಿ ಸಂಸ್ಕೃತಿಯ ಎದೆ ಹಾಲು ಕುಡಿದು ಬೆಳೆದ ಜವಾರಿ ಪ್ರತಿಭೆ

**- ಮಲ್ಲಿಕಾರ್ಜುನ ಕಡಕೋಳ**

ಹುಡುಗನ ಹುಟ್ಟೂರು ಹೊಸದುರ್ಗ ತಾಲ್ಲೂಕಿನ ಪುಟ್ಟ ಗೊಲ್ಲರಹಟ್ಟಿ. ಕಾಡಪ್ಪ-ಕೆಂಚಮ್ಮ ಅಪ್ಪ-ಅಮ್ಮ. ಉಂಡುಡಲು ಇದ್ದದ್ದು ಯಥೇಚ್ಛ ಬಡತನ. ಆದರೆ ಅಪ್ಪ-ಅಮ್ಮ ಹಟ್ಟಿ ಹಾಡುಗಳ ಕಣಜ ಕುಬೇರರು. ಇಂತಹ ಹಾಡು-ಕಣಜಗಳ ಅಂಗಳದಲ್ಲಿ ಆಡಿ ಬೆಳೆದು, ಮುಳ್ಳು ಬೇಲಿ ಸಾಲುಗಳಲ್ಲಿ ಹಾಡಿ ನಲಿದು, ಕಡು ಬಡತನದಲ್ಲಿ ಕುಣಿದು ಕುಡಿಯೊಡೆದ ಹುಡುಗನಿಗೆ 'ಶ್ಯಾನೆ' ಓದು. ಓದಿ ಹತ್ತಾರು ಡಿಗ್ರಿಗಳನ್ನು ಪಡೆಯುವ ದಿವಿನಾದ ಉಮೇದು. ಅವರ ಹಟ್ಟಿಯಲ್ಲಿ ಓದಿಗೆಲ್ಲಿಯ ಅವಕಾಶ! ಅಂತೆಯೇ ಆತ ನಿತ್ಯವೂ ಎರಡು ಹರದಾರಿ ದೂರದ ಶ್ರೀರಾಂಪುರಕ್ಕೆ ನೇಮದಂತೆ ನಡೆದಾಡಿ, ಧ್ಯಾನದಂತೆ ಓದಿ, ಅತ್ಯುತ್ತಮ ಅಂಕ ಗಳಿಸಿ ಮೆಟ್ರಿಕ್‌ನಲ್ಲಿ ಉತ್ತೀರ್ಣನಾದ. ಹತ್ತು ಹರದಾರಿ ದೂರದ ಹೊಳಲ್ಕೆರೆಯಲ್ಲಿ ಬಿ.ಎ. ಮುಗಿಸಿ, ಸ್ನಾತಕೋತ್ತರ ಪದವಿಗಾಗಿ ದೂರದ ಮೈಸೂರಿನ ಮಾನಸ ಗಂಗೋತ್ರಿಗೆ ಹೋದವನ ಬದುಕಿನ ಚಿತ್ತ-ಚಿತ್ರವೇ ಬದಲಾಯಿತು. ಅವನಲ್ಲಿನ ಕವಿ-ಗಾಯಕ-ಸಾಧಕ-ಕಲಾವಿದನಿಗೆ ಗಂಗೋತ್ರಿ ವೇದಿಕೆಯಾಯಿತು.

ಗಂಗೋತ್ರಿಯಲ್ಲಿ ಗಳಿಸಿದ್ದು ಒಂದಲ್ಲ, ಎರಡಲ್ಲ ಹತ್ತು ಎಂ.ಎ. ಅದರಲ್ಲಿ ಐದಕ್ಕೆ ಬಂಗಾರದ ಪದಕ. ಇನ್ನೈದಕ್ಕೆ ಡಿಸ್ಟಿಂಕ್ಷನ್. ಅಧ್ಯಯನಶೀಲ ಓದಿನ ಹಂಬಲ ಅಷ್ಟಕ್ಕೇ ಇಂಗಲಿಲ್ಲ. ಜ್ಞಾನದ ಹಂಬಲವೇ ಅಂತಹದ್ದು. ಆಡುಮುಟ್ಟದ ಗಿಡವಿಲ್ಲ ಎಂಬಂತೆ ಆತ ಗಳಿಸದೇ ಉಳಿದ ಡಿಗ್ರಿ, ಡಿಪ್ಲೋಮಾಗಳಿಲ್ಲ. ಅಷ್ಟಕ್ಕೂ ಸುಮ್ಮನೆ ಕೂಡದ ಆತ ಎಂ.ಫಿಲ್. ಮಾಡಿದ. 'ಕನ್ನಡ ಸಾಹಿತ್ಯ ಪಂಥ'ಗಳಂತಹ ಗಂಭೀರ ವಿಷಯ ಕುರಿತು ಸಂಶೋಧನೆಯ ಸುದೀರ್ಘ ನಿಬಂಧ ಸಿದ್ದಪಡಿಸಿದ್ದಕ್ಕೆ ಪಿಎಚ್.ಡಿ. ಆತನ ಮುಡಿಗೇರಿತು. ಅಷ್ಟಕ್ಕೂ ಸಮಾಧಾನವಾಗದೇ ಪರೀಕ್ಷೆ ಬರೆಯುವ, ಓದುವ ದಾಹಕ್ಕೆ ವಿರಾಮ ದೊರಕದೇ ಕೆ.ಪಿ.ಎಸ್.ಸಿ. ಏರ್ಪಡಿಸುವ ಕೆ.ಎ.ಎಸ್. ಪರೀಕ್ಷೆಗೆ ಕುಂತ. ಒಮ್ಮೆ 9ನೇ ಇನ್ನೊಮ್ಮೆ 7ನೇ ಸ್ಥಾನ ಗಳಿಸಿ ಕಡೆಗೆ ಪ್ರಥಮ ಸ್ಥಾನ ಪಡೆದು ಸರ್ಕಾರಿ ಸೇವೆಗೆ ಸೇರಿದ ಆ ಹುಡುಗನ ಹೆಸರು ಡಾ|| ಕೆ. ರಾಮೇಶ್ವರಪ್ಪ.

ಹಟ್ಟಿಯ ಎದೆ ಹಾಲು ಕುಡಿದು ಬೆಳೆದ 'ಹಟ್ಟಿ ಸಂಸ್ಕೃತಿ'ಯ ಸಾಕ್ಷಿ ಪ್ರಜ್ಞೆಯಂತಿರುವ ರಾಮೇಶ್ವರಪ್ಪ ಕ್ರಿಯಾಶೀಲ ಸಾಧಕ, ಸಹೃದಯ ಗಾಯಕ ಮತ್ತು ಆಡಳಿತಗಾರ. ಸಸ್ನೇಹ ನಡವಳಿಕೆ ಮೂಲಕ ಸಾಂಸ್ಕೃತಿಕ ಲೋಕದಲ್ಲಿ ಗಳಿಸಿದ ಬಳಗ ಅನನ್ಯ. ಒಂದೆರಡು ಡಿಗ್ರಿಗಳಿಗೇ ಮೈತುಂಬಾ ಧಿಮಾಕುಗಳನ್ನೇ ತುಂಬಿಸಿಕೊಂಡವರೇ ಅನೇಕ. ಈತ ಹಾಗಲ್ಲ, ತಾನು ಮಾಸ್ಟರ್ ಡಿಗ್ರಿಗಳ ಮಾಸ್ಟರ್ ಎಂಬ ನೆನಪನ್ನೂ ಇಟ್ಟುಕೊಳ್ಳದೇ ಅಹಂಕಾರದ ಸನಿಹವೂ ಸುಳಿದವರಲ್ಲ. ಅವೆಲ್ಲ ಅಲಂಕಾರಗಳೆಂಬ ಸರಳ ಶೂದ್ರ ಸಂವೇದನೆ.

ಮೈಸೂರು ವಿಭಾಗದ ಕನ್ನಡ-ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಾಗಿದ್ದಾಗ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರನ್ನೆಲ್ಲ ಮೈಸೂರಿಗೆ ಕರೆಸಿ, ಅಪರೂಪದ ಸತ್ಕಾರ ಮಾಡಿದ ಸಂದರ್ಭಕ್ಕೆ ಅವರು ಸಂಪಾದಿಸಿದ 'ಕಾವ್ಯಭಾರತಿ' ಕೃತಿ ಕನ್ನಡಕ್ಕೊಂದು ದಿವ್ಯದ ಆರತಿ. ಮೈಸೂರು ದಸರೆಗೆ ಯುವ ದಸರೆಯ ಉಡುಗೊರೆ, ಪಟ್ಟದಕಲ್ಲು ಉತ್ಸವ, ಬಾಗಲಕೋಟೆಯ ಅರವತ್ತೆಂಟನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂಚಾಲಕತ್ವ ಇವೆಲ್ಲ ಅವರ ಸಾಂಸ್ಕೃತಿಕ ಸೇವೆಗಳಿಗೆ ವಿಶಿಷ್ಟ ಹೆಸರು. ಇವಕ್ಕೆಲ್ಲ ರಾಷ್ಟ್ರೀಯ ಮಟ್ಟದ ಮೆರಗು-ಮನ್ನಣೆ.

ಯುರೋಪಿಯನ್ ಇತಿಹಾಸ ಕಾಂಗ್ರೆಸ್ ಆಮಂತ್ರಣದ ಮೇರೆಗೆ ಆ ದೇಶಗಳಿಗೆ ಭೇಟಿ ಇತ್ತು ತಮ್ಮ ಜವಾರಿ ಜಾನಪದ ಗೀತೆಗಳ ಮೂಲಕ ಮಂಟೆಸ್ವಾಮಿಯನ್ನು, ಕನ್ನಡದ ಅನೇಕ ಜನಪದ ಸಿರಿಕಂಠಗಳ ನಿಜಧಾರೆಯನ್ನು ಪರಿಚಯಿಸಿ ಅಲ್ಲಿನ ಮಂದಿಯ ಮನಸೂರೆಗೊಂಡಿದ್ದಾರೆ. 1998ರಲ್ಲಿ ಝೆಕ್ ರಿಪಬ್ಲಿಕ್ ಪ್ರಾಗ್ ನಗರದಲ್ಲಿ ನಡೆದ ಆಧುನಿಕ ಏಷ್ಯಾ ಅಧ್ಯಯನ ಮಾಲಿಕೆಯ 15ನೇ ಸಮ್ಮೇಳನ, ಸ್ಕಾಟ್ಲೆಂಡಿನ ಎಡಿನ್ ಬರ್ಗ್ ನಲ್ಲಿ ಜರುಗಿದ 16ನೇ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ-ಸಂಸ್ಕೃತಿ ಕುರಿತು ಇಂಗ್ಲಿಷ್ ನಲ್ಲಿ ಪ್ರಬಂಧ ಮಂಡಿಸಿ ವಿದೇಶಿಯರ ಮೆಚ್ಚುಗೆಗೆ ಭಾಜನರು. ಹೀಗೆ ರಾಷ್ಟ್ರೀಯ- ಅಂತರ ರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ವೇದಿಕೆಗಳಲ್ಲಿ ಪಾಲ್ಗೊಂಡ, ನಿಸರ್ಗ ಸಿರಿಕಂಠದ ಸೊಗದಿರುಳಿನ ನಲ್ವಗಲುಗಳನೇಕ. ಈ ಪ್ರತಿಭೆ 'ಸಿರಿಗಂಧ' ಕಾವ್ಯನಾಮದಿಂದ ಈ ಹಿಂದೆ ಕೆಲವು ಕೃತಿ ರಚಿಸಿದ್ದುಂಟು. ನಮ್ಮಿಬ್ಬರ ನಡುವೆ, ನೀ ನಡೆದು ಬಂದ ದಾರಿ, ಅಪಾರ್ಥೈಡ್, ತೊರೆಸಾಲಿನ ಹಾಡು, ಸಯಾಮಿ ಇವು ಪ್ರಕಟಿತ ಕೃತಿಗಳು.

ಊಟ -ತಿಂಡಿಗಳ ಪರಿವಿಲ್ಲದ, ದಣಿವರಿಯದ ಈ ಸಾಧಕನಿಗೆ ದೂರದ ಮೈಸೂರಲ್ಲಿರುವ ಮಡದಿ ಮಮತಾ, ಮಗಳು ಸ್ಪಂದನಾ, ಮಗ ಅಮೋಘವರ್ಷ ಆಗಾಗ ಆ ಕುರಿತು ನೆನಪಿಸುತ್ತಾರೆ.

ನಮ್ಮ ಬಹುಪಾಲು ಪ್ರತಿಭೆಗಳು ಮುಗ್ಗಲಗೇಡಿತನದಿಂದಲೇ ನೇಪಥ್ಯಕ್ಕೆ ಸರಿಯುತ್ತವೆ. ಈತ ಹಾಗಲ್ಲ ಸಾಂಸ್ಕೃತಿಕ ಕ್ರಿಯಾಶೀಲತೆಯನ್ನು ಎಚ್ಚರದಿಂದ ಉಳಿಸಿಕೊಂಡಿದ್ದಾರೆ. ಮೊನ್ನೆ ದಾವಣಗೆರೆಯ ಶಿವಯೋಗ ಮಂದಿರದಲ್ಲಿ ಜರುಗಿದ ಜಯದೇವಶ್ರೀಗಳ ಸ್ಮರಣೋತ್ಸವದಲ್ಲಿ ಮೈ ಮನ ತುಂಬಿ ಇವರು ಹಾಡಿದ ಜಾನ ಪದ ಗೀತೆಗಳ ಸಿರಿಗಂಪು ಶ್ರೀ ಮುರುಘಾ ಶರಣರ ಹಾಗೂ ಶ್ರೋತೃಗಳ ಅಪೇಕ್ಷೆ ಮೇರೆಗೆ ಮರುದಿನ ಸಂಜೆಗೂ ಮುಂದುವರೆಯಿತು. ಜನಪದ ಹಾಡುಗಳ ಸಂದರ್ಭ-ಸಂಗತಿಗಳಿಗೆ ತಕ್ಕನಾಗಿ ಅವರು ವಸ್ತ್ರ ವಿನ್ಯಾಸ ದೊಂದಿಗೆ ಹಾಡಿ ಕುಣಿಯುವುದು ಸದಭಿರುಚಿ ಕಣ್ಮರೆಯಾಗುತ್ತಿರುವ ಈ ದಿನಮಾನಗಳಲ್ಲಿ ಅಪರೂಪ.

ಇವರು ದಾವಣಗೆರೆ ಜಿಲ್ಲೆಯ ಆಹಾರ ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರೆಂಬುದನ್ನು ಹೇಳಲು ಮರೆತಿದ್ದೆ. ಅಧಿಕಾರಶಾಹಿಯ ಗತ್ತುಗಳನ್ನೆಲ್ಲ ಬದಿಗೊತ್ತಿ ಸಹ ಗಾಯಕರೊಂದಿಗೆ ಈತ ಶ್ರುತಿ-ರಾಗ-ಲಯ- ಸಿರಿಗಳನ್ನು ಆವಾಹಿಸಿಕೊಂಡು ಹಾಡುವ ಸರಳತೆ ಅಮೋಘವಾದುದು. ಇಂದು (12-02-12) ಮುಂಜಾನೆ ನಗರದ ಬಾಪೂಜಿ ಸಭಾಂಗಣದಲ್ಲಿ ಇವರ ಸಿರಿಕಂಠದ 'ನೀನು ಮಲ್ಲಿಗೆ' ಬಳ್ಳಿ ಧ್ವನಿ ಸಾಮುದ್ರಿಕೆಯನ್ನು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ 9ನೇ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷೆ, ವಿದುಷಿ ಶ್ರೀಮತಿ ಶಾಮಲ ಭಾವೆ ಸಮ್ಮುಖದಲ್ಲಿ ಲೋಕಾರ್ಪಣೆ ಆಗುತ್ತಿದೆ. ಪಾರಿಜಾತದ ಅಭಿಜ್ಞಾನ ಪ್ರೀತಿ ಉಕ್ಕಿಸುವ ಈ ಹಾಡು ಹಕ್ಕಿಯ ಜೇನುಪದದ ಪ್ರೇಮ ಗೀತೆಗಳ ಮಲ್ಲಿಗೆಯ ಘಮಲು ಸವಿಯಲು ನೀವಲ್ಲಿರಬೇಕು

ಹಾಗೇನೆ ಇಂದು ಸಂಜೆ ಹೈಸ್ಕೂಲು ಮೈದಾನದಲ್ಲಿ ಕನ್ನಡದ ಅನನ್ಯ ಸಂಗೀತದ ಪ್ರತಿಭೆಗಳ ಸಂಗಮವೇ ಇದೆ. ಅಲ್ಲಿಗೂ ಬಂದರೆ ನಿಮಗೆ ಎಲ್ಲಿಲ್ಲದ ಸಂಗೀತ ಸವಿಭೋಜನ.






**ಮುಳ್ಳು ಬೇಲಿ, ಹಟ್ಟಿಯ ಎದೆ ಹಾಲು ಕುಡಿದು,**
**ಹಟ್ಟಿ ಸಂಸ್ಕೃತಿಯ ಭಾವಸಾಕ್ಷಿಯಂತೆ ಬೆಳೆದು,**
**ಪಾರಿಜಾತದ ಅಭಿಜ್ಞಾನ**
**ಪ್ರೀತಿ ಉಕ್ಕಿಸಿ, ಪ್ರೇಮ ಗೀತೆಗಳ**
**ಜೇನುಪದದ ಘಮಲು ಪಸರಿಸುವ**
**'ಸಿರಿಗಂಧ' ಕಂಠಸಿರಿಯ 'ನೀನು ಮಲ್ಲಿಗೆ ಬಳ್ಳಿ' ಧ್ವನಿ**
**ಸಾಂದ್ರಿಕೆಯ ಲೋಕಾರ್ಪಣೆ**
**ಇಂದು ಮುಂಜಾನೆ ದಾವಣಗೆರೆ**
**ಬಾಪೂಜಿ ಸಭಾಂಗಣದಲ್ಲಿ...**

# ರಾಶಿ ಭವಿಷ್ಯ



**12.2.2012 ರಿಂದ 18.2.2012 ರವರೆಗೆ**

**ಸಾಮಾನ್ಯವಾಗಿ ದಶಾಬುಕ್ತಿಯಿಂದಲೇ ನಿಖರವಾದ ಭವಿಷ್ಯ ಮೂಡುವುದಾದರೂ ಗ್ರಹಗಳ ಪರಿಭ್ರಮಣವನ್ನು ಗೋಚಾರ ರೀತಿಯಾಗಿಯೂ ವೀಕ್ಷಿಸಿ ಫಲ ವಿಶ್ಲೇಷಿಸಬಹುದು ಇದು ಸ್ಥೂಲ ಫಲದಾಯಕವಾಗಿದ್ದು, ನಿಖರವಾದ ಭವಿಷ್ಯವಾಣಿಗೆ ಪ್ರತ್ಯೇಕ ಕುಂಡಲಿಯನ್ನು ದಶಾಬುಕ್ತಿಯ ಸಹಾಯದಿಂದ ವೀಕ್ಷಿಸಬೇಕು. ಗೋಚಾರ ರೀತಿಯಿಂದ ಈ ವಾರ ಹೇಗೆ ಎಂಬುದನ್ನು ತಿಳಿಯಿರಿ.**

**ಈ ವಾರದ ವಿಶೇಷ :**

**ಫೆ. 12 ಅಮೃತ ಸಿದ್ಧಿಯೋಗ, ಫೆ. 13. ಕುಂಭ ಸಂಕ್ರಮಣ**
**ಫೆ. 15. ಶ್ರೀ ಸೀತಾವತಾರ, ಅಮೃತ ಸಿದ್ದಿಯೋಗ**
**ಫೆ. 16. ಶ್ರೀ ದಾಸನವಮಿ, ಫೆ. 17. ಶ್ರೀ ಕೊಟ್ಟೂರು ಬಸವೇಶ್ವರ ರಥ, ಫೆ. 18. ಭಾಗವತ್ಯೆಕಾದಶೀ.**

**- ಸಿ.ಕೆ. ಆನಂದತೀರ್ಥಾಚಾರ್**

**ಮೇಷ ರಾಶಿ :** ವಾರದ ಆರಂಭ ಅಷ್ಟೇನೂ ಆಶಾದಾಯಕವಲ್ಲ, ಶಾರೀರಿಕ ಅಸ್ವಸ್ಥತೆಯಿಂದ ಕೆಲಸ ಕಾರ್ಯಗಳಿಗೆ ಹಿನ್ನಡೆಯಾಗುವುದು. ಸ್ತ್ರೀ ಸಂಬಂಧವಾಗಲಿ. ಇಲ್ಲವೇ ಮನೆಯ ಸದಸ್ಯರೊಡನೆ ಮನಸ್ತಾಪ ಉಂಟಾಗುವುದು. ಉದ್ಯೋಗ-ವ್ಯವಹಾರದಲ್ಲಿ ವಾರದ ಮಧ್ಯದಿಂದ ಅನುಕೂಲವಾಗುವುದು. ಶುಕ್ರವಾರ, ಶನಿವಾರ ಉತ್ತಮ ದಿನಗಳು. ದೇವಿ ಆರಾಧನೆಯಿಂದ ಒಳಿತಾಗುವುದು. ಮತ್ತು ಪ್ರತಿ ಮಂಗಳವಾರ ಗಣಪತಿಯ ಮಂದಿರಕ್ಕೆ ಗರಿಕೆ ಪತ್ರಿಯನ್ನು ನೀಡಿರಿ.

**ವೃಷಭ ರಾಶಿ :** ಮನಸ್ಸಿನಂತೆ ಹಮ್ಮಿಕೊಂಡ ಕಾರ್ಯಗಳು ಯಶಸ್ಸಿನತ್ತ ಸಾಗುವುದರಿಂದ ಮಾನಸಿಕ ನೆಮ್ಮದಿ, ಬಂಧು-ಬಾಂಧವರಿಂದ ಪ್ರಶಂಸೆ. ಮಕ್ಕಳ ಪ್ರಗತಿಯಲ್ಲಿ ಅನುಕೂಲ. ಸಂಗಾತಿಯ ಆರೋಗ್ಯದಲ್ಲಿ ಅಲ್ಪ ಏರು-ಪೇರು ಆಗುವುದು. ಕುಲದೇವತಾ ಆರಾಧನೆಯಿಂದ ಒಳಿತಾಗುವುದು.

ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಂಡು ಬರುವುದು. ಸೋಮವಾರ, ಮಂಗಳವಾರ ಉತ್ತಮ ದಿನಗಳು.

**ಮಿಥುನ ರಾಶಿ :** ಪೂರ್ವ ಪುಣ್ಯ ಸ್ಥಾನದಲ್ಲಿನ ಶನಿಯ ಸಂಚಾರದಿಂದ ಕೆಲಸ ಕಾರ್ಯಗಳಲ್ಲಿ ಹಿನ್ನಡೆ. ಮಾನಸಿಕ ಉದಾಸೀನತೆ, ಶತ್ರು ಭಯ.

ವ್ಯಾಪಾರ-ವ್ಯವಹಾರಗಳಲ್ಲಿ ನಿರೀಕ್ಷಿತ ಆದಾಯಕ್ಕೆ ಸಂಚಕಾರ, ವಾರಾಂತ್ಯದಲ್ಲಿ ಅಲ್ಪ ಬದಲಾವಣೆಯ ಗಾಳಿ ಬೀಸುವುದು. ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬರುವುದು. ಗುರುವಾರ ಮತ್ತು ಶನಿವಾರ ದಿನಗಳು ಉತ್ತಮವಾಗಿವೆ.

**ಕಟಕ ರಾಶಿ :** ಮಾತೇ ಮುತ್ತು, ಮಾತೇ ಕುತ್ತು, ಎನ್ನುವಂತೆ ನೀವಾಡುವ ಮಾತಿನಿಂದ ನಿಮ್ಮ ಸುತ್ತಲಿನ ವಾತಾವರಣವನ್ನು ಹಾಳು ಮಾಡಿಕೊಳ್ಳುವಿರಿ.

ಹಾಗಾಗಿ ಮಾತಿನಲ್ಲಿ ಹಿಡಿತವಿರಲಿ. ಮಾತನಾಡಿ ನಂತರ ಪಶ್ಚತ್ತಾಪ ಪಡುವುದು ತರವಲ್ಲ. ಕೆಲವರಿಗೆ ಉದ್ಯೋಗದಲ್ಲಿ ಬದಲಾವಣೆ ಆಗುವುದು. ಸೋಮವಾರ ಮತ್ತು ಬುಧವಾರ ದಿನಗಳು ಉತ್ತಮವಾಗಿವೆ. ಸುಬ್ರಹ್ಮಣ್ಯ ಸ್ವಾಮಿಯ ಆರಾಧನೆ ಮಾಡುವುದು ಒಳ್ಳೆಯದು.

**ಸಿಂಹ ರಾಶಿ :** ಈ ವಾರ ಮಿಶ್ರ ಫಲವನ್ನು ಕಾಣುವಿರಿ. ಮನೆಯಲ್ಲಿ ಶುಭ-ಶೋಭನಾದಿ ಕಾರ್ಯಗಳು ಜರುಗುವವು. ಮನೆಯಲ್ಲಿ ಶಾಂತಿ ಸಮಾಧಾನ ಮೂಡುವುದು, ಸಂಗಾತಿಯ ಸಹಕಾರದಿಂದ ಕೆಲಸದಲ್ಲಿ ಉತ್ತಮ ಪ್ರಗತಿ ಇರುತ್ತದೆ.

ಸೋಮವಾರ, ಗುರುವಾರ ದಿನಗಳು ಉತ್ತಮವಾಗಿವೆ. ಪರಾಕ್ರಮ ಕೆಲಸಗಳಲ್ಲಿ ಜಯ ಉಂಟಾಗುವುದು. ಸಮಾಜದಲ್ಲಿ ಗೌರವ-ಆದರಗಳು ಹೆಚ್ಚಾಗುವವು.

**ಕನ್ಯಾ ರಾಶಿ :** ಗುರು ಒಲಿದರೆ ಕೊರಡು ಕೊನರುವುದಯ್ಯ ಎನ್ನುವಂತೆ ಸದ್ಯಕ್ಕೆ ಗುರು ಬಬಲವಿಲ್ಲದಿದ್ದರೂ, ಗುರು ಸ್ತೋತ್ರ, ಗುರು ಸೇವನೆಯಿಂದ ಅದ್ಭುತ ಬೆಳವಣಿಗೆಗೆ ನಾಂದಿಯಾಗುವುದು. ಸಮಾಜದಲ್ಲಿ ಗೌರವ-ಕೀರ್ತಿ ಮನ್ನಣೆ ಒದಗಿ ಬರುವುದು.

ಕುಲದೇವತಾ ಆರಾಧನೆಯೊಂದಿಗೆ ಆಂಜನೇಯ ಸ್ತೋತ್ರವನ್ನು ಪಠಿಸಿದಲ್ಲಿ ಒಳ್ಳೆಯದಾಗುವುದು. ಬುಧವಾರ, ಗುರುವಾರ ಶುಭ ದಿನಗಳು.

**ತುಲಾ ರಾಶಿ :** ದ್ವಿತೀಯ ಧನ ಸ್ಥಾನದ ರಾಹುವು ವ್ಯಾಪಾರ-ವ್ಯವಹಾರದಲ್ಲಿ ಏರು-ಪೇರು ಮಾಡುವನು. ವಿನಾಕಾರಣ ಅಪವಾದಗಳನ್ನು ಎದುರಿಸಬೇಕಾಗುವುದು. ಮನೆಯಲ್ಲಿನ ಪ್ರಶಾಂತ ವಾತಾವರಣ ಕಾಪಾಡಿಕೊಳ್ಳಲು ಶಿವನ ಆರಾಧನೆ ಮಾಡುವುದು ಒಳ್ಳೆಯದು.

ಕೋರ್ಟ್, ಕಛೇರಿಯ ಕೆಲಸಗಳಲ್ಲಿ ಯಶಸ್ಸು ದೊರೆಯುವುದು. ವಿಷ್ಣು ಸಹಸ್ರನಾಮ ಪಾರಾಯಣ ಮಾಡಿರಿ. ಮತ್ತು ದುರ್ಗಾದೇವಿಯ ಆರಾಧನೆ ಮಾಡಿರಿ.

**ವೃಶ್ಚಿಕ ರಾಶಿ :** ನಿಮ್ಮ ರಾಶಿಯಿಂದ 5ನೇ ಮನೆಯಲ್ಲಿನ ಶುಕ್ರ ಸಂಚಾರದಿಂದ ಪತ್ನಿ ಪುತ್ರರಿಂದ ಸುಖ, ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ, ಕೆಲವು ದಿನಗಳಿಂದ ಇದ್ದ ಮಾನಸಿಕ ದುಗುಡ ಕಡಿಮೆಯಾಗುವುದು. ಬುಧವಾರ ಸುಬ್ರಹ್ಮಣ್ಯಸ್ವಾಮಿಯ ಆರಾಧನೆ ಮಾಡಿರಿ. ಮತ್ತು 1/4 ಕೆ.ಜಿ. ಉದ್ದಿನ ಕಾಳನ್ನು ದಾನ ಮಾಡಿರಿ. ಸೋಮವಾರ ಮತ್ತು ಗುರುವಾರ ಉತ್ತಮ ದಿನ.

**ಧನಸ್ಸು ರಾಶಿ :** ಬಂಧು-ಕ್ಲೇಶ, ಕೆಲಸ ಕಾರ್ಯಗಳಲ್ಲಿ ನಿರುತ್ಸಾಹ ತೋರುವುದು. ದೂರದ ಬಂಧುಗಳಿಂದ ಅನಾವಶ್ಯಕ ಆರೋಪ, ಅಪರಾಧಗಳು ಕಂಡುಬರುತ್ತವೆ. ಆದಿತ್ಯ ಹೃದಯ ಪಾರಾಯಣ ಮಾಡಿರಿ.

ಭಾನುವಾರ 1/4 ಕೆ.ಜಿ. ಗೋಧಿ ಕಾಳನ್ನು ದಾನ ಮಾಡಿರಿ. ಇಲ್ಲವೇ ಗೋಧಿ ಚಪಾತಿಯನ್ನು ಹಸುವಿಗೆ ತಿನ್ನಿಸಿರಿ. ಬುಧವಾರ, ಗುರುವಾರ ಉತ್ತಮ ದಿನಗಳು.

**ಮಕರ ರಾಶಿ :** ಆತ್ಮಕಾರಕ ರವಿಯು ನಿಮ್ಮ ರಾಶಿಯಲ್ಲಿ ಸಂಚರಿಸುತ್ತಿರುವುದರಿಂದ ತಾಮಸ ಗುಣದ ಅಭಿವೃದ್ಧಿಯು, ಪಿತ್ತವಿಕಾರ, ಉಷ್ಣವಿಕಾರ ಮುಂತಾದ ತೊಂದರೆಗಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಪಡೆಯಿರಿ. ಹೊಲ-ಮನೆ, ಸ್ಥಾವರ ಎಸ್ಟೇಟ್, ಜಮೀನು ಇತ್ಯಾದಿಗಳ ಹಾನಿಯನ್ನು ಅನುಭವಿಸುವಿರಿ. ದುರ್ಗಾದೇವಿಯ ಸ್ತೋತ್ರ ಪಠಿಸಿರಿ. ಪ್ರತಿ ಶುಕ್ರವಾರ ದೇವಿ ಮಂದಿರದಲ್ಲಿ ಪ್ರಾರ್ಥನೆ ಮಾಡಿರಿ.


**ಕುಂಭ ರಾಶಿ :** ಸ್ವಜನ ಹಾಗೂ ಸ್ವಜಾತಿಯ ಜನರಿಂದ ಸನ್ಮಾನ, ದ್ರವ್ಯಾನುಕೂಲತೆ. ವಾದ-ವಿವಾದದಲ್ಲಿ ಜಯ. ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹಿನ್ನಡೆ. ನಿಮ್ಮ ಕುಲ ದೇವರನ್ನು ಪ್ರಾರ್ಥಿಸಿರಿ.

ಆರೋಗ್ಯದ ಕಡೆ ಗಮನ ಹರಿಸಿರಿ. ಗಣಪತಿಯ ಆರಾಧನೆಯಿಂದ ನಿಮ್ಮ ಸಂಕಷ್ಟಗಳು ದೂರವಾಗುವವು. ಬುಧವಾರ ಮತ್ತು ಗುರುವಾರ ದಿನಗಳು ಉತ್ತಮ.

**ಮೀನ ರಾಶಿ :** ಅನೇಕ ಮೂಲಗಳಿಂದ ಧನಾಗಮನ, ಹಳೆಯ ಸ್ನೇಹಿತರು ಭೇಟಿಯಾಗುವರು. ವ್ಯಾಪಾರ-ವ್ಯವಹಾರಗಳಲ್ಲಿ ಜಯ. ವಾದ-ಸ್ಪರ್ಧೆಯಲ್ಲಿ ಯಶಸ್ಸು, ಮಾತುಗಾರಿಕೆಯ ಪ್ರಭಾವದಿಂದ ಸಮಾಜದಲ್ಲಿ ಹೆಸರು ಮಾಡುವಿರಿ.

ಸಾಮಾಜಿಕ ಮಾನ ಮನ್ನಣೆ ದೊರೆಯುವುದು. ಸೋಮವಾರ, ಮಂಗಳವಾರ ದಿನಗಳು ಸೂಕ್ತವಾಗಿವೆ. ಆಂಜನೇಯ ದೇವಾಲಯದಲ್ಲಿ ಎಳ್ಳು ದೀಪ ಹಚ್ಚಿರಿ.

# ಸಿದ್ಧಗಂಗಾ - ಸಂಭ್ರಮ 2012



**ಕರ್ನಾಟಕದ ಪ್ರತಿಯೊಂದು ಸ್ಥಳವೂ ಪ್ರೇಕ್ಷಣೀಯ! ಸ್ಥಳ ಚರಿತ್ರೆ, ಐತಿಹಾಸಿಕ ಮಹತ್ವ, ಗತ ವೈಭವ, ಸಾಂಸ್ಕೃತಿಕ, ಭೌಗೋಳಿಕ ವಿಭಿನ್ನತೆ-ಹೀಗೆ ಅಧ್ಯಯನ ಮಾಡಬೇಕಾದ ವಿಚಾರಗಳು ಹಲವಾರು. ಐದು ದಿನಗಳ ಪ್ರವಾಸಕ್ಕೆ ಆಯ್ಕೆ ಮಾಡಿಕೊಂಡ ಸ್ಥಳಗಳು ಬಯಲು ಸೀಮೆಯ ದಾವಣಗೆರೆಯಿಂದ ಬೆಟ್ಟ ಗುಡ್ಡಗಳ ಮಲೆನಾಡು ತಪ್ಪಲು ಸೃಷ್ಟಿ ವೈಚಿತ್ರ್ಯ ಗಳನ್ನೊಳಗೊಂಡ ಕರಾವಳಿ. ಜನ ಜೀವನ, ಆಹಾರ ವೈವಿಧ್ಯತೆ, ಭಾಷಾ ಶೈಲಿ ಇವುಗಳನ್ನೊಳ ಗೊಂಡಂತೆ ಸ್ಥಳೀಯರೊಂದಿಗೆ ಬೆರೆತು ವಿಚಾರ ವಿನಿಮಯ ನಡೆಸುವ ಅಪರೂಪದ ಅವಕಾಶ.**



ಸುತ್ತ ನೀಲ ಸಾಗರ. ತೆರೆಗಳ ಏರಿಳಿತ. ಮೋಟಾರು ಬೋಟಿಗೆ ಅಪ್ಪಳಿಸುವ ತೆರೆಗಳ ನವಿರಾದ ಶಬ್ಧ ಬಿಟ್ಟರೆ ನೀರವ ಪ್ರಶಾಂತ ವಾತಾವರಣ. ಇಂತಹ ಅಭೂತಪೂರ್ವ ಶಾಂತತೆಯನ್ನು ಅನುಭವಿಸಿದವರು ಸಿದ್ಧಗಂಗಾ ವಿದ್ಯಾಸಂಸ್ಥೆಯ 10ನೇ ತರಗತಿ ಬಾಲಕ-ಬಾಲಕಿಯರು. ಎರಡು ಮೋಟಾರು ಬೋಟಿನಲ್ಲಿ ಕುಳಿತ 95 ಮಕ್ಕಳು ಸಮುದ್ರ ಯಾನದಲ್ಲಿ ಅರಬ್ಬಿ ಸಮುದ್ರದ ಮುರುಡೇಶ್ವರ ತೀರದಿಂದ ದೂರ ಪಯಣಿಸಿದಾಗ ಕ್ಷಣಕಾಲ ಮೋಟಾರು ಬೋಟುಗಳು ಸ್ಥಗಿತಗೊಂಡಾಗ ಪಡೆದ ಆ ಅನುಭವ ಅವಿಸ್ಮರಣೀಯ! ಇಂತಹ ಹತ್ತು ಹಲವಾರು ವಿಶಿಷ್ಟತೆಗಳನ್ನೊಳಗೊಂಡಿದೆ ಶೈಕ್ಷಣಿಕ ಪ್ರವಾಸ "ಸಿದ್ಧಗಂಗಾ ಸಂಭ್ರಮ 2012"

ಶೈಕ್ಷಣಿಕ ಪ್ರವಾಸಗಳನ್ನು ಸಂಘಟಿಸಿ, ಸಮರ್ಥವಾಗಿ ನಿಭಾಯಿಸಿ ಯಶಸ್ವಿಗೊಳಿಸುವುದು ನಿಜವಾಗಿಯೂ ಒಂದು ಕಲೆ. ಶಾಲಾ-ಕಾಲೇಜು ದಿನಗಳಲ್ಲಿ ಮಕ್ಕಳು ಪ್ರವಾಸ ಹೋಗುವುದು ಸಹಜ. ಪ್ರವಾಸಕ್ಕೆ ಆಯ್ಕೆ ಮಾಡುವ ಮಾಸದಿಂದ ಮಾರ್ಗದುದ್ದಕ್ಕೂ ಮಾಡಬೇಕಾದ ವ್ಯವಸ್ಥೆಯ ಬಗ್ಗೆ ಪೂರ್ವಭಾವಿ ಸಿದ್ಧತೆ ಇದ್ದರೆ, ಪ್ರವಾಸ ಆನಂದಕರವಾಗಿ, ಆಹ್ಲಾದಕರವಾಗಿ ನೆನಪಿನ ಬುತ್ತಿಯಾಗಿರಲು ಸಾಧ್ಯ. ಇಂತಹ ಒಂದು ಪ್ರವಾಸ ಕಥನ ನಿಮ್ಮ ಮುಂದಿದೆ.

ದಾವಣಗೆರೆ ಸಿದ್ಧಗಂಗಾ ಸಂಸ್ಥೆಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು ಪ್ರತಿವರ್ಷ ಅಕ್ಟೋಬರ್ ತಿಂಗಳಲ್ಲಿ ಐದು ದಿನಗಳ ಪ್ರವಾಸ ಹೋಗುತ್ತಾರೆ. ಈ ವರ್ಷದ ಪ್ರವಾಸದ ಪ್ರತಿ ಕ್ಷಣವನ್ನು ಸೆರೆ ಹಿಡಿದು ಸಂಕಲನ ಮಾಡಿದ್ದಾರೆ ಹಿರಿಯ ವಿದ್ಯಾರ್ಥಿ. ಬಾಲಾಜಿ ವಿ. 95 ಮಕ್ಕಳು ಎರಡು ಬಸ್ಸುಗಳಲ್ಲಿ ದಿನಾಂಕ : 12.10.2011 ರಿಂದ 16.10.2011 ರವರೆಗೆ ಅನೇಕ ಸ್ಥಳಗಳನ್ನು ದರ್ಶಿಸಿದರು. ಮನೋಲ್ಲಾಸಕರ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. "ಸಂಭ್ರಮ 2012"ರ ವಿವರಣೆ ನೀಡಿದರೆ ಒಂದು ಮಾದರಿ ಪ್ರವಾಸ ಹೇಗಿರುತ್ತದೆ ಎಂಬುದರ ಕಲ್ಪನೆ ಓದುಗರಿಗಾಗುತ್ತದೆ.

ಕರ್ನಾಟಕದ ಪ್ರತಿಯೊಂದು ಸ್ಥಳವೂ ಪ್ರೇಕ್ಷಣೀಯ! ಸ್ಥಳ ಚರಿತ್ರೆ, ಐತಿಹಾಸಿಕ ಮಹತ್ವ, ಗತ ವೈಭವ, ಸಾಂಸ್ಕೃತಿಕ, ಭೌಗೋಳಿಕ ವಿಭಿನ್ನತೆ-ಹೀಗೆ ಅಧ್ಯಯನ ಮಾಡಬೇಕಾದ ವಿಚಾರಗಳು ಹಲವಾರು. ಐದು ದಿನಗಳ ಪ್ರವಾಸಕ್ಕೆ ಆಯ್ಕೆ ಮಾಡಿಕೊಂಡ ಸ್ಥಳಗಳು ಬಯಲು ಸೀಮೆಯ ದಾವಣಗೆರೆಯಿಂದ ಬೆಟ್ಟ ಗುಡ್ಡಗಳ ಮಲೆನಾಡು ತಪ್ಪಲು, ಸೃಷ್ಟಿ ವೈಚಿತ್ರ್ಯಗಳನ್ನೊಳಗೊಂಡ ಕರಾವಳಿ. ಜನ ಜೀವನ, ಆಹಾರ ವೈವಿಧ್ಯತೆ, ಭಾಷಾ ಶೈಲಿ ಇವುಗಳನ್ನೊಳಗೊಂಡಂತೆ ಸ್ಥಳೀಯರೊಂದಿಗೆ ಬೆರೆತು ವಿಚಾರ ವಿನಿಮಯ ನಡೆಸುವ ಅಪರೂಪದ ಅವಕಾಶ.

**ಐದು ದಿನಗಳ ಸೃಜಶೀಲತೆ :** ಮುಂಡಗೋಡಿನಲ್ಲಿ ಟಿಬೇಟಿಯನ್ನರ ಸಂಸ್ಕೃತಿ ಅಧ್ಯಯನ, ಪೂಜಾ ಮಂದಿರದಲ್ಲಿ ಧ್ಯಾನ, ಸಿರಸಿಯ ಮಾರಿಕಾಂಬೆಯ ದರ್ಶನ, ಜೋಗ ಜಲಪಾತದ ಬುಡದಲ್ಲಿ ನಿಂತು ಜಲಧಾರೆಯ ಅಬ್ಬರದ ವೀಕ್ಷಣೆ, ಇಡಗುಂಜಿಯ ಭವ್ಯತೆಯ ಮುಂದೆ ಧ್ಯಾನ ಮುದ್ರೆಯಲ್ಲಿ ಏಕಾಗ್ರತೆ. ಮುರ್ಡೇಶ್ವರದಲ್ಲಿ ಸಮುದ್ರ ಯಾನ, ಸಾಗರದ ಅಬ್ಬರದ ಅಲೆಗಳ ಮಧ್ಯೆ ಧ್ಯಾನ. ಭಟ್ಕಳದಲ್ಲಿ ಫೇಸ್ ಮೇಕಪ್, ಕುಂದಾಪುರದಲ್ಲಿ ದೋಣಿ ನಿರ್ಮಾಣ, ಕಾಪುವಿನಲ್ಲಿ ಗಾಳಿಪಟ ಹಾರಾಟ, ಧರ್ಮಸ್ಥಳದಿಂದ ಬೇಲೂರಿಗೆ ಬರುವ ಮಾರ್ಗ ಮಧ್ಯದಲ್ಲಿ ಬೃಹತ್ತಾದ ಡ್ರಾಗನ್ ಪ್ರತಿರೂಪ ಸೃಷ್ಟಿ. ಈ ಸೃಜನಶೀಲತೆಗೆ ಬೇಕಾದ ಪರಿಕರಗಳು ಪ್ರವಾಸದ ಲಗ್ಗೇಜಿನ ಜೊತೆಗಿರುತ್ತದೆ. ಫೇಸ್ ಮೇಕಪ್ ನಲ್ಲಿ ಮಕ್ಕಳ ಕಲ್ಪನೆ ಅನಾವರಣಗೊಳ್ಳುತ್ತದೆ. ಸ್ವಯಂಪಾಕ, ಶ್ರಮದಾನ, ಸಹಬಾಳ್ವೆ, ಸಹಪಂಕ್ತಿ ಭೋಜನ, ಓಕುಳಿಯಾಟ, ಕ್ಯಾಂಡಲ್ ಲೈಟ್ ಮೀಟ್, ಕ್ಯಾಂಪ್ ಫೈರ್ ನಲ್ಲಿ ಮಕ್ಕಳ ಪ್ರತಿಭಾ ಪ್ರದರ್ಶನ, ಮನೋರಂಜನೆಗಾಗಿ ವಿಡಿಯೋ ಇದು "ಸಂಭ್ರಮದ" ವಿಶೇಷತೆ.

**ಪೂರ್ವ ಸಿದ್ಧತೆ :** ಪ್ರವಾಸಕ್ಕೆ ಹೊರಡುವ ಎರಡು ದಿನಗಳ ಮೊದಲು ವಿದ್ಯಾರ್ಥಿಗಳು ಅಡುಗೆಗೆ ಬೇಕಾದ ದಿನಸಿ ಪರಿಕರಗಳನ್ನು ಖರೀದಿಸುವರು. ಗಾಳಿಪಟ, ಫೇಸ್ ಮೇಕಪ್ ಕಿಟ್, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ವಿಜ್ಞಾನ ಪ್ರಯೋಗಗಳ ಉಪಕರಣಗಳು, ದೋಣಿ ಮಾಡಲು ಬೇಕಾದ ಸಾಮಗ್ರಿಗಳು, ಡ್ರಾಗನ್ ಫ್ರೇಮ್ ಗಳನ್ನು ಪ್ರತ್ಯೇಕ ಪ್ಯಾಕ್ ಮಾಡುವರು. ಗಾಳಿಪಟ ತಯಾರಿಸುವ ವಿಧಾನ ಕಲಿತುಕೊಳ್ಳುವರು. ಹೋಳಿ ಬಣ್ಣಗಳನ್ನು ಡಬ್ಬಗಳಲ್ಲಿ ಭದ್ರಗೊಳಿಸುವರು. ಎಲ್ಲಾ ವಸ್ತುಗಳ ಖರೀದಿ, ಪ್ಯಾಕ್ ಆದ ನಂತರ ಟೂರಿನ ಹಾಡುಗಳ ತರಬೇತಿ ನಡೆಯುತ್ತದೆ. ಸ್ವತಃ ರಚಿಸಿ ರಾಗ ಸಂಯೋಜಿಸಿದ ಹಾಡುಗಳು ಮಕ್ಕಳಿಗೆ ಕಂಠಪಾಠವಾಗುತ್ತವೆ. ಹೊರಡುವ ದಿನ ಲಗೇಜಿನೊಂದಿಗೆ ಮಕ್ಕಳು ಆಗಮಿಸಿ ತಮ್ಮ ತಂಡಗಳಿಗೆ ನಿರ್ವಹಿಸಿದ ಜವಾಬ್ದಾರಿಯ ಬಗ್ಗೆ ಮತ್ತೊಮ್ಮೆ ಚರ್ಚಿಸಿ ಕಾರ್ಯ ಪ್ರವೃತ್ತರಾಗುತ್ತಾರೆ. ವಸ್ತುಗಳ ಜವಾಬ್ದಾರಿಯನ್ನು ಒಂದು ಟೀಮ್ ನವರು ನಿರ್ವಹಿಸಿದರೆ, ಅಡುಗೆ ಮಾಡುವ ತಂಡ ಮತ್ತೊಂದು, ತರಕಾರಿ - ಈರುಳ್ಳಿ ಇತ್ಯಾದಿಗಳನ್ನು ಹೆಚ್ಚುವ ತಂಡ ಚಾಕುಗಳೊಂದಿಗೆ ಸಿದ್ಧ! ಪಾತ್ರೆ ತೊಳೆಯುವ ಗುಂಪಿನವರು ಸರದಿಗಾಗಿ ಕಾಯುವರು. ಎಲ್ಲಾ ತಂಡಗಳಿಗೂ ಒಬ್ಬೊಬ್ಬ ನಾಯಕ ಅಥವಾ ನಾಯಕಿ. ಸ್ವಯಂ ಸ್ಫೂರ್ತಿಯಿಂದ ಸಂಭ್ರಮದಿಂದ ಕೆಲಸ ಮಾಡುವ ಕ್ಷಣಗಳು ಮಧುರ. ನಲಿವಿನ-ಸಂತಸದ ಕ್ಷಣಗಳು ಸದ್ದಿಲ್ಲದೇ ಕರಗಿ ಹೋಗುತ್ತವೆ. ನೆನಪು ಶಾಶ್ವತವಾಗಿ ಉಳಿಯುತ್ತದೆ.

**ನಳಪಾಕ :** ಈ ಮಕ್ಕಳು ಪ್ರವಾಸದುದ್ದಕ್ಕೂ ಸವಿಯುವ ತಿನಿಸುಗಳು ಶುದ್ಧ, ಸ್ವಚ್ಛ ಮತ್ತು ಪೌಷ್ಠಿಕತೆಯುಳ್ಳದ್ದು. ಮುಂಡಗೋಡಿನಲ್ಲಿ ದಾಲ್ ಮತ್ತು ಪಾಲಕ್ ಪನೀರ್ ಜೊತೆ ಚಪಾತಿ. ಜೋಗದಲ್ಲಿ ಅವಲಕ್ಕಿ, ಜಿಲೇಬಿ ಉಪ್ಪಿನಕಾಯಿ ಜೊತೆ ಜೂಸ್, ಇಡಗುಂಜಿಯಲ್ಲಿ ಅನ್ನ-ಸಾಂಬಾರ್, ಹಪ್ಪಳ, ರಾತ್ರಿ ವಿಶ್ರಾಂತಿ. ಬೆಳಗ್ಗೆ ಇಡಗುಂಜಿಯಲ್ಲಿ ಉಪ್ಪಿಟ್ಟು, ಭಟ್ಕಳದಲ್ಲಿ ರೊಟ್ಟಿ, ಎಣ್ಣೆಗಾಯಿ, ಚಟ್ನಿಪುಡಿ ಮೊಸರನ್ನ. ರಾತ್ರಿ ಕುಂದಾಪುರದಲ್ಲಿ ವೆಜಿಟೇಬಲ್ ಪಲಾವ್, ಬಾದಾಮಿ ಹಾಲು, ಟೊಮ್ಯಾಟೋ ಚಿಪ್ಸ್, ಮೂರನೇ ದಿನ ಬೆಳಿಗ್ಗೆ ವೆಜ್ ಫ್ರೈಡ್ ರೈಸ್, ಸಮೋಸಾ, ಮಧ್ಯಾಹ್ನ ಕಿಚಡಿ. ಐದನೇ ದಿನ ಬೆಳಿಗ್ಗೆ ಮ್ಯಾಗಿ, ಮಧ್ಯಾಹ್ನ ಟೊಮ್ಯಾಟೋ ಬಾತ್, ಚುರುಮುರಿ, ಗೋಬಿ. ಪ್ರೀತಿಯಿಂದ ಊಟ ಬಡಿಸುವ ದೃಶ್ಯ, ಮಕ್ಕಳು ಪರಸ್ಪರ ತುತ್ತು ತಿನ್ನಿಸುವ, ಚಪ್ಪರಿಸಿ ಸ್ವಾದ ಅನುಭವಿಸುವ ನೋಟ "ಸಂಭ್ರಮದ" ಅಮೂಲ್ಯ ಕ್ಷಣಗಳು.

**ಸ್ಥಳ ಚರಿತ್ರೆ :** ದರ್ಶಿಸುವ ಪ್ರತಿ ಸ್ಥಳದ ವಿವರಗಳನ್ನು ಮೊದಲೇ ಕಲೆ ಹಾಕಿರುವ ತಂಡದವರು ಬಸ್ಸಿಳಿದ ತಕ್ಷಣ ಎಲ್ಲಾ ಮಕ್ಕಳನ್ನು ಜೊತೆಯಾಗಿ ಕೂರಿಸಿ, ಆ ಸ್ಥಳದ ಭೌಗೋಳಿಕ ಸನ್ನಿವೇಶ ವಾಯುಗುಣ, ಬೆಳೆ, ಜನಜೀವನ ಮತ್ತು ಆ ಸ್ಥಳದ ಐತಿಹಾಸಿಕ ಮಹತ್ವವನ್ನು ವಿಸ್ತಾರವಾಗಿ ತಿಳಿಸಿ ವೀಕ್ಷಣೆಗೆ ಸಿದ್ಧಗೊಳಿಸುತ್ತಾರೆ. ಇದರಿಂದಾಗಿ ಮಕ್ಕಳು ಆ ಸ್ಥಳದ ಪರಿಚಯವನ್ನು ಕೂಲಂಕುಶವಾಗಿ ತಿಳಿಯಲು ಸಹಾಯವಾಗುತ್ತದೆ. "ಕೋಶ ಓದು-ದೇಶನೋಡು" ಎಂಬ ಹೇಳಿಕೆಗೆ ಅನ್ವಯವಾಗುವಂತೆ ಯೋಜಿಸಿರುವ ಈ ಪ್ರವಾಸದಲ್ಲಿ ಬಾಲ್ಯದ ರಸ ಗಳಿಗೆಗಳನ್ನು ಆಸ್ವಾದಿಸುವ ಅಮೂಲ್ಯ ಕ್ಷಣಗಳಿವೆ. ಕೊನೆ ತನಕ ನೆನಪಿನಲ್ಲಿ ಉಳಿಯುವ ಮಧುರ ಅನುಭವವಿದೆ. ಪಟಾಕಿ-ಸಿಡಿಮದ್ದುಗಳ ಚಿತ್ತಾರದ ವೈಭವವಿದೆ. ಮೇಣದ ಬತ್ತಿ ಬೆಳಕಿನಲ್ಲಿ ಪ್ರತಿಯೊಬ್ಬರು ಅನುಭವದ ಮೆಲುಕು ಹಾಕುವರು. ದಿನಾಂಕ : 12.02.2012 ರಂದು ಭಾನುವಾರ ಬೆಳಿಗ್ಗೆ 8 ಗಂಟೆಗೆ ತ್ರಿಶೂಲ್ ಚಿತ್ರಮಂದಿರದಲ್ಲಿ 2 ಗಂಟೆಗಳ "ಸಂಭ್ರಮ 2012"ರ ಪ್ರದರ್ಶನವಿದೆ. ಸಿದ್ಧಗಂಗಾ ವಿದ್ಯಾರ್ಥಿಗಳ ಸೃಜನಶೀಲತೆಗೆ "ಸಂಭ್ರಮ" ಕೈಗನ್ನಡಿಯಾಗಿದೆ.

ಜಿಲ್ಲಾ ಉತ್ಸವದ ಮಕ್ಕಳ ಹಬ್ಬದೊಂದಿಗೆ "ಸಂಭ್ರಮ" ಕೈಗನ್ನಡಿಯಾಗಿದೆ.

ಜಿಲ್ಲಾ ಉತ್ಸವದ ಮಕ್ಕಳ ಹಬ್ಬದೊಂದಿಗೆ "ಸಂಭ್ರಮ 2012"ನ್ನು ನೋಡಿ ಆನಂದಿಸೋಣ. ಈ ಸಿ.ಡಿ. ಬಿಡುಗಡೆಯನ್ನು ಜನತಾವಾಣಿ ಸಂಪಾದಕರು ಹಾಗೂ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಎಂ.ಎಸ್. ವಿಕಾಸ್ ರವರು ನೆರವೇರಿಸಿ ಕೊಡಲಿದ್ದಾರೆ. ಈ ಸಿ.ಡಿ.ಯನ್ನು www.siddaganga.comನಲ್ಲಿ ಡೌನ್ ಲೋಡ್ ಮಾಡಬಹುದಾಗಿದೆ. ಬನ್ನಿ.... ವೀಕ್ಷಿಸಿ ಸಿದ್ಧಗಂಗಾ ಸಂಭ್ರಮದಲ್ಲಿ ಪಾಲ್ಗೊಳ್ಳಿ.

- **ಗಾಯತ್ರಿ ಚಿಮ್ಮಡ್**, ಇಂಗ್ಲಿಷ್ ಶಿಕ್ಷಕಿ
ಸಿದ್ಧಗಂಗಾ ಕಾಂಪೋಜಿಟ್ ಹೈಸ್ಕೂಲ್

---

### ಉಭಯ ಗಾಯನ ವಿಶಾರದೆ

## ಡಾ|| ಶ್ಯಾಮಲಾ ಜಿ. ಭಾವೆ



**ಕರ್ನಾಟಕ ಸುಗಮ ಸಂಗೀತ ಪರಿಷತ್ತು ಬೆಂಗಳೂರು ಮತ್ತು ದಾವಣಗೆರೆ ಜಿಲ್ಲಾಡಳಿತದ ಸಂಯುಕ್ತಾಶ್ರಯದಲ್ಲಿ 2012ರ ಫೆಬ್ರವರಿ 12ರ ಭಾನುವಾರ ಮತ್ತು 13ರ ಸೋಮವಾರ 2 ದಿನಗಳ ಕಾಲ ದಾವಣಗೆರೆಯ ಬಾಪೂಜಿ ಸಭಾಂಗಣದಲ್ಲಿ ನಡೆಯುವ 9ನೇ ರಾಜ್ಯ ಮಟ್ಟದ ಸುಗಮ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ 'ಉಭಯಗಾನ ವಿದುಷಿ' ಡಾ|| ಶ್ಯಾಮಲಾ ಜಿ. ಭಾವೆಯವರ ಕುರಿತು ಒಂದು ಕಿರು ಪರಿಚಯ.**

ಸಂಗೀತ ಕ್ಷೇತ್ರದಲ್ಲಿ ವೈವಿಧ್ಯಮಯವಾದ ಕ್ರಿಯಾಶೀಲತೆ ಮತ್ತು ಕಾರ್ಯ ಚಟುವಟಿಕೆಗಳೊಂದಿಗೆ ಮಹತ್ಸಾಧನೆ ಮಾಡಿ ಸೇವೆ ಸಲ್ಲಿಸುತ್ತಿರುವ ಅಪರೂಪದ ಸಂಗೀತದ ಮೇರು ಪ್ರತಿಭೆ ಉಭಯ ಗಾನ ವಿದುಷಿ ಡಾ|| ಶ್ಯಾಮಲಾ ಜಿ. ಭಾವೆ ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತ ಪ್ರಕಾರಗಳನ್ನು ಮೈಗೂಡಿಸಿಕೊಂಡಿರುವ ಹಿರಿಯ ಜೀವ. ಲಘು ಶಾಸ್ತ್ರೀಯ ಸಂಗೀತ ಹಾಗೂ ಸುಗಮ ಸಂಗೀತವನ್ನು ಹಾಡುತ್ತಾ, ಸಂಗೀತ ಸಂಯೋಜಕಿಯಾಗಿ ಸಂಗೀತ ಕ್ಷೇತ್ರಕ್ಕೆ ತಮ್ಮದೇ ಕೊಡುಗೆಯೊಂದಿಗೆ ಛಾಪು ಮೂಡಿಸಿದ ಧೀಮಂತ ಮಹಿಳೆ ಶ್ಯಾಮಲಾ ಭಾವೆ.

ಪಾರಂಪರಿಕ ಶಾಸ್ತ್ರೀಯತೆಯೊಂದಿಗೆ ಸೃಜನಾತ್ಮಕತೆಯನ್ನು ಮೇಳೈಸಿ ತಮ್ಮ ವಿಶಿಷ್ಟ ಕಂಠ ಸಿರಿಯ ಮೂಲಕ ಶ್ರೋತೃಗಳ ಮನ ಮುನಮುಟ್ಟುವಂತೆ ಮಾಡುವುದೇ ಇವರ ವಿಶೇಷತೆ ಮತ್ತು ಶ್ರೀಮಂತಿಕೆ. ಎಪ್ಪತ್ತು ವಸಂತ ಕಂಡರೂ ಅದೇ ಕ್ರಿಯಾಶೀಲತೆ, ಬತ್ತದ ಉತ್ಸಾಹ, ಲವಲವಿಕೆ ಯುವಕರನ್ನು ನಾಚಿಸುವಂತಿದೆ.

ದಿವಂಗತ ಗಂಗೂಬಾಯಿ ಹಾನಗಲ್, ಪಂಡಿತ್ ಭೀಮಸೇನ್ ಜೋಷಿಯವರ ಸಮಕಾಲೀನರಾದ, ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಹಿಂದೂಸ್ತಾನಿ ಸಂಗೀತ ಪರಿಣಿತರಾದ ತಂದೆ ಆಚಾರ್ಯ ಗೋವಿಂದ ವಿಠಲ್ ಭಾವೆ, ತಾಯಿ ಲಕ್ಷ್ಮಿ ಜಿ. ಭಾವೆಯವರಿಂದ ವಂಶಪಾರಂಪರ್ಯವಾಗಿ ಬಳುವಳಿಯಾಗಿ ಬಂದ ಹಿಂದೂಸ್ತಾನಿ ಸಂಗೀತ ಕಲಿತ ಶ್ಯಾಮಲಾರವರು ಅದರ ಜೊತೆಜೊತೆಯಲ್ಲೇ ಕ್ಷೇತ್ರೀಯ ಶೈಲಿಯಾದ ಕರ್ನಾಟಕ ಸಂಗೀತವನ್ನು ವಿದ್ವಾನ್ ಬಿ. ದೊರೆಸ್ವಾಮಿ ಹಾಗೂ ಎ. ಸುಬ್ಬರಾವ್ ಅವರಿಂದ ಕಲಿತರು.

ಅದರೊಂದಿಗೆ ಕಾವ್ಯ ಗಾಯನವನ್ನು ಅಷ್ಟೇ ಸಮರ್ಥವಾಗಿ ತಮ್ಮದಾಗಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಒಬ್ಬ ಸಂಗೀತಗಾರ ಸಂಗೀತಕ್ಕೆ ಕೊಟ್ಟ ಪ್ರಾಮುಖ್ಯತೆ ಕೊಟ್ಟು ಒಂದೆರೆಡು ವಾದ್ಯಗಳೊಂದಿಗೆ ತಮ್ಮ ಪರಿಣಿತಿಯನ್ನು ಸೀಮಿತಗೊಳಿಸುತ್ತಾರೆ. ಆದರೆ ಶ್ಯಾಮಲಾ ಭಾವೆಯವರು ಹಾರ್ಮೋನಿಯಂ, ವೀಣೆ, ಸಿತಾರ್, ಜಲ ತರಂಗ ಹೀಗೆ ನಾಲ್ಕು ವಾದ್ಯಗಳನ್ನು ಆಳವಾಗಿ ಅಭ್ಯಸಿಸಿ, ಪರಣಿತಿ ಹೊಂದಿ ತಮ್ಮ ಸಂಗೀತ ಭಂಡಾರ ಹೆಚ್ಚಿಸಿ ಕೊಂಡು ಪರಿಪೂರ್ಣತೆಯ ಹಾದಿ ಯಲ್ಲಿ ಮುನ್ನಡೆದಿದ್ದಾರೆ. ಅಲ್ಲದೇ 'ಪರಿವರ್ತನೆ' ಚಲನಚಿತ್ರಕ್ಕೆ ಸಂಗೀತ ನೀಡುವುದರೊಂದಿಗೆ ಪ್ರಪ್ರಥಮ ಮಹಿಳಾ ಸಂಗೀತ ನಿರ್ದೇಶಕಿ ಎಂಬ ಗೌರವಕ್ಕೆ ಭಾಜನರಾಗಿದ್ದಾರೆ.


ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತಗಳ ಜುಗಲ್‌ಬಂದಿಗಳು ಇಬ್ಬರು ಪರಿಣಿತ ಸಂಗೀತಗಾರರು ಪರಸ್ಪರ ಹಾಡುವುದರ ಮೂಲಕ ಸಂಗೀತದ ಜಿದ್ದಾ-ಜಿದ್ದಿ ಸರ್ವೇ ಸಾಮಾನ್ಯ. ಆದರೆ ಶ್ಯಾಮಲಾ ಭಾವೆಯವರು ಎರಡೂ ಸಂಗೀತ ಪ್ರಕಾರಗಳಲ್ಲಿ ಒಬ್ಬರೇ ಜುಗಲ್ ಬಂದಿ ನಡೆಸಿ ಸೈ ಎನಿಸಿಕೊಂಡು ಜನಪ್ರಿಯತೆ ಪಡೆದ ಏಕೈಕ ದೈತ್ಯ ಪ್ರತಿಭೆ! ಪಾರಂಪರಿಕ ಶೈಲಿಯ ಸಂಗೀತ ಕಚೇರಿಗಳಿಗಷ್ಟೇ ಸೀಮಿತವಾಗದ ಶ್ಯಾಮಲಾರವರು ತಮ್ಮ ಉಭಯ ಗಾನದ ಪ್ರತಿಭೆಯೊಂದಿಗೆ 'ದಕ್ಷಿಣೋತ್ತರಂ' ಎಂಬ ಶೀರ್ಷಿಕೆಯಡಿಯಲ್ಲಿ ಭಾರತವೂ ಸೇರಿದಂತೆ, ಕಡಲಾಚೆಗೂ ಈ ಪ್ರಕಾರವನ್ನು ಕೊಂಡೊಯ್ದು, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಪಡೆದ ಸಾಧಕಿ.

ಕೇವಲ ಹಾಡುಗಾರಿಕೆ, ವಾದ್ಯ ಪರಿಕರಗಳ ಪರಿಣಿತಿಯಲ್ಲದೇ ಸ್ವರ ಸಂಯೋಜಕಿಯಾಗಿಯೂ ಇವರು ತಮ್ಮ ಪ್ರತಿಭೆಯನ್ನು ಜಗತ್ತಿಗೆ ಅನಾವರಣಗೊಳಿಸಿದ್ದಾರೆ. ಹಿರಿಯ ಸಾಹಿತ್ಯ ದಿಗ್ಗಜರ ಸಾವಿರಾರು ಕವನಗಳಿಗೆ ಸ್ವರ ಸಂಯೋಜನೆ ಮಾಡಿರುವ ಇವರು ಹಾಡಿರುವ ಕೆ.ಎಸ್. ನರಸಿಂಹಸ್ವಾಮಿಯವರ 'ಹತ್ತು ವರುಷದ ಹಿಂದೆ' ಹಾಡು ಇಂದಿಗೂ ಜನಪ್ರಿಯವಾಗಿದೆ. ಆಕಾಶವಾಣಿಯ 'ಎ' ಶ್ರೇಣಿಯ ಕಲಾವಿದೆಯೆಂಬ ಮನ್ನಣೆ ಪಡೆದಿರುವ ಇವರು ಸುಮಾರು 50ಕ್ಕೂ ಮಿಕ್ಕ ಧ್ವನಿ ಸುರುಳಿಗಳಿಗೆ ಸಂಗೀತ ನಿರ್ದೇಶನ ಮಾಡಿ ಹಾಡಿರುತ್ತಾರೆ. ಜೊತೆಗೆ ಹಲವಾರು ಸಾಕ್ಷ್ಯ ಚಿತ್ರಗಳಿಗೆ ಶೀರ್ಷಿಕೆ ಗೀತೆಗಳನ್ನು ನೀಡಿರುತ್ತಾರೆ.

ಕರ್ನಾಟಕ ಸಂಗೀತ, ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಭಾವೆಯವರು 80 ವರ್ಷಗಳ ಹಿಂದೆ ತಮ್ಮ ತಂದೆ ಸ್ಥಾಪಿಸಿದ ಸರಸ್ವತಿ ಸಂಗೀತ ವಿದ್ಯಾಲಯವನ್ನು ಯಶಸ್ವಿಯಾಗಿ ಮುನ್ನಡೆಸುತ್ತಾ, ಸಾವಿರಾರು ಸಂಗೀತಾಸಕ್ತರಿಗೆ ವಿದ್ಯಾದಾನ ಮಾಡುತ್ತಾ, ಅನೇಕ ಪ್ರತಿಷ್ಠಿತ ಸಂಗೀತಗಾರರನ್ನು ತಯಾರುಗೊಳಿಸಿದ ಖ್ಯಾತಿ ಇವರದು. ಇಡೀ ಬದುಕನ್ನು ಪರಿಪೂರ್ಣವಾಗಿ ಸಂಗೀತಕ್ಕೆ ಮೀಸಲಿಟ್ಟ ಈ ಮಹಾನ್ ಸಾಧಕಿಗೆ ಸರ್ ಎಂ. ವಿಶ್ವೇಶ್ವರಯ್ಯನವರು 'ಉಭಯ ಗಾನ ವಿಶಾರದೆ' ಬಿರುದು ನೀಡಿ ಗೌರವಿಸಿದ್ದು, ಇವರ ಬೃಹತ್ ಸಾಧನೆಗೆ ದಕ್ಕಿದ ಮಾನ್ಯತೆ. 'ಗುಣ ನಿಧಿ', 'ಗಾನ ಕೋಗಿಲೆ', 'ಸುರ ಮಣಿ' ಮುಂತಾದ ಬಿರುದಿನೊಂದಿಗೆ 'ಕರ್ನಾಟಕ ರಾಜ್ಯ ಪ್ರಶಸ್ತಿ', 'ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ', ಗೌರವ ಡಾಕ್ಟರೇಟ್ ಸೇರಿದಂತೆ, ಅಸಂಖ್ಯಾತ ಪ್ರಶಸ್ತಿ, ಪುರಸ್ಕಾರಗಳು ಸಂದಿವೆ. ಇಂತಹ ಮಹಾನ್ ಚೇತನ ದಾವಣಗೆರೆಗೆ ಆಗಮಿಸುತ್ತಿರುವುದು ದಾವಣಗೆರೆಯ ಸಂಗೀತಾಸಕ್ತರ ಸುಯೋಗ. ಬನ್ನಿ ಇವರೊಂದಿಗೆ ಸುಮಾರು 200ಕ್ಕೂ ಹೆಚ್ಚು ಖ್ಯಾತ ಹಿರಿಯ-ಕಿರಿಯ ಗಾಯಕ, ಗಾಯಕಿಯರು, ಹಿರಿಯ ಕವಿಗಳು, ಸಾಹಿತ್ಯ ದಿಗ್ಗಜರು, ಅಂತರ ರಾಷ್ಟ್ರೀಯ ಖ್ಯಾತಿಯ ವಾದ್ಯ ಕಲಾವಿದರು ಭಾಗವಹಿಸುವ ಹಾಡು ಹಬ್ಬದ ಸಂಗೀತ ಸಾಗರದಲ್ಲಿ ಮಿಂದೇಳುವ ಬನ್ನಿ....

**- ಸಾಲಿಗ್ರಾಮ ಗಣೇಶ ಶೆಣೈ**

---




**- ಚಿಕ್ಕೋಳ್ ಈಶ್ವರಪ್ಪ**, ಹಿರೇಕೋಗಲೂರು.

ಚನ್ನಗಿರಿ ತಾಲ್ಲೂಕಿನ ಇತಿಹಾಸ ಪ್ರಸಿದ್ಧವಾದ ಮತ್ತು ಏಷ್ಯಾ ಖಂಡದಲ್ಲೇ ಎರಡನೆಯ ದೊಡ್ಡ ಕೆರೆ ಎಂಬ ಖ್ಯಾತಿ ಪಡೆದ ಹಾಗೂ ಕರ್ನಾಟಕ ರಾಜ್ಯದ ಪ್ರಮುಖ ಪ್ರವಾಸಿ ತಾಣವೆಂದು ಗುರುತಿಸಿಕೊಂಡಿರುವ ಸೂಳೆ ಕೆರೆಯಲ್ಲಿ ಜನವರಿ 29 ರಿಂದ ಫೆಬ್ರವರಿ 9 ರವರೆಗೆ 12 ದಿನಗಳ ಕಾಲ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಯ ಒಟ್ಟು 340 ಡ್ರಾಪ್ ಔಟ್ (7 ಮತ್ತು 8ನೇ ತರಗತಿಯ) ವಿದ್ಯಾರ್ಥಿನಿಯರಿಗೆ ಸಾಹಸ ಮತ್ತು ಪ್ರಕೃತಿ ಅಧ್ಯಯನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ, ರಾಜ್ಯ ಯುವ ಜನ ಸೇವಾ ಕ್ರೀಡಾ ಇಲಾಖೆ ಹಾಗೂ ಸರ್ವ ಶಿಕ್ಷಣದ ಅಭಿಯಾನದಡಿಯಲ್ಲಿ ಈ ಕಾರ್ಯಕ್ರಮ ಆಯೋಜನೆಗೊಂಡಿತ್ತು.

ವಿದ್ಯಾರ್ಥಿನಿಯರಲ್ಲಿ ಸಾಹಸ ಪ್ರವೃತ್ತಿ ಬೆಳೆಸುವುದು, ಒಗ್ಗಟ್ಟು, ಶಿಸ್ತು, ಸಂಯಮ, ಸಮಯ ಪಾಲನೆ, ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ವಿವಿಧ ಸಾಹಸ ಕ್ರೀಡೆಗಳನ್ನು ಪರಿಚಯಿಸುವುದು, ಆತ್ಮಸ್ಥೈರ್ಯದ ಬಗ್ಗೆ ಮಾಹಿತಿ ಮಾಡಿಕೊಡುವುದು ಈ ಶಿಬಿರದ ಮುಖ್ಯ ಗುರಿ ಎಂದು ಶಿಬಿರದ ವ್ಯವಸ್ಥಾಪಕ ಷಬ್ಬೀರ್ ತಿಳಿಸಿದರು.

5 ವರ್ಷಗಳಿಗೂ ಅಧಿಕ ಅನುಭವವುಳ್ಳ 15 ಜನ ಪರಿಣಿತರಿದ್ದಾರೆ. ಕಾರವಾರ ಜಿಲ್ಲೆ ಮುರುಡೇಶ್ವರ, ದಾಂಡೇಲಿ, ಬೆಂಗಳೂರು ಮುಂತಾದ ಕಡೆಗಳಿಂದ ಆಗಮಿಸಿದ್ದಾರೆ, ದಾವಣಗೆರೆ ಜಿಲ್ಲೆ ಕೊಂಡಜ್ಜಿಯಲ್ಲಿ ಈ ತರಬೇತಿ ಕೇಂದ್ರವಿದ್ದು, ಕೊಂಡಜ್ಜಿ ಕೆರೆಯಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಸೂಳೆಕೆರೆಯನ್ನು ತರಬೇತಿಗೆ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಷಬ್ಬೀರ್ ತಿಳಿಸಿದ್ದಾರೆ.

ಆರ್. ಮೃತ್ಯುಂಜಯ ಮತ್ತು ನಿಸರ್ಗ ತಜ್ಞ, ಕಲಾವಿದ ನಾನಾರಾವ್, ತರಬೇತುದಾರರಾದ ಪ್ರಭು, ಸಂಜೀವ್ ಕುಮಾರ್ ಅವರು ಮಕ್ಕಳಿಗೆ ಅಂತರ ರಾಷ್ಟ್ರೀಯ ಗುಣಮಟ್ಟದ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು. ಕೊಂಡಜ್ಜಿ ಜಲ ಸಾಹಸ ಕೇಂದ್ರದಲ್ಲಿ 10 ತಿಂಗಳಲ್ಲಿ ಎಂಟು ನೂರು ಮಕ್ಕಳಿಗೆ ತರಬೇತಿ ನೀಡಲಾಗಿದೆ, ಪ್ರಥಮ 85 ವಿದ್ಯಾರ್ಥಿ ನಿಯರ ತಂಡ ಜ.29 ರಿಂದ 31 ರವರೆಗೆ 2ನೇ 85 ವಿದ್ಯಾರ್ಥಿನಿಯರ ತಂಡ ಫೇ. 1 ರಿಂದ 3, 85 ವಿದ್ಯಾರ್ಥಿನಿಯರ 3ನೇ ತಂಡ ಫೆ.4 ರಿಂದ 6, 4ನೇ 85 ವಿದ್ಯಾರ್ಥಿನಿಯರ ತಂಡ ಫೆ. 7 ರಿಂದ 9 ರವರೆಗೆ, ಪರಿಸರ ಸ್ವಚ್ಛತೆ ಮತ್ತು ಪ್ಲಾಸ್ಟಿಕ್ ನಿಷೇಧದ ಬಗ್ಗೆ ವಿಶೇಷ ತರಬೇತಿ ನೀಡಲಾಗುತ್ತಿದೆ, ಭೂ ಸಾಹಸ, ಜಲ ಸಾಹಸ ಮತ್ತು ವಾಯು ಸಾಹಸ ತರಬೇತಿ ನೀಡಲಾಗುತ್ತಿದೆ. ಮಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಯುವ ಜನೋತ್ಸವದಲ್ಲಿ 6 ಸಾವಿರ ಮಕ್ಕಳಿಗೆ ವಿವಿಧ ಜಲ ಸಾಹಸ, ಭೂ ಸಾಹಸ, ಮತ್ತು ವಾಯು ಸಾಹಸ ತರಬೇತಿ ನೀಡಲಾಗುತ್ತಿದೆ. ಮಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಯುವಜನೋತ್ಸವದಲ್ಲಿ 6 ಸಾವಿರ ಮಕ್ಕಳು ವಿವಿಧ ಜಲ ಸಾಹಸ, ಭೂ ಸಾಹಸ ಮತ್ತು ವಾಯು ಸಾಹಸ ಕ್ರೀಡೆಗಳಲ್ಲಿ ಭಾಗವಹಿಸಿ ಯಶಸ್ವೀ ಪ್ರದರ್ಶನ ನಡೆಸಿಕೊಟ್ಟಿದ್ದಾರೆ. ಕಳೆದ ವರ್ಷ 600 ಮಕ್ಕಳಿಗೆ ತರಬೇತಿ ಕೊಟ್ಟಿದ್ದು ಈ ವರ್ಷ 2800 ಮಕ್ಕಳಿಗೆ ತರಬೇತಿ ನೀಡಲಾಗುವುದೆಂದರು, ಹಿಂದೆ ಇದು ಶ್ರೀಮಂತರ ಕ್ರೀಡೆಯಾಗಿತ್ತು. ಅಕಾಡೆಮಿ ಈಗ ಸಾರ್ವಜನಿಕರಿಗೆ ಮುಕ್ತ ಅವಕಾಶ ಮಾಡಿ ಕೊಟ್ಟಿದೆ.

ಆಡಳಿತಾಧಿಕಾರಿಗಳು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಅಕಾಡೆಮಿ, ರಾಜ್ಯ ಯುವಕೇಂದ್ರ ನೃಪತುಂಗ ರಸ್ತೆ ಬೆಂಗಳೂರು ಇವರಿಗೆ ರೂ. 150ಕ್ಕೆ ಡಿ.ಡಿ. ಕಳಿಸಿ ಕೊಟ್ಟರೆ 5 ದಿನಗಳ ಕಾಲ ಉಚಿತ ತರಬೇತಿ ನೀಡಲಾಗುತ್ತಿದೆ. ಲೈಫ್ ರಿಸ್ಕ್‌ನೊಂದಿಗೆ 11 ಮತ್ತು 21 ದಿನಗಳ ಅಡ್ವಾನ್ಸ್ ತರಬೇತಿ ಶಿಬಿರ, ಓರಿಯಂಟೇಶನ್ ತರಬೇತಿ ಶಿಬಿರ, ಬೇಸಿಕ್ ತರಬೇತಿ ಶಿಬಿರವನ್ನು ಜಲ, ವಾಯು ಮತ್ತು ಭೂ ಸಾಹಸ ತರಬೇತಿ ನೀಡಲಾಗುತ್ತದೆ.

**ವಿದ್ಯಾರ್ಥಿನಿಯರ ಅನಿಸಿಕೆ :** ಜೀವ ರಕ್ಷಕ ಕವಚ ತೊಟ್ಟಿರುವುದರಿಂದ ನಮಗೆ ಯಾವುದೇ ಭಯವಿಲ್ಲ. ನಾವು ನಿರ್ಭಯವಾಗಿ ಕೆರೆಯಲ್ಲಿ ಸಂತೋಷದಿಂದ ಈಜಾಡುತ್ತೇವೆಂದು ಧೈರ್ಯವಾಗಿ ತಿಳಿಸಿದರು.

ಈ ತರಬೇತಿಯು ನಮಗೆ ಬಹಳ ಉಪಯುಕ್ತವಾಗಿದೆ, ಧೈರ್ಯ, ಸಾಹಸ, ಸಮಯ ಪಾಲನೆ, ಶಿಸ್ತು ಮತ್ತು ಒಗ್ಗಟ್ಟು ಪ್ರದರ್ಶಿಸಲು ಸಹಕಾರಿಯಾಗಿದೆ. ನಾವು ಮೊದಲ ದಿನ ನೀರಿಗೆ ಇಳಿಯುವಾಗ ತುಂಬಾ ಭಯವಾಗುತ್ತಿತ್ತು. ಈಗ ನಾವು ಇಬ್ಬರೇ ಹುಟ್ಟು ಹಾಕಿಕೊಂಡು ಕೆರೆಯ ತುಂಬಾ ಅಡ್ಡಾಡಿದರು ಭಯವಾಗುವುದಿಲ್ಲವೆಂದು ತಿಳಿಸಿದ್ದಾರೆ. ನಮಗೆ ಹೋರಾಟದ ಮನೋಭಾವ ಬೆಳೆದಿದೆ. ಅಂಜಿಕೆ ಮತ್ತು ಭಯ ನಮ್ಮಿಂದ ದೂರವಾಗಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

# ವಿವಿಧೆಡೆಯಲ್ಲಿ ಇಂದಿನ ಕಾರ್ಯಕ್ರಮಗಳು

## ದಾವಣಗೆರೆ

**ಶ್ವಾನ ಪ್ರದರ್ಶನ :** ಜಿಲ್ಲಾಡಳಿತ ಹಾಗೂ ದಾವಣಗೆರೆ ಪೆಟ್ ಲವರ್ಸ್ ಅಸೋಸಿಯೇಷನ್ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಉತ್ಸವದ ಅಂಗವಾಗಿ ರಾಜ್ಯ ಮಟ್ಟದ ಶ್ವಾನ ಪ್ರದರ್ಶನ. ಸ್ಥಳ : ಮೋತಿ ವೀರಪ್ಪ ಪದವಿ ಪೂರ್ವ ಕಾಲೇಜು ಮೈದಾನ. ಸಮಯ : ಬೆಳಿಗ್ಗೆ 9ಕ್ಕೆ. ಅಧ್ಯಕ್ಷತೆ : ಎಸ್.ಎ. ರವೀಂದ್ರನಾಥ್. ಮುಖ್ಯ ಅತಿಥಿಗಳು: ಜಿ.ಎಂ. ಸಿದ್ದೇಶ್ವರ, ಡಾ. ಶಾಮನೂರು ಶಿವಶಂಕರಪ್ಪ, ಡಾ. ಎ.ಎಚ್. ಶಿವಯೋಗಿಸ್ವಾಮಿ, ಎಂ.ಪಿ. ರೇಣುಕಾಚಾರ್ಯ, ಎಸ್.ಎಸ್. ಮಲ್ಲಿಕಾರ್ಜುನ್, ಬಸವರಾಜನಾಯ್ಕ, ಎಸ್.ವಿ. ರಾಮಚಂದ್ರ, ಜಿ. ಕರುಣಾಕರ ರೆಡ್ಡಿ, ಬಿ.ಪಿ. ಹರೀಶ್, ಮಾಡಾಳ್ ವಿರೂಪಾಕ್ಷಪ್ಪ, ಎಸ್.ಎಂ. ವೀರೇಶ್ ಹನಗವಾಡಿ, ಟಿ. ಗುರುಸಿದ್ದನಗೌಡ, ಎಚ್.ಎಸ್. ಶಿವಶಂಕರ್, ಎಸ್. ಎಸ್. ಪಟ್ಟಣಶೆಟ್ಟಿ, ಗುತ್ತಿ ಜಂಬುನಾಥ್, ಎಚ್.ಎಸ್. ವೆಂಕಟೇಶ್, ಎಚ್.ಎನ್. ಗುರುನಾಥ್, ಶ್ರೀಮತಿ ರತ್ನಾಬಾಯಿ, ಎಚ್.ಎಸ್. ನಾಗರಾಜ್.

**ಉಪನ್ಯಾಸ :** ಶ್ರೀ ಕೃಷ್ಣ ಥಿಯಸಾಫಿಕಲ್ ಸೊಸೈಟಿ ವತಿಯಿಂದ ಉಪನ್ಯಾಸ ಕಾರ್ಯಕ್ರಮ. ಸ್ಥಳ : ಶ್ರೀ ಕೃಷ್ಣ ಥಿಯಸಾಫಿಕಲ್ ಲಾಡ್ಜ್ ಕಟ್ಟಡ. ಸಮಯ : ಸಂಜೆ 5 ಗಂಟೆಗೆ. ಉಪನ್ಯಾಸಕರು : ವಿಜಯ ದೇವೇಂದ್ರಪ್ಪ. ವಿಷಯ : ಅರಿವು.

**ಶಾಲಾ ವಾರ್ಷಿಕೋತ್ಸವ :** ಕೆಎಸ್ಎಸ್ ಫೌಂಡೇಶನ್‌ನ ಆಂಗ್ಲ ಮಾಧ್ಯಮ ವಸತಿಯುತ ಪ್ರೌಢಶಾಲೆಯ ವಾರ್ಷಿಕೋತ್ಸವ. ಸ್ಥಳ : ಶಾಲಾ ಆವರಣ. ಸಮಯ : ಸಂಜೆ 5 ಗಂಟೆಗೆ. ಉದ್ಘಾಟನೆ : ಡಾ. ಶಾಮನೂರು ಶಿವಶಂಕರಪ್ಪ. ಅಧ್ಯಕ್ಷತೆ : ಎಚ್.ಕೆ. ಬಸವರಾಜ್. ಮುಖ್ಯ ಅತಿಥಿಗಳು : ಡಾ. ಎಂ. ಮಹಾದೇವ, ಪ್ರೊ|| ಇಂದುಮತಿ, ವೆಂಕಟರಾಮ್, ಮಹಿಮಾ ಪಟೇಲ್, ಆರ್.ಎಸ್. ಶೇಖರಪ್ಪ, ಪಿ.ಎಸ್. ಜಯಣ್ಣ, ಅಬ್ದುಲ್ ಜಬ್ಬಾರ್, ಎಂ.ಪಿ. ರವೀಂದ್ರ, ಬಿ.ಎ. ರಾಜಶೇಖರ್. ವಿಶೇಷ ಆಹ್ವಾನಿತರು : ಸಿ.ಎಚ್. ಹಿರೇಗೌಡರ್, ಶ್ರೀಮತಿ ಹೇಮಾ ಹಿರೇಗೌಡರ್.

**ಸಂಸ್ಕೃತ ತರಗತಿ :** ಶ್ರೀ ಮಾಧ್ವ ಯುವಕ ಸಂಘ ಮತ್ತು ಅಖಿಲ ಭಾರತ ಮಾಧ್ವ ಮಹಾ ಪರಿಷತ್ ಇವರುಗಳ ಸಂಯುಕ್ತಾಶ್ರಯದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಎರಡನೇ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತ ಸಂಸ್ಕೃತ ಭಾಷಾ ಕಲಿಕೆ, ವ್ಯಾಕರಣ ತರಗತಿಗಳು. ಸ್ಥಳ : ಸರ್ವಜ್ಞಾಚಾರ್ಯ ಸೇವಾ ಸಂಘ. ಸಮಯ : ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನ 3 ಗಂಟೆಗೆ, ಎರಡನೇ ಪಿಯುಸಿ ವಿದ್ಯಾರ್ಥಿಗಳಿಗೆ ಸಂಜೆ 5 ಗಂಟೆಗೆ.

**ಸಂಭ್ರಮ 2012 :** ಸಿದ್ಧಗಂಗಾ ವಿದ್ಯಾ ಸಂಸ್ಥೆ ವತಿಯಿಂದ ಜಿಲ್ಲಾ ಉತ್ಸವದ ಸವಿ ನೆನಪಿಗಾಗಿ 'ಸಂಭ್ರಮ 2012' ವಾರ್ಷಿಕ ಶೈಕ್ಷಣಿಕ ಪ್ರವಾಸದ ಸಿ.ಡಿ. ಬಿಡುಗಡೆ ಕಾರ್ಯಕ್ರಮ. ಸ್ಥಳ : ತ್ರಿಶೂಲ್ ಚಿತ್ರ ಮಂದಿರ. ಸಮಯ: ಬೆಳಿಗ್ಗೆ 8 ಗಂಟೆಗೆ. ಅಧ್ಯಕ್ಷತೆ : ಎಂ.ಎಸ್. ಶಿವಣ್ಣ. ಸಿ.ಡಿ. ಬಿಡುಗಡೆ : ಎಂ.ಎಸ್. ವಿಕಾಸ್.

**ಶಾಲಾ ವಾರ್ಷಿಕೋತ್ಸವ :** ಸರ್ ಮಿರ್ಜಾ ಇಸ್ಮಾಯಿಲ್ ಕಾನ್ವೆಂಟ್‌ನ ವಾರ್ಷಿಕೋತ್ಸವ ಸಮಾರಂಭ. ಸ್ಥಳ : ಶಾಲಾ ಆವರಣ. ಸಮಯ : ಸಂಜೆ 4 ಗಂಟೆಗೆ. ಅಧ್ಯಕ್ಷತೆ : ಕೆ. ಸಮೀವುಲ್ಲಾ. ಉದ್ಘಾಟನೆ : ಡಾ. ಶಾಮನೂರು ಶಿವಶಂಕರಪ್ಪ. ಸಮಾರಂಭದ ಅಧ್ಯಕ್ಷರು : ಅಯೂಬ್ ಪೈಲ್ವಾನ್. ಮುಖ್ಯ ಅತಿಥಿಗಳು : ಡಿ.ಬಿ. ಹುಸೇನ್ ಪೀರ್‌ಸಾಬ್, ಎ.ಆರ್. ಅಯಾಜ್ ಹುಸೇನ್, ಸಾಧಿಕ್ ಪೈಲ್ವಾನ್, ಅಮಾನ್ ವುಲ್ಲಾ, ಎನ್.ಕೆ. ಇಸ್ಮಾಯಿಲ್ ಸಾಬ್, ಎಸ್.ಬಿ. ಶುಕುರ್ ಸಾಬ್, ಬಾಟ್ಲಿ ಶೇಖ್ ಅಹ್ಮದ್, ಹಮೀದ್ ಸಾಬ್, ಶ್ರೀಮತಿ ನೂರ್ ಜಾನ್ ಬೀ. ನಂತರ ಸಾಂಸ್ಕೃತಿಕ ಕಾರ್ಯಕ್ರಮ.

## ಆವರಗೊಳ್ಳ (ದಾವಣಗೆರೆ ತಾಲ್ಲೂಕು)

**ಗಜಾರೋಹಣ ಉತ್ಸವ :** ಶ್ರೀ ವೀರಭದ್ರೇಶ್ವರ ಮಹಾಸ್ವಾಮಿಯ ರಥೋತ್ಸವದ ಕಾರ್ಯಕ್ರಮದಲ್ಲಿ ಇಂದು ದೊಡ್ಡಬಾತಿ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ಮತ್ತು ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಆಗಮನ, ಶ್ರೀ ವೀರಭದ್ರ ಸ್ವಾಮಿಗೆ ಪುರವರ್ಗ ಮಠಸ್ಥರಿಂದ ಹರಿದ್ರಾ ಲೇಪನ, ತೇರು ಮನೆ ಚೌಡೇಶ್ವರಿಗೆ ಉಡಿ ತುಂಬುವುದು ನಂತರ ಗಜಾರೋಹಣ ಉತ್ಸವ.

## ಬಸಾಪುರ (ದಾವಣಗೆರೆ ತಾಲ್ಲೂಕು)

**ಸಮಾರೋಪ :** ಧ.ರಾ.ಮ. ವಿಜ್ಞಾನ ಕಾಲೇಜು (ದಾವಣಗೆರೆ) ಮತ್ತು ಬಸಾಪುರ ಗ್ರಾಮಸ್ಥರ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೇವಾ ಘಟಕದ ಶಿಬಿರದ ಸಮಾರೋಪ ಸಮಾರಂಭ. ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣ. ಸಮಯ : ಮಧ್ಯಾಹ್ನ 1 ಗಂಟೆಗೆ. ಅಧ್ಯಕ್ಷತೆ : ಮೇಜರ್ ಎನ್. ಶ್ರೀನಿವಾಸ್. ಸಮಾರೋಪ ಭಾಷಣ : ಬಾ.ಮ. ಬಸವರಾಜಯ್ಯ. ಮುಖ್ಯ ಅತಿಥಿಗಳು : ಡಾ. ಜೆ.ಬಿ. ರಾಜ್, ಕೆ.ಎಸ್. ಈಶ್ವರಪ್ಪ, ವಿ. ರೇಣುಕಾ ಪ್ರಸಾದ್, ಡಾ. ವಸಂತ ನಾಯಕ್, ಡಿ. ರಮೇಶ್, ಎಚ್.ಎಂ. ಬಸವರಾಜಪ್ಪ, ಜಿ.ಎಸ್. ಲೋಕೇಶ್ವರಪ್ಪ, ಎಸ್. ಸುರೇಂದ್ರಪ್ಪ, ಬಿ.ಎ. ಬಸವರಾಜಪ್ಪ, ಕೆ.ಎಸ್. ಮರುಳಪ್ಪ, ಕೆ.ಬಿ. ಲಿಂಗರಾಜು, ಬಿ.ಎ. ವೀರಭದ್ರಪ್ಪ.

## ಹುಚ್ಚವ್ವನಹಳ್ಳಿ (ದಾವಣಗೆರೆ ತಾಲ್ಲೂಕು)

**ಉಪನ್ಯಾಸ :** ಶ್ರೀ ಬಸವೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಮಾಯಕೊಂಡ) ಹಾಗೂ ಹುಚ್ಚವ್ವನಹಳ್ಳಿ ಗ್ರಾಮಸ್ಥರ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಉಪನ್ಯಾಸ. ಸಮಯ : ಸಂಜೆ 5.30 ಕ್ಕೆ. ಅಧ್ಯಕ್ಷತೆ : ಪಿ.ಕೆ. ರಾಜೇಂದ್ರಪ್ಪ. ಉಪನ್ಯಾಸ : ಡಾ. ಟಿ. ಮಂಜಣ್ಣ, ಕೆ. ಉಮೇಶ್, ಶ್ರೀಮತಿ ಎ.ಎಸ್. ಶೈಲಜಾ. ಮುಖ್ಯ ಅತಿಥಿಗಳು : ವೀರೇಶ್, ಶ್ರೀಮತಿ ವಿಮಲಮ್ಮ, ಶ್ರೀಮತಿ ಸಾವಿತ್ರಮ್ಮ ನಾಗರಾಜ್, ಶ್ರೀಮತಿ ಮಮತಾ ಸುರೇಶ್, ಲೋಕೇಶ್ವರಪ್ಪ, ಕೆ.ಎಸ್. ಪರಮೇಶ್ವರಪ್ಪ, ಬಾಲಪ್ಪರ ಗಂಗಪ್ಪ, ಎನ್. ನಾರಪ್ಪ, ನಾಗರಾಜಪ್ಪ, ಎಂ.ವೈ. ನವೀನ್‌ಕುಮಾರ್, ಎಚ್. ಚಂದ್ರಶೇಖರಪ್ಪ, ಕು|| ಎಸ್. ಎನ್. ನೀಲಾಂಬಿಕೆ, ವಿ. ಮಂಜಪ್ಪ.

## ಕಿತ್ತೂರು (ದಾವಣಗೆರೆ ತಾಲ್ಲೂಕು)

**ಕಾರ್ಣೀಕೋತ್ಸವ :** ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿ ಕಾರ್ಣೀಕೋತ್ಸವ. ಸಮಯ : ಸಂಜೆ.

## ಕಮಲಾಪುರ (ಹರಿಹರ ತಾಲ್ಲೂಕು)

**ಎನ್ನೆಸ್ಸೆಸ್ ಶಿಬಿರದಲ್ಲಿ ಉಪನ್ಯಾಸ :** ಶ್ರೀ ಬೀರಲಿಂಗೇಶ್ವರ ಪ್ರಥಮ ದರ್ಜೆ ಮಹಾವಿದ್ಯಾಲಯ (ಮಲೇಬೆನ್ನೂರು) ಇವರ ಆಶ್ರಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಉಪನ್ಯಾಸ ಕಾರ್ಯಕ್ರಮ. ಸ್ಥಳ : ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣ. ಸಮಯ : ಸಂಜೆ 6 ಗಂಟೆಗೆ. ಅಧ್ಯಕ್ಷತೆ : ಬಿ. ಷಣ್ಮುಖಪ್ಪ. ಉಪನ್ಯಾಸಕರು : ಬಿ.ಎಚ್. ಬೀರೇಶ್, ರಾಜಶೇಖರ್, ಎಸ್. ಹನುಮಗೌಡ, ಎಚ್. ಶಂಭುಲಿಂಗಪ್ಪ, ಎಂ. ಕಾಂತರಾಜ್. ಮುಖ್ಯ ಅತಿಥಿಗಳು : ಪಿ. ಹಾಲಸಿದ್ದಪ್ಪ, ಪಿ. ಹಾಲಪ್ಪ, ಪಿ.ಎಸ್. ಹನುಮಂತಪ್ಪ, ಶ್ರೀಮತಿ ಕೆ. ಶಾರದಮ್ಮ ಕಡ್ಲೆಗೊಂದಿ ಪಕ್ಕೀರಪ್ಪ, ಶ್ರೀಮತಿ ರತ್ನಮ್ಮ ಡಿ.ಕೆ. ಸಿದ್ದನಗೌಡ, ಬಸಪ್ಪನವರ ಪರಮೇಶ್ವರಪ್ಪ, ಮುದುಕಪ್ಪನವರ ಈಶ್ವರಪ್ಪ, ಬಿ. ಕೊಟ್ರಪ್ಪ, ಕೆ. ಕೊಟ್ರಪ್ಪ ಕಡೇಮನಿ ರಾಮಪ್ಪ, ಮೂಲಿಮನಿ ಮಲ್ಲಪ್ಪ, ಎಂ. ಹಾಲೇಶ್, ಎನ್.ಪಿ. ರುದ್ರಪ್ಪ, ದೊಗ್ಗಳ್ಳಿ ಈರಪ್ಪ, ಕ್ಯಾರಕಟ್ಟಿ ಅಡಿವೆಪ್ಪ, ಹುಲ್ಲುಮನಿ ರಾಮಪ್ಪ, ಕ್ಯಾರಕಟ್ಟಿ ಪಕ್ಕೀರಪ್ಪ, ಬಾವಿಕಟ್ಟಿ ಕುರುವತ್ಯಪ್ಪ.

## ಕದರಮಂಡಲಗಿ (ಬ್ಯಾಡಗಿ ತಾಲ್ಲೂಕು)

**ಮಹಾ ರಥೋತ್ಸವ:** ಶ್ರೀ ಆಂಜನೇಯ (ಕಾಂತೇಶ) ಸ್ವಾಮಿಯ ಮಹಾ ರಥೋತ್ಸವವು ಇಂದು ನಡೆಯಲಿದೆ.

## ಚಿತ್ರದುರ್ಗ

**ಕ್ಯಾನ್ಸರ್ ಜಾಗೃತಿ ನಡಿಗೆ, ಉಚಿತ ತಪಾಸಣೆ :** ನಿರ್ವಾಣ ಡಯಾಗ್ನೋಸ್ಟಿಕ್ ಸೆಂಟರ್ ವತಿಯಿಂದ ನಿರ್ವಾಣ ಕ್ಯಾನ್ಸರ್ ಜಾಗೃತಿ ನಡಿಗೆ, ವರ್ಷಾಚರಣೆ ಮತ್ತು ಉಚಿತ ತಪಾಸಣೆ. ಸಮಯ : ಬೆಳಿಗ್ಗೆ 8.30 ಕ್ಕೆ ಕ್ಯಾನ್ಸರ್ ಜಾಗೃತಿ ನಡಿಗೆ. ಸ್ಥಳ : ಮದಕರಿ ವೃತ್ತದಿಂದ ನಿರ್ವಾಣ ಡಯಾಗ್ನೋಸ್ಟಿಕ್ ಸೆಂಟರ್ ವರೆಗೆ. ಬೆಳಿಗ್ಗೆ 11 ಗಂಟೆಗೆ ಕ್ಯಾನ್ಸರ್ ತಜ್ಞವೈದ್ಯರಿಂದ ಮಾಹಿತಿ, ಶಿಕ್ಷಣ ಮತ್ತು ಉಚಿತ ತಪಾಸಣೆ. ಸ್ಥಳ : ನಿರ್ವಾಣ ಡಯಾಗ್ನೋಸ್ಟಿಕ್ ಸೆಂಟರ್. ಮುಖ್ಯ ಅತಿಥಿ ಮತ್ತು ಉದ್ಘಾಟನೆ : ಶ್ರೀ ಶಿವಲಿಂಗಾನಂದ ಸ್ವಾಮೀಜಿ (ಚಿತ್ರದುರ್ಗ).

## ಈಚಘಟ್ಟ (ಹೊಳಲ್ಕೆರೆ ತಾಲ್ಲೂಕು)

**ಕುಂಚಿಟಿಗರ ಸಮಾವೇಶ :** 23ನೇ ವಿಜಯರಾಯ ಸಂಗಮೇಶ್ವರ ಜಯಂತಿ, ಕುಂಚಿಟಿಗರ ಸಮಾವೇಶ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಅಭಿನಂದನಾ ಸಮಾರಂಭ. ಸಾನಿಧ್ಯ : ಶ್ರೀ ಹನುಮಂತ ಮಹಾಸ್ವಾಮೀಜಿ (ಎಲೆ ರಾಂಪುರ). ಉದ್ಘಾಟನೆ : ಟಿ.ಬಿ. ಜಯಚಂದ್ರ. ಅಧ್ಯಕ್ಷತೆ: ಪಿ. ರಮೇಶ್. ಮುಖ್ಯ ಅತಿಥಿಗಳು : ರೇಣುಕಾಚಾರ್ಯ, ಆನಂದ್ ಆಸ್ನೋಟಿಕರ್, ಶೋಭ ಕರಂದ್ಲಾಜೆ, ಜನಾರ್ದನಸ್ವಾಮಿ, ಜಿ.ಎಂ. ಸಿದ್ದೇಶ್ವರ, ಎಸ್.ಕೆ. ಬಸವರಾಜನ್, ಜಿ.ಎಚ್. ತಿಪ್ಪಾರೆಡ್ಡಿ, ಎಂ. ಚಂದ್ರಪ್ಪ.

---

## ಜಿಲ್ಲಾ ಉತ್ಸವ : ಅಭಿವೃದ್ಧಿ ದರ್ಶನ ಉದ್ಘಾಟನೆ

ದಾವಣಗೆರೆ, ಫೆ.11- ಜಿಲ್ಲಾ ಉತ್ಸವದ ಅಂಗವಾಗಿ ಏರ್ಪಡಿಸಲಾಗಿರುವ ಜಿಲ್ಲಾ ಮಟ್ಟದ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳದಲ್ಲಿ ರಾಜ್ಯ ವಾರ್ತಾ ಇಲಾಖೆ ವತಿಯಿಂದ ಸರ್ಕಾರದ ವಿವಿಧ ಯೋಜನೆಗಳನ್ನು ಹಾಗೂ ಪ್ರಗತಿ ಕುರಿತ ಅಭಿವೃದ್ಧಿ ದರ್ಶನ ವಸ್ತು ಪ್ರದರ್ಶನ ಏರ್ಪಡಿಸಲಾಗಿರುತ್ತದೆ.

ಈ ವಸ್ತು ಪ್ರದರ್ಶನವನ್ನು ಮಹಾನಗರ ಪಾಲಿಕೆ ಮಹಾಪೌರರಾದ ಹೆಚ್. ಎನ್. ಗುರುನಾಥ್ ಉದ್ಘಾಟಿಸಿ, ನಂತರ ವಿವಿಧ ಇಲಾಖೆಗಳಡಿ ಕೈಗೊಂಡಿರುವ ಯೋಜನೆಗಳ ಪ್ರಗತಿ ಚಿತ್ರಣವನ್ನು ವೀಕ್ಷಿಸಿದರು. ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ವೀರೇಶ್ ಹನಗವಾಡಿ, ಜಿಲ್ಲಾಧಿಕಾರಿಗಳಾದ ಎಸ್.ಎಸ್. ಪಟ್ಟಣಶೆಟ್ಟಿಯವರು, ಗಣ್ಯರು ಹಾಗೂ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು. ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಎಸ್. ಮಹೇಶ್ವರಯ್ಯ, ಸಹಾಯಕ ನಿರ್ದೇಶಕರಾದ ರವಿರಾಜ್. ಹೆಚ್.ಜಿ, ವಾರ್ತಾ ಸಹಾಯಕರಾದ ಹರೀಶ್ ಟಿ.ಕೆ. ವಾರ್ತಾ ಇಲಾಖೆಯ ಸಿಬ್ಬಂದಿಗಳಾದ ನಾಗರಾಜ್, ಗಂಗಾಧರ್, ಚನ್ನಕೇಶವ, ಬಸವರಾಜಪ್ಪ ಹಾಗೂ ಇತರರು ಭಾಗವಹಿಸಿದ್ದರು.

## ಚಟ್ನಹಳ್ಳಿಯಲ್ಲಿ ಇಂದು ಮುಷ್ಟೂರೇಶ್ವರ ರಥೋತ್ಸವ

ಹರಪನಹಳ್ಳಿ ತಾಲ್ಲೂಕಿನ ಚಟ್ನಹಳ್ಳಿ ಗ್ರಾಮದ ಶ್ರೀ ಮುಷ್ಟೂರೇಶ್ವರ ಸ್ವಾಮಿ ರಥೋತ್ಸವವು ಇಂದು ಸಂಜೆ 5.30 ಕ್ಕೆ ನಡೆಯಲಿದೆ. ರಾತ್ರಿ ನಾಟಕ ಏರ್ಪಡಿಸಲಾಗಿದೆ. ದಿನಾಂಕ 14 ರ ಮಂಗಳವಾರ ಬೆಳಿಗ್ಗೆ 9.30 ಕ್ಕೆ ಓಕುಳಿ ಇರುವುದು ಎಂದು ದೇವಸ್ಥಾನ ಕಮಿಟಿಯವರು ತಿಳಿಸಿದ್ದಾರೆ.

## ನೀರು ಶುದ್ಧೀಕರಣ ಘಟಕಕ್ಕೆ ಚಾಲನೆ

ಭರಮಸಾಗರ,ಫೆ.11- ಸ್ಥಳೀಯ ಗ್ರಾಮ ಪಂಚಾಯ್ತಿ ಬಳಿಯ ಅಂಬೇಡ್ಕರ್ ಭವನದ ಪಕ್ಕದಲ್ಲಿ ನೀರು ಶುದ್ಧೀಕರಣ ಘಟಕ ಸ್ಥಾಪನೆ ಕಾರ್ಯಕ್ಕೆ ಗ್ರಾ.ಪಂ. ಅಧ್ಯಕ್ಷ ಓ. ತಿಪ್ಪೇಶ್ ಗುದ್ದಲಿ ಪೂಜೆ ನೆರವೇರಿಸಿದರು.

ಅನೇಕ ವರ್ಷಗಳಿಂದ ಗ್ರಾಮದಲ್ಲಿ ಜನರು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಸಂಬಂಧ ಅನೇಕ ಬಾರಿ ಸಾರ್ವಜನಿಕರು ಗ್ರಾ.ಪಂ.ಗೆ ಮನವಿ ಮಾಡಿದ್ದಾರೆ. ಇದೀಗ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ವಿಶ್ವ ಸಂಸ್ಥೆಯಿಂದ 25 ಲಕ್ಷ ಅನುದಾನ ದೊರಕಲಿದ್ದು, ಅದನ್ನು ಈ ಒಂದು ಒಳ್ಳೆಯ ಕೆಲಸಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಸದಸ್ಯ ನರಗನಹಳ್ಳಿ ಎನ್.ಕೆ. ಜಗದೀಶ್, ರಾಜು, ಸೌಭಾಗ್ಯಮ್ಮ, ರವೀಂದ್ರ, ಲಾಲಾ ನಾಯ್ಕ, ಗೊಲ್ಲರಹಟ್ಟಿ ಜಿತ್ತೆಪ್ಪ, ನಾಗರಾಜ್, ಮಂಜಣ್ಣ, ಜಾಕೀರ್ ಹುಸೇನ್, ಸೈಯದ್, ಗ್ರಾ.ಪಂ. ಬಿಲ್ ಕಲೆಕ್ಟರ್ ಸಿ. ಶೇಷಗಿರಿರಾವ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಹೊನ್ನಾಳಿ : ಬಿಎಸ್ಪಿ ಅಧ್ಯಕ್ಷರಾಗಿ ಷಡಾಕ್ಷರಿ



ಹೊನ್ನಾಳಿ, ಫೆ. 11- ತಾಲ್ಲೂಕು ಬಹುಜನ ಸಮಾಜ ಪಾರ್ಟಿಯ ನೂತನ ಅಧ್ಯಕ್ಷರಾಗಿ ಬಿದರಗಡ್ಡೆ ಡಿ.ಬಿ. ಷಡಾಕ್ಷರಿ ಆಯ್ಕೆಯಾಗಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರಾಷ್ಟ್ರೀಯ ಪಕ್ಷವಾಗಿರುವ ಬಹುಜನ ಸಮಾಜ ಪಾರ್ಟಿಯ ಸಂವಿಧಾನ ರಚನೆಯಾದ ದಿನದಿಂದಲೂ ನಮ್ಮ ಚಿತ್ತ ಸಾಮಾನ್ಯ ಜನರತ್ತ ಎಂದು ಸಂಘಟನೆ ಹೇಳುತ್ತಿದ್ದು, ಪಕ್ಷವನ್ನು ತಾಲ್ಲೂಕಿನಲ್ಲಿ ಹೆಚ್ಚು ಬಲವರ್ಧನೆಗೊಳಿಸುವುದಾಗಿ ವಿವರಿಸಿದರು. ಪಕ್ಷದ ಜಿಲ್ಲಾ ಉಪಾಧ್ಯಕ್ಷ ಕೃಷ್ಣಪ್ಪ ಕುಂಕೋವ, ಜಿಲ್ಲಾ ಸಂಯೋಜಕ ವೀರಭದ್ರಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಚಿತ್ರದರ್ಶಿನಿ

| ದಾವಣಗೆರೆ | ದಿನ 3 ಆಟ | ಬೆಳಗಿನ ಆಟ |
|---|---|---|
| ಅರುಣ (ಡಾಲ್ಬಿ ಡಿಟಿಎಸ್) | ಏಕ್ ಮೈ ಔರ್ ಏಕ್ ತು (ಹಿ) | 4 ಪ್ರದರ್ಶನಗಳು |
| ಅಶೋಕ (ಡಿಟಿಎಸ್) | ಜರ್ನಿ-2 (ಹಿಂ) | 4 ಪ್ರದರ್ಶನಗಳು |
| ಗೀತಾಂಜಲಿ (ಡಿಟಿಎಸ್) | ಪಾರಿಜಾತ (ಕ) | 4 ಪ್ರದರ್ಶನಗಳು |
| ಪುಷ್ಪಾಂಜಲಿ (ಡಿಟಿಎಸ್) | ಚಿಂಗಾರಿ (ಕ) | 4 ಪ್ರದರ್ಶನಗಳು |
| ಪದ್ಮಾಂಜಲಿ (ಡಿಟಿಎಸ್) | ವಿಷ್ಣುವರ್ಧನ್ (ಕ) | 4 ಪ್ರದರ್ಶನಗಳು |
| ತ್ರಿಶೂಲ್ (ಡಿಟಿಎಸ್) | ಆರಕ್ಷಕ (ಕ) | 4 ಪ್ರದರ್ಶನಗಳು |
| ತ್ರಿನೇತ್ರ (ಡಿಟಿಎಸ್) | ಕೋ-ಕೋ (ಕ) | 4 ಪ್ರದರ್ಶನಗಳು |
| ವಸಂತ (ಡಿಟಿಎಸ್) | ರಾಜ್ (ತೆ) | 4 ಪ್ರದರ್ಶನಗಳು |
| ಮೋತಿ (ಡಿಟಿಎಸ್) | ಏಕೆ-56 (ಕ) | 4ಪ್ರದರ್ಶನಗಳು |
| ಚಾಮುಂಡೇಶ್ವರಿ | ಜಾನಿ (ಕ) | 4 ಪ್ರದರ್ಶನಗಳು |
| **ಹರಿಹರ** | | |
| ಜಯಶ್ರೀ (ಡಿಟಿಎಸ್) | ಆರಕ್ಷಕ (ಕ) | 4 ಪ್ರದರ್ಶನಗಳು |
| ಶ್ರೀಕಾಂತ್ | ಹೊಡಿಮಗ (ಕ) | 4 ಪ್ರದರ್ಶನಗಳು |


**ಇಂಗ್ಲೀಷ್ ಓದ್ಲಿಕ್ಕೆ ಬರಿಲಿಕ್ಕೆ ಕಷ್ಟನಾ 15 ದಿನದಲ್ಲಿ ಸುಲಭ ಮಾಡಿಕೊಡುತ್ತೇವೆ**
ಮಿರಜ್‌ಕರ್ ಟ್ಯುಟೋರಿಯಲ್
ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.
ಮೊಬೈಲ್ : 91416-25372

**ನಾಯಿ ಕಳೆದಿದೆ**
ದಿನಾಂಕ 10.02.2012ರ ಸಂಜೆ 5ಕ್ಕೆ ವಿನಾಯಕ ಬಡಾವಣೆಯ 4ನೇ ಕ್ರಾಸ್ ಮನೆಯಿಂದ ಬಿಳಿ ನಾಯಿ (ಪೊಮೇರಿಯನ್ ಡಾಗ್) ಕಳೆದಿರುತ್ತದೆ. ಯಾರಿಗಾದರೂ ಕಂಡಲ್ಲಿ ತಿಳಿಸಿದರೆ ಸೂಕ್ತ ಬಹುಮಾನ ನೀಡಲಾಗುವುದು.
ಬಿ.ಡಿ. ಪ್ರಭುಲಿಂಗಾಚಾರ್
98806-19508, 98446-67238

**ಶ್ರೀ ವೆಂಕಟೇಶ್ವರ ಜ್ಯೂಯಲರಿ ಮಾರ್ಟ್**
ಅಕ್ಷತಾ ರೀಫೈನ್ಡ್ ಎಣ್ಣೆ ಅಂಗಡಿ ಎದುರು, ಚೌಕಿಪೇಟೆ, ದಾವಣಗೆರೆ-1.
ದೂರವಾಣಿ : 254039, 225089.
ಈ ಯೋಜನೆಯ ಹೊಸ ಗ್ರೂಪ್ ಪ್ರಾರಂಭಿಸಲಾಗಿದೆ. ದಿನಾಂಕ 15.02.2012ರಂದು ಪ್ರಥಮ ಡ್ರಾ ನಡೆಯಲಿದೆ. ಕೆಲವೇ ಸದಸ್ಯತ್ವಗಳು ಉಳಿದಿದ್ದು, ತತ್‌ಕ್ಷಣ ಸಂಪರ್ಕಿಸಿ :

**Video ತಂತ್ರಜ್ಞಾನ ಬಳಸಿ Fluent ಆಗಿ ಇಂಗ್ಲೀಷ್‌ನಲ್ಲಿ ಮಾತನಾಡಿ**
15 ದಿನದಲ್ಲಿ ಅತ್ಯುತ್ತಮ ಫಲಿತಾಂಶ ಅಥವಾ ಹಣ ವಾಪಸ್
(VCD, Notes Free)
ಮಿರಜ್‌ಕರ್ ಟ್ಯುಟೋರಿಯಲ್
ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.
ಮೊಬೈಲ್ : 91416-25372

**ಋಣಾನುಬಂಧ**
ವಧು-ವರರ ಮಾಹಿತಿ ಕೇಂದ್ರ (ಲಿಂಗಾಯತರಲ್ಲಿ ಮಾತ್ರ)
ಸೈಟು, ಮನೆ, ಜಮೀನು ಮಾರಾಟಕ್ಕೆ, ಕೊಳ್ಳುವುದಕ್ಕೆ, ಬಾಡಿಗೆಗೆ, ಲೀಸ್‌ಗೆ ವಿಚಾರಿಸಿ :
ಕಿರಣ್ ಬೂಸ್ನೂರ್ : 98440-63409

**ಜೆನ್ ಕಾರ್ ಮಾರಾಟಕ್ಕೆ**
ಜೆನ್ ಕಾರ್ VXI, ಹಸಿರು ಕಲರ್, 2001 ಮಾಡಲ್, ಫುಲ್ಲೀ ಲೋಡೆಡ್
98444-41693

**ಮನೆ ಲೀಸ್‌ಗೆ ಇದೆ**
ಎಂ.ಸಿ.ಸಿ. 'ಎ' ಬ್ಲಾಕ್, 12ನೇ ಮುಖ್ಯ ರಸ್ತೆಯಲ್ಲಿ ಬಕ್ಕೇಶ್ವರ ಬಾಲಿಕಾ ಪ್ರೌಢಶಾಲೆ ಹತ್ತಿರ, ನೆಲ ಮಹಡಿಯಲ್ಲಿ 2 ಬೆಡ್ ರೂಂ, ಕಾರ್ ಪಾರ್ಕಿಂಗ್ ಮತ್ತು ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ವ್ಯವಸ್ಥೆ ಇರುವ ಮನೆ ಲೀಸ್‌ಗೆ ಇರುತ್ತದೆ. ಆಸಕ್ತರು ಸಂಪರ್ಕಿಸಿ.
08192-225181, 94817-20733

**ಉಚಿತ ಕಂಪ್ಯೂಟರ್ ತರಬೇತಿ**
(ಷರತ್ತುಗಳು ಅನ್ವಯ)
ಇಂದೇ ಅರ್ಜಿ ಸಲ್ಲಿಸಿರಿ.
ಕ್ಲಾಸಿಕ್ ಕಂಪ್ಯೂಟರ್ಸ್
ಮೊ: 99022-38427

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
98442-94446

**ಭದ್ರಾವತಿ ಕಾರ್ಖಾನೆಯಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ**
ವೇತನ : ರೂ. 4100-00, ದಿನಕ್ಕೆ 8 ಗಂಟೆ ಕೆಲಸ. ಉಚಿತ ವಸತಿ, ಸಬ್ಸಿಡಿ ಊಟ, ಇ. ಎಸ್.ಐ., ಪಿ.ಎಫ್. ವಾರ್ಷಿಕ ಬೋನಸ್, ವಯೋಮಿತಿ, 30 ರಿಂದ 40 ವರ್ಷ. ಎತ್ತರ 5.5 ಅಡಿ, 10ನೇ ತರಗತಿ ಪಾಸ್/ಫೇಲ್. ಸಂಪರ್ಕಿಸಿ :
96324-73360, 94481-33319
92422-97357, 89041-99451

**ನಿವೇಶನ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಪೂರ್ವಕ್ಕೆ ಮುಖವಾಗಿರುವ ನಿವೇಶನ ಮಾರಾಟಕ್ಕೆ ಇದೆ. ಸಂಪರ್ಕಿಸಿ :
99646-26898

**WANTED**
Office located at Davangere needs Accounts officer B.Com Candidate with Computer Knowledge, Experience in VAT & Audit
Mob: 99728-25666

**ಮನೆ ಲೀಸ್‌ಗೆ ಇದೆ**
ವಿನೋಬನಗರ, 4ನೇ ಮೇನ್, 4ನೇ ಕ್ರಾಸ್ ರಿಂಗ್ ರೋಡಿಗೆ ಹತ್ತಿರವಿರುವ 3 ಬೆಡ್ ರೂಂ, 2 ಹಾಲ್ ಉತ್ತರ ದಿಕ್ಕಿಗಿರುವ ಮನೆ ಲೀಸ್‌ಗೆ ಇದೆ.
98801-14530

**ಬೇಕಾಗಿದ್ದಾರೆ**
CMIE ಕಂಪನಿಗೆ ಕುಟುಂಬ ಸಮೀಕ್ಷೆ (Field Work) ಮಾಡಲು ವಿದ್ಯಾವಂತ ಯುವಕ - ಯುವತಿಯರು ಬೇಕಾಗಿದ್ದಾರೆ. ಇಂದೇ ಸಂಪರ್ಕಿಸಿ :
80507-61826, 91416-85903

**REQUIRED**
Accounts-1
B.Com Graduate/Female Marketing Executive-4
Vishwas Hi-tech Diagnostics Centre
Mob : 97392-00965

**ಬಾಡಿಗೆಗೆ ಇದೆ**
At MCC 'B' Block, Opposite to JJM medical College, Dental College Road. For Business Door No. 2662/2 above Ranghavendra Xerox, at 1st Floor Hall of 31'x53' with Toilet attached for Banks, Offices Computer Classes etc., Contact:
08192-260659, 99808-17240

**ಕೆಲಸಕ್ಕೆ ಬೇಕಾಗಿದ್ದಾರೆ**
ದೊಡ್ಡಬಾತಿ ಸೌತೆಕಾಯಿ ಕಂಪನಿಯಲ್ಲಿ ಕಾರ್ಮಿಕರ ಕೆಲಸಕ್ಕೆ ಸದೃಢ ಯುವಕರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ.
ಸಂಬಳ: 4590=00 ರೂ.
ಮೊ: 99162-76800
98441-00796

**WANTED**
Female Candidate required for Auditor Office having computer knowledge (Microsoft Excel & Word) B.Com.
Salary Rs. 3,000/- Contact :
94802-97820

**ಮನೆ ಬಾಡಿಗೆಗಿದೆ**
ಶಿವಕುಮಾರ ಸ್ವಾಮಿ ನಗರ, 2ನೇ ಹಂತ, 6ನೇ ಕ್ರಾಸ್, ಶರಣು ಬನ್ನಿ ನಿಲಯದಲ್ಲಿ 2 ಬೆಡ್ ರೂಂ, ಕಾರ್ ಪಾರ್ಕಿಂಗ್, ಬೋರ್‌ವೆಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗಿದೆ. ಹಾಗೂ ಸಿಂಗಲ್ ಬೆಡ್ ರೂಂ ಇರುವ ಒಂದು ಮನೆ ಬಾಡಿಗೆಗಿದೆ. ಸಂಪರ್ಕಿಸಿ :
ಟಿ. ಮಹೇಶ್
99018-27501, 96200-20496

**ಎಲ್ಲಾ ಜಾತಿಯ ವಧು-ವರರಿಗಾಗಿ**
ನಿಮ್ಮ ದಾವಣಗೆರೆಯ ವೆಬ್‌ಸೈಟ್
www.bridesquest.com ಅಥವಾ
889-229-3737ನ್ನು ಸಂಪರ್ಕಿಸಿ

**ಡ್ರಾ ಫಲಿತಾಂಶ**
ಅಮೀನ್ ಜ್ಯೂಯಲರ್ಸ್
ಇಸ್ಲಾಂಪೇಟೆ, ದಾವಣಗೆರೆ.
10.02.2012 ರಂದು ನಡೆದ 'ಬಿ' ಗ್ರೂಪ್ ವಿಜೇತ ಸಂಖ್ಯೆ 375 ವಿಜೇತರು, ಶಶಿಕುಮಾರ್ ಮುಂದಿನ ತಿಂಗಳು 11.03.2012 ರ ಭಾನುವಾರ ಬಂಪರ್ ಡ್ರಾ ನಡೆಸಲಾಗುವುದು.

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ, ವಿದ್ಯಾನಗರ, 1ನೇ ಬಸ್‌ಸ್ಟಾಪ್ ಹತ್ತಿರ, ನೆಲ ಮಹಡಿ, 2 ಬೆಡ್ ರೂಂ ಮತ್ತು ಕಾರ್ ಪಾರ್ಕಿಂಗ್ ಹಾಗೂ ಉತ್ತಮ ನೀರಿನ ಸೌಲಭ್ಯವಿರುವ ಮನೆ ಖಾಲಿ ಇರುತ್ತದೆ.
94806-94130, 98447-48766

**ಹೊಸ ಮನೆ ಲೀಸ್‌ಗೆ ಇದೆ**
ಹೊಚ್ಚ ಹೊಸ ಮನೆ ತಕ್ಷಣವೇ ಲೀಸ್‌ಗೆ ಇದೆ. 30X40 ಸೈಜಿನ ಸಂಪೂರ್ಣ ವಾಸ್ತು ಇರುವ, ಮುನ್ಸಿಪಲ್ ಮತ್ತು ಬೋರ್‌ವೆಲ್ ನೀರಿನ ಸೌಕರ್ಯ, ಡಬಲ್ ಬೆಡ್ ರೂಂಗಳು ಇರುವ ಮನೆ ಬಸವೇಶ್ವರ ಬಡಾವಣೆ ಹೋಟೆಲ್ ಸಾಯಿ ಇಂಟರ್‌ನ್ಯಾಷನಲ್ ಹಿಂದುಗಡೆ ಸಂಪರ್ಕಿಸಿ :
99011-18444

**JOB OPENING**
For Non Voice Process Education Qualification 10+, Basic Computer Knowledge, Minimum 25wpm Typing speed. walk in Interview Mondy, Tuesday.
Time : 10.00 am to 03.00 pm.
93799-22414, 98442-93035

**ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧ ಅಂಗಡಿಯಲ್ಲಿ ಔಷಧಗಳನ್ನು ಪ್ಯಾಕ್ ಮಾಡಲು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ : 20 ರಿಂದ 25 ವರ್ಷದವರಿರಬೇಕು. ಭೇಟಿಯ ಸಮಯ : ಸಂಜೆ 6.30 ರಿಂದ 7.30 ರವರೆಗೆ.
ವಿಳಾಸ : ಶ್ರೀ ಗುರು ಎಂಟರ್‌ಪ್ರೈಸಸ್
ಡೋ.ನಂ. 579, 6ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-4.

**ಬೇಕಾಗಿದ್ದಾರೆ**
ಲಾಡ್ಜ್ ನಲ್ಲಿ ರೂಂ ಬಾಯ್ ಮತ್ತು ಸೂಪರ್ ವೈಜರ್ ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ. ನೈಟ್ ಡ್ಯೂಟಿ ಮಾಡುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
78991-36077

**ಸೈಟು, ಮನೆಗಳು ಮಾರಾಟಕ್ಕಿವೆ**
S.S. ಲೇಔಟ್‌ನಲ್ಲಿ 30X40ರ 2 ಸೈಟು, ಜಯನಗರ, ಸ.ನಂ. 5ರಲ್ಲಿ ಸೈಟು ಮಾರಾಟಕ್ಕೆ, ಆಫೀಸ್, ಅಂಗಡಿಗೆ ಅನುಕೂಲವಾದ ಮಳಿಗೆಗಳು ಬಾಡಿಗೆಗೆ ಇವೆ. ವಿಚಾರಿಸಿ:
96117-43256, 99643-45281

**Job Vacant**
SSLC Pass / Fail.
Veeresh ENT Hospital
3rd Main Rd, P.J.Extn., Dvg.

**ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿಯ ಒಂದು ಬೆಡ್ ರೂಂ, ಬೋರ್‌ವೆಲ್ ಮತ್ತು ಮುನಿಸಿಪಲ್ ನೀರಿನ ಸೌಕರ್ಯವಿರುವ ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ : 'ಸಿದ್ದಿಪ್ರಿಯ' ಬಸವೇಶ್ವರ ಬಡಾವಣೆ, ಸಾಯಿ ಹೋಟೆಲ್ ಹಿಂಭಾಗ, ನೀರಿನ ಟ್ಯಾಂಕ್ ಹತ್ತಿರ, ದಾವಣಗೆರೆ. (ಸಸ್ಯಹಾರಿಗಳಿಗೆ ಮಾತ್ರ)
98445-08222

**ಬೇಕಾಗಿದ್ದಾರೆ**
ರಿಟೇಲ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ. ಪದ್ಮ ಮೆಡಿಕಲ್ II ಮೇನ್ ರೋಡ್ ಜಾಲಿನಗರ ಹೋಲ್ ಸೇಲ್ ಔಷಧಿ ಅಂಗಡಿಯಲ್ಲಿ ಆರ್ಡರ್ ಮತ್ತು ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ.
ಸನ್ಮತಿ ಫಾರ್ಮಾ, II ಮೇನ್ ಜಾಲಿನಗರ
99805-32781/98458-40604

**ಮನೆ ಮಾರಾಟಕ್ಕೆ ಇದೆ**
ನಿಟುವಳ್ಳಿ ಹೊಸ ಬಡಾವಣೆಯ ಕಾಂ. ಲೆನಿನ್ ನಗರದ 7ನೇ ತಿರುವಿನಲ್ಲಿ ಮಸೀದಿ ಹತ್ತಿರ ಎಲ್ಲಾ ಸೌಕರ್ಯವಿರುವ ವಾಸ್ತು ಪ್ರಕಾರ ಕಟ್ಟಿಸಿರುವ ಉತ್ತರ ಮುಖದ ಡಬ್ಬಲ್ ಬೆಡ್ ರೂಂ ಗಳಿರುವ ಆರ್‌ಸಿಸಿ ರೂಫಿಂಗ್ ಮನೆ ಹಾಗೂ ಮೊದಲನೇ ಮಹಡಿಯಲ್ಲಿ ಸಿಮೆಂಟ್ ಶೀಟ್ ರೂಫಿಂಗ್ ಇರುವ ಸಿಂಗಲ್ ಬೆಡ್ ರೂಂ ಮನೆ ಮಾರಾಟಕ್ಕಿದೆ. ಆಸಕ್ತರು ಮಧ್ಯಾಹ್ನ 1 ರಿಂದ 4 ಗಂಟೆಯವರೆಗೆ ಸಂಪರ್ಕಿಸಿ:
ಮೊ. 80957-72509
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಮನೆ ಬಾಡಿಗೆಗೆ ಅಥವಾ ಲೀಸ್‌ಗೆ ಇದೆ**
ಹದಡಿ ರೋಡ್, ಕೆ.ಹೆಚ್. ರಂಗನಾಥ ಬಡಾವಣೆಯಲ್ಲಿ ಅಟ್ಯಾಚ್ಡ್ ಬಾತ್‌ರೂಂ ಇರುವ ಎರಡು ಬೆಡ್‌ರೂಂ ಗ್ರೌಂಡ್ ಫ್ಲೋರ್‌ನ ಸುಸಜ್ಜಿತ ಮನೆ ಬಾಡಿಗೆಗೆ ಅಥವಾ ಲೀಸ್‌ಗೆ ಇದೆ.
94494-34400 ಜೆ.ಕೆ. ಬಕ್ಕಪ್ಪ

**ಮನೆ ಮಾರಾಟಕ್ಕಿದೆ**
ಬಸವೇಶ್ವರ ನಗರ, Water Tank ಎದುರು, 2 ಬೆಡ್ ರೂಂ, 15X40 ಅಳತೆಯ ದಕ್ಷಿಣಕ್ಕೆ ಬಾಗಿಲು ಇರುವ ಮನೆ ಮಾರಾಟಕ್ಕಿದೆ.
98445-30576

**For Rent At P.J.Extension**
Commercial / Residential Houses - 3 Bed - 2 Bed Room. Contact Personally Before 8 am & After 8 pm. Door No. 716, 9th Main, P.J.Extn.,Dvg.

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ. ಬಿ ಬ್ಲಾಕ್ ಡೋರ್‌ನಂ. 3176, 2ನೇ ಕ್ರಾಸ್, 10ನೇ ಮೇನ್ (ಶಾಮನೂರು ಶಿವಶಂಕರಪ್ಪನವರ ಮನೆ ಹತ್ತಿರ) 3 ಬೆಡ್‌ರೂಂ, ಬೋರ್‌ವೆಲ್ ಹಾಗೂ ಮುನಿಸಿಪಲ್ ನೀರಿನ ಸೋಲಾರ್, ಕಾರ್ ಪಾರ್ಕಿಂಗ್ ವ್ಯವಸ್ಥೆಯಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ : 97412-01427

**ಮನೆ ಲೀಸ್‌ಗೆ ಇದೆ**
ಆಂಜನೇಯ ಬಡಾವಣೆ, ಡೋರ್ ನಂ. 1810/86, 17ನೇ ಕ್ರಾಸ್, ಸಿದ್ದೇಶ್ವರ ಕಾಲೇಜ್ ಹತ್ತಿರ, ಸಿಂಗಲ್ ಬೆಡ್ ರೂಂ, ಬೋರ್ ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಕರ್ಯವಿರುವ ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ :
96324-38742

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯ ಬಿಲ್ಲಿಂಗ್ ಸೆಕ್ಷನ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಆಶೂಜಿ ಡಿಸ್ಟ್ರಿಬ್ಯೂಟರ್ಸ್
ಗಡಿಯಾರ ಕಂಬದ ಹತ್ತಿರ, ದಾವಣಗೆರೆ.

**ರ್‍ಯಾಕ್ ಮಾರಾಟಕ್ಕಿವೆ**
ರೆಡಿಮೇಡ್ ಬಟ್ಟೆ, ಕಿರಾಣಿ, ಪಾತ್ರೆ ಅಂಗಡಿಗೆ ಬೇಕಾಗುವ ಹೊಸ ರ್‍ಯಾಕುಗಳು ಮಾರಾಟಕ್ಕಿವೆ ಸಂಪರ್ಕಿಸಿ :
ಮೊ : 99640-22557

**ಮನೆ ಲೀಸ್‌ಗೆ ಇದೆ**
ಕೆ.ಟಿ.ಜೆ. ನಗರ 18ನೇ ಕ್ರಾಸ್, ಎರಡು ಗಣಪತಿ ಗುಡಿ ಮಧ್ಯೆ ಕೆ.ಇ.ಬಿ. ಟ್ರಾನ್ಸ್‌ಫಾರ್ಮರ್ ಕಂಬದ ಎದುರು 3ನೇ ಮನೆ ಮುಂದೆ ಬೋರ್ ತೆಂಗಿನ ಮರ ಇದೆ ಡೋ.ನಂ. 352/1
95353-39172, 94813-59829, 99452-51995

**ತಕ್ಷಣ ಬೇಕಾಗಿದ್ದಾರೆ**
ಪ್ರತಿಷ್ಠಿತ ಬೇಕರಿಯಲ್ಲಿ ನುರಿತ ಮುಖ್ಯ ಕೆಲಸಗಾರರು (Main Worker) ಬೇಕಾಗಿರುತ್ತಾರೆ. ಆಕರ್ಷಕ ಸಂಬಳ ಹಾಗೂ ವಸತಿ ಅನುಕೂಲವಿರುತ್ತದೆ.
89700-11323, 91413-20434

**ನೇರ ಪರೀಕ್ಷೆಗಳು**
BA, B.Com, BBA, BCA, B.Sc, MA, M.Com, M.Sc, MBA, Diploma, B.Tech, M.Tech, SSLC, PUC
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ.
ಮಾನಸ ಗಂಗೋತ್ರಿ ವಿದ್ಯಾಸಂಸ್ಥೆ (ರಿ.)
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
99866-60925, 93790-89875

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಜೀವನ್ ಭೀಮಾ ನಗರ ಸರಸ್ವತಿ ಬಡಾವಣೆ, ಡಾಬಾ ಸ್ಟಾಪ್ ಒಳಗಡೆ ಭಾಗ, 2ನೇ ಕ್ರಾಸ್‌ನಲ್ಲಿ, ಎ.ಇ.ಹೆಚ್. ಬೋರ್‌ವೆಲ್ 24 ಗಂಟೆ ನೀರಿನ ಸೌಕರ್ಯ 30X50ರ ಎರಡು ಬೆಡ್ ರೂಂ ಕಾರ್ ಪಾರ್ಕಿಂಗ್ ಇರುವ ಮನೆ ನಂ. 1648/74, ನಿಸರ್ಗ ಬಾಡಿಗೆಗೆ ಇದೆ. ಸಂಪರ್ಕಿಸಿ:
Mob : 99004-22106

**ಜಗಳೂರಿನಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
ನಟರಾಜ ಟಾಕೀಸ್ ಹಿಂಭಾಗ, ಹೊಸ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ.
98455-81443

**TECH MINDS**
50% Discount on All Computer & Education Courses. Tution For BCA, MCA & Engineering. Contact :
91646-48109, 99805-72567
Tel No. 08192-233042

**ಹೊಸ ಮನೆ ಮಾರಾಟಕ್ಕಿದೆ/ಲೀಜ್‌ಗಿದೆ**
ಅಶೋಕ ನಗರದ 20X30 ಡಬಲ್ ಬೆಡ್ ರೂಂ, 25X30 ನಾಲ್ಕು ಬೆಡ್ ರೂಂ. ಕಾರ್ಪೊರೇಷನ್ ನೀರು, ಕೆಂಪು ಮಣ್ಣು, ಫಿಲ್ಲರ್ ನೆಲವುಳ್ಳ ಮನೆಗಳು ಮಾರಾಟಕ್ಕಿವೆ. ಬ್ಯಾಂಕ್ ಸಾಲದ ಸೌಲಭ್ಯವಿದೆ. ಸಂಪರ್ಕಿಸಿ :
ಈಶಣ್ಣ ಯರಗಲ್
95915-03444

**ಮನೆ ಲೀಸ್/ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್ ಡೋರ್ ನಂ. 6917, ಶಾಮನೂರು ರಸ್ತೆ, ಬಿ.ಎಸ್. ಚನ್ನಬಸಪ್ಪ ಮನೆ ಹಿಂಭಾಗ, 4ಬೆಡ್ ರೂಂ ಅಟ್ಯಾಚ್ ಬಾತ್, ಕಾರ್, ಸ್ಕೂಟರ್ ಪಾರ್ಕಿಂಗ್ ಇರುವ ಮೊದಲ ಮಹಡಿ ಮನೆ ಲೀಸ್ ಅಥವಾ ಬಾಡಿಗೆಗಿದೆ. ವಿಚಾರಿಸಿ :
94487-28935

**House for Rent**
ಸಿದ್ದವೀರಪ್ಪ ಬಡಾವಣೆ 6ನೇ ಕ್ರಾಸ್, ಗ್ರೌಂಡ್ ಫ್ಲೋರ್‌ನಲ್ಲಿರುವ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್ ನೀರಿನ ಸೌಕರ್ಯವಿದೆ. ಸಂಪರ್ಕಿಸಿ :
93411-68432, 80503-49784

**ರೂಂ ಬಾಡಿಗೆಗಿವೆ**
ದಾವಣಗೆರೆ ಶಿವಾಲಿ ಚಿತ್ರಮಂದಿರದ ಹಿಂಭಾಗದಲ್ಲಿ ವಿದ್ಯಾರ್ಥಿಗಳಿಗೆ, ಕೆಲಸಗಾರರಿಗೆ ಅನುಕೂಲವಾಗಿರುವ ಅಟ್ಯಾಚ್ಡ್ ಬಾತ್ ರೂಂ ಸೌಲಭ್ಯದ 2 ರೂಂಗಳು ಶಿವಾಲಿ ಚಿತ್ರಮಂದಿರದ ಎದುರಿನಲ್ಲಿ 3 ರೂಂಗಳು ಬಾಡಿಗೆಗಿವೆ.
ಈಶಣ್ಣ ಯರಗಲ್
95915-03444

**ಮನೆ ಲೀಸ್‌ಗೆ ಇದೆ**
ನಿಟುವಳ್ಳಿ ದುರ್ಗಾಂಬಿಕಾ ದೇವಸ್ಥಾನದ ಹತ್ತಿರ, 2 ಬೆಡ್ ರೂಂ, ಕಾರ್ ಪಾರ್ಕಿಂಗ್, ಬೋರ್‌ವೆಲ್ ಸೌಲಭ್ಯ ಇರುವ ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ :
93410-14211

**FOR SALE**
15 inch CRT Monitors-2. 1 Metal Rack. HP 1050 All in One Printer. Contact :
81051-42974

**WANTED**
1) Sales Man for Retail & Wholesale Medical Business. (2) Delivery Boys for whole Sale Medicals. (3) Computer Operator Lady. Having minimum Two years experience in Medical Business. Contact with Bio-data.
Rajalaxmi Pharmaceuticals.
24/2, 1st Floor, AVK College Road, Davangere.
272685, 98440-49740

**ಮನೆ ಲೀಸ್‌ಗೆ ಇದೆ**
ಶ್ರೀ ವೀರಭದ್ರೇಶ್ವರ ನಿಲಯ, # 1833/33P, ನೂತನ ಕಾಲೇಜು ಹಿಂಭಾಗ, ಎಲ್.ಐ.ಸಿ. ಕಾಲೋನಿಯಲ್ಲಿ ಸಿಂಗಲ್ ಬೆಡ್ ರೂಂವುಳ್ಳ ಮನೆ ಲೀಸ್‌ಗೆ ಇದೆ. ಸಂಪರ್ಕಿಸಿರಿ.
87229-15220, 98454-54664

**ಸೈಟ್- SITE-ಸೈಟ್**
30x35 ಸೈಟ್ ನಿಜಲಿಂಗಪ್ಪ ಬಡಾವಣೆಯಲ್ಲಿ 60 ಅಡಿ ರಸ್ತೆಗೆ.
94813-63811

**ಮನೆ ಬಾಡಿಗೆಗೆ ಇದೆ**
ವಿನೋಬನಗರ 1ನೇ ಮೇನ್ 8ನೇ ಕ್ರಾಸ್‌ನಲ್ಲಿ ಮೊದಲನೇ ಮಹಡಿಯಲ್ಲಿ ಅಟ್ಯಾಚ್ಡ್ ಬಾತ್ ರೂಂ, 2 ಬೆಡ್ ರೂಂ, ಕಾರ್ಪೊರೇಷನ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ ಇದೆ.
97394-97437, 98451-63881

**ಸೈಟ್... ಸೈಟ್... ಸೈಟ್...**
20x30 ಕಾರ್ನರ್ ಸೈಟ್ ಕೇವಲ
1 ಲಕ್ಷದ 99 ಸಾವಿರ
ಪಕ್ಕಾ ಡೋರ್ ನಂಬರ್ ಸೈಟ್. 15x40, 40x30, 30x40 ರಿಂಗ್ ರಸ್ತೆ, ಹೊಸ ಆರ್‌ಟಿಓ ಹತ್ತಿರ.
97407-69618

**ಮಾರಾಟಕ್ಕಿದೆ**
ಉತ್ತಮ ಸ್ಥಿತಿಯಲ್ಲಿರುವ ಫ್ಲೆಕ್ಸ್ ಪ್ರಿಂಟಿಂಗ್ ಮೆಷಿನ್ ಮಾರಾಟಕ್ಕಿದೆ.
ಸಂಪರ್ಕಿಸಿ : 94480-29277

**ವಿದೇಶ ಪ್ರವಾಸ**
Thailand Trip Available @28,500/- from March 5 - 15. Dubai & Malyasia Tour also available. Interested Person Contact.
94489-44477

**House for Rent**
ಡಬಲ್ ಬೆಡ್ ರೂಮ್, Attatch, Veg, 1st Floor. 'ಸುವರ್ಣ', # 518/47, 2ನೇ 'ಬಿ' ಕ್ರಾಸ್, 2ನೇ ಮೇನ್, 2ನೇ ಸ್ಟೇಜ್, ಶಿವಕುಮಾರ ಸ್ವಾಮಿ ಬಡಾವಣೆ.
98453 52371

**UPS, SOLAR CC TV, (Cameras)**
V.K. Enterprises
3rd Main Road, Vinoba Nagar, Davangere.
93410 11962, 97310 63088

**ಶಾಲೆ ಬಿಟ್ಟಿದ್ದೀರಾ?**
S.S.L.C. ನೇರ ಪರೀಕ್ಷೆ 7, 8, 9 ಪಾಸ್/ಫೇಲ್.
SSLC/II PUC (KSOU) Karnataka State Open University Mysore.
BA/BCom/Bsc/BBM/BCA/MPHIL/B.Tech/BE.PHD/BEd/MEd/CPED/BPEd/D.Ed/LLB/LLM/Diploma/DMLT/NTC/ITI/& All Courses.
ಮಹ್ಮಡನ್ ಎನ್‌ಟಿಸಿ ಕಾಲೇಜ್
93411-19195, 99800-32237

**DIPLOMA TUTIONS**
M1, M2, Science, Electronics & CS Subject.
Infinity Tech Education
93413-83275, 93797-82181

**Su-Kam** Ek nayi soch
UPS Inverters, Battery
850VA+100AH+Trally
Rs. 11,499/- * CA
City Electronics Systems
# 212/1B, 3rd Main, P.J.Extn., Davangere.
98453-52371
We required Dealers

**D.C.M. LAYOUT ನಲ್ಲಿ ಸೈಟುಗಳು ಮಾರಾಟಕ್ಕಿವೆ.**
30X40 ಪಶ್ಚಿಮದ ಎರಡು ಸೈಟುಗಳು ಮಾರಾಟಕ್ಕಿವೆ.
ಐನಳ್ಳಿ, ಚನ್ನಬಸಪ್ಪ
ರಿಯಲ್ ಎಸ್ಟೇಟ್ ಏಜೆಂಟ್
99166-12110

**ENGINEERING TUTIONS**
M1, M2, M3, M4, Field Theory, Electronic Circuits, Signals & Systems. CS & IS Subject.
Infinity Tech Education
93413-83275, 93797-82181

**LUMINOUS UPS**
UPS
Distributors : LUMINOUS UPS
Contact :
Premier Communications
#369/6, 4th Main,9th Cross, P.J.Extn., Beside Nandi Hospital, Davangere-20.
Divakar - 98806-99666
* Conditions apply

**ಬಾಡಿಗೆಗಿದೆ**
ಬಸಾಪುರ ರಸ್ತೆ, ಬಂಬೂ ಬಜಾರ್ ಹಿಂಭಾಗದಲ್ಲಿ 140x45, 25x60 ಅಳತೆಯ ಎರಡು ಗೋಡಾನ್‌ಗಳು ಮತ್ತು ಅವುಗಳ 3 ಎಕರೆ ಜಮೀನು ಹಾಗೂ ಪಿ.ಜೆ. ಬಡಾವಣೆಗೆ 8th Main, 18ನೇ ಕ್ರಾಸ್‌ನಲ್ಲಿ ನೆಲ ಮತ್ತು ಮೊದಲನೆ ಮಹಡಿ 920x920 ಕಟ್ಟಡ ಬಾಡಿಗೆಗಿದೆ.
94480-28103

**ಬಾಡಿಗೆ ಮನೆ ಬೇಕಾಗಿದೆ**
ಪೂರ್ವ/ಉತ್ತರಕ್ಕೆ ಗ್ರೌಂಡ್ ಫ್ಲೋರ್ ಮನೆ ಬೇಕಾಗಿದೆ. ಬಾಡಿಗೆ ರೂ. 4000/- (MCC 'B' ಬ್ಲಾಕ್ ಸುತ್ತಮುತ್ತ) ಸಂಪರ್ಕಿಸಿ :
98862-29378

**Business Opportunity**
Good News - India's No. 1 Business concept now in Davangere. We are looking for 5 Smart Ambitious people. Changing your life is our Commitment. Car & Training will be provided.
94489 44477, 94482-29862, 97400-83009

**ಶಿಕ್ಷಕರು ಬೇಕಾಗಿದ್ದಾರೆ**
ಬೆಳಿಗ್ಗೆ 6 ರಿಂದ 8, ಸಂಜೆ 5.30 ರಿಂದ 8.30ರ ವರೆಗೆ 1 ರಿಂದ 10ನೇ ತರಗತಿ ವರೆಗೆ ಮಕ್ಕಳಿಗೆ ಪಾಠ ಹೇಳಲು B.Ed/D.Ed. ಆದ ಶಿಕ್ಷಕರು ಬೇಕಾಗಿದ್ದಾರೆ. ಸಂಪರ್ಕಿಸಿ :
ಬೆಸ್ಟ್ ಕೋಚಿಂಗ್ ಸೆಂಟರ್
ಹಳೇ RTO ಹತ್ತಿರ, MCC 'B' ಬ್ಲಾಕ್
87220-00333

**ಬೇಕಾಗಿದ್ದಾರೆ**
ಮಾರಾಟ ಪ್ರತಿನಿಧಿಗಳು
ಜಗಳೂರು ತಾಲ್ಲೂಕಿಗೆ ಅನುಭವವುಳ್ಳ ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಕಡ್ಡಾಯ.
ಮಹಾಂತ ಮೋಟಾರ್ಸ್, ದಾವಣಗೆರೆ
98453-82268

**ಮನೆ ಬಾಡಿಗೆಗೆ ಇದೆ**
ಡಿ.ಸಿ.ಎಂ.ಟೌನ್‌ಶಿಪ್ ಪಾರ್ಕ್ ಎದುರು ಕಾರ್ನರ್ ಸೈಟ್ ನ ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ವಿಚಾರಿಸಿ :
99642-61422

**ಬೇಕಾಗಿದ್ದಾರೆ**
P.U.C. ಪಾಸಾದ 30 ವರ್ಷ ಒಳಗಿನ ಪುರುಷ/ಮಹಿಳೆಯರು ನ್ಯುರೋಥೆರಪಿ ಕ್ಲಿನಿಕ್‌ನಲ್ಲಿ ಸಹಾಯಕರಾಗಿ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ : ಫೋ.: 99726 00713

**ತಕ್ಷಣ ಮನೆ ಲೀಸ್‌ಗೆ ಬೇಕಾಗಿದೆ**
ಪೂರ್ವ ಹಾಗೂ ಉತ್ತರ ದಿಕ್ಕಿಗೆ 1,2 ಬೆಡ್‌ರೂಂ (2 ಲಕ್ಷಕ್ಕೆ)
80503-99712, 84312-99888
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**FOR RENT**
A two bedroom House at P.J. Extension, 8th Main, and hall measuring about 800 sq.ft. which is ideal for Office, Service Centre, Teaching Institution, is available for Rent. Contact :
98809-00806

**ವಾಹ್ ಕಾಫಿ !! ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ಲಿಂಗಾಯತ**
ಹೊಸ ನೋಂದಾವಣೆಗೆ ಸಂಪರ್ಕಿಸಿ
12.2.2012ರ ಭಾನುವಾರ
ಸಮಯ : ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ
ಸ್ಥಳ : ಶಾಂತಿ ಪಾರ್ಕ್, ದಾವಣಗೆರೆ. 98861-70600
ಕರ್ನಾಟಕದ ಎಲ್ಲಾ ಜಿಲ್ಲೆಗಳನ್ನೊಳಗೊಂಡ ವಧು-ವರರು ನೋಂದಾಯಿಸಿರುವ ಅಂಕಿ ಅಂಶ ವಿವರ ಕೆಳಗಿನಂತಿದೆ

| | M | F |
|---|---|---|
| ಪಂಚಮಸಾಲಿ | 607 | 965 |
| ಸಾಧು ಲಿಂಗವಂತರು | 86 | 84 |
| ಬಣಜಿಗ | 320 | 301 |
| ಜವಳಿ | 42 | 38 |
| ನೊಳಂಬ | 18 | 31 |
| ರೆಡ್ಡಿ ಲಿಂಗಾಯತರು | 45 | 34 |
| ಜಂಗಮರು | 280 | 320 |
| ಮರು ಮದುವೆ | 38 | 65 |
| ಡಾ. MBBS, BAMS, BDS | 341 | 181 |
| ಡಾ. MD/MS | 42 | 16 |
| Engg. All | 556 | 388 |
| P.G. (MSC., MBA, MA) | 314 | 548 |
| Degree | 400 | 124 |

ಬೆಂಗಳೂರು/ಹೊರದೇಶ ಮತ್ತು ಸಿಟಿಗಳಲ್ಲಿ ನೌಕರಿ ನಿರತರು ಇರುತ್ತಾರೆ. ಇಂಟರ್‌ನೆಟ್ ಸೌಲಭ್ಯವಿರುತ್ತದೆ

**ಶ್ರೀ ಶಿವಗಂಗಾ ಏಜೆನ್ಸೀಸ್**
MICROTEK HOME UPS
2 Years Warranty
ಪ್ರೊ|| ಬಿ.ದೊಡ್ಡಬಸಪ್ಪ, ಎಲೆಬೇತೂರು ಆರ್.ಎಂ.ಸಿ. ಲಿಂಕ್ ರಸ್ತೆ, ದೇವರಾಜ ಬೋರ್‌ವೆಲ್ ಎದುರು, ದಾವಣಗೆರೆ.
Mob: 98440 21918, 96114 83335

**WANTED**
Auto CAD draftsman required for Civil Engineering Projects in Davangere. Interested can send CV to 2004tec@gmail.com.
Contact : 94833-22547

**Whirlpool Elantra UPS**
Exchange your old UPS & Get Upto Rs. 5000 Off *
Authorised Distributor
BHAARI UDYOG
# 1065/4, Bulagannavar Complex, 5th Cross K.B. Extension, DAVANGERE - 577 002
Mob: 98802 84841
*Conditions Apply

**ಬೇಕಾಗಿದ್ದಾರೆ**
ಹರಿಹರ ಸುತ್ತಮುತ್ತ ಫೀಲ್ಡ್ ಕೆಲಸಕ್ಕೆ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನ ಇದ್ದವರಿಗೆ ಅವಕಾಶ. ಒಟ್ಟು 4 ಜನಕ್ಕೆ ಅವಕಾಶ ಇದೆ. ಸಂಪರ್ಕಿಸಿ:
08192-225537
93410-90299, 87625-68003

**EXIDE BATTERY**
For your Vehicle & UPS
BHAARI UDYOG
# 1065/4, Bulagannavar Complex, 5th Cross K.B. Extension, DAVANGERE - 577 002
Mob: 98802 84841

**2 ಲಕ್ಷ 50 ಸಾವಿರಕ್ಕೆ**
15x40- 30x40
ಪಕ್ಕಾ ಡೋರ್ ನಂಬರ್ ಸೈಟ್
ರಿಂಗ್ ರೋಡ್ ಪಕ್ಕ
94813-63811